ಸಂಪುಟ: 14 Volume | ಸಂಚಿಕೆ: 14 Issue | ಪುಟಗಳು 08 Pages | ಗುರುವಾರ 16 ಏಪ್ರಿಲ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

**ಬೆಳಗು**
ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು.
–ತೀ.ನಂ.ಶ್ರೀ.

ವಚನ ಜಾತ್ರೆ: 75 ಸೈನಿಕರಿಗೆ ಗೌರವ ಸನ್ಮಾನ 6 | 16 ಕೋಟಿ ವಂಚನೆ ಆರೋಪಿ ವಶಕ್ಕೆ 7 | ಬಸ್ ನಿಲ್ದಾಣದಲ್ಲಿ ಸ್ವಚ್ಛತೆ ಮರೀಚಿಕೆ 8

## ಗುಂಡು ಹೊಡೆದು ಉದ್ಯಮಿಯ ಕೊಲೆ

**ವಿಜಯಪುರ:** ರಿಯಲ್ ಎಸ್ಟೇಟ್ ಉದ್ಯಮಿ, ಗ್ರಾ.ಪಂ.ಮಾಜಿ ಸದಸ್ಯ ಚಲಿಸುತ್ತಿದ್ದ ಜೀಪಿಗೆ ಟಿಪ್ಪರ್ ಡಿಕ್ಕಿ ಹೊಡೆಸಿ, ಬಳಿಕ ಗುಂಡು ಹೊಡೆದು ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ. ಈ ಘಟನೆ ನಗರ ಹೊರ ವಲಯದ ಅಲಿಯಾಬಾದ್ನಲ್ಲಿ ನಡೆದಿದೆ. ಅಲಿಯಬಾದ್ ಗ್ರಾ.ಪಂ.ಮಾಜಿ ಸದಸ್ಯ, ಗೊಡಂದಡ್ಡಿ ಗ್ರಾಮದ ರಾಜು ಬಾಪು ಖರೆ (48) ಹತ್ಯೆಯಾದವರು. ಕೊಲೆಗೆ ಕಾರಣವೇನೆಂಬುದು ಇನ್ನೂ ತಿಳಿದುಬಂದಿಲ್ಲ. ಈ ಸಂಬಂಧ ತನಿಖೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ವಿಜಯಪುರ ಎಸ್ಪಿ ಲಕ್ಷ್ಮಣ ನಿಂಬರಗಿ ಹಾಗೂ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ.

## ಪ್ರಾಥಮಿಕ ಸದಸ್ಯತ್ವದಿಂದ ಸಸ್ಪೆಂಡ್

**ಬೆಂಗಳೂರು:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಅಮಾನತುಗೊಳಿಸಲಾಗಿದೆ. ಆಂತರಿಕ ಶಿಸ್ತು ಕಾಪಾಡುವ ನಿಟ್ಟಿನಲ್ಲಿ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಅಮಾನತುಗೊಳಿಸಿ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆದೇಶಿಸಿದ್ದಾರೆ.

## ಲಾರಿಗೆ ಡಿಕ್ಕಿ: ಮೂವರು ಸಾವು

**ಸೇಡಂ:** ತಾಲೂಕಿನ ಕೊಂಕನಹಳ್ಳಿ ಹಾಗೂ ಶೆಟ್ಟಿ ಹೂಡಾ ಗ್ರಾಮಗಳ ಮಧ್ಯದ ರಾಜ್ಯ ಹೆದ್ದಾರಿಯಲ್ಲಿ ಲಾರಿಗೆ ಎರಡು ದ್ವಿಚಕ್ರ ವಾಹನಗಳು ಡಿಕ್ಕಿಯಾಗಿದ್ದರಿಂದ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಈ ಘಟನೆ ರಾತ್ರಿ 11 ಗಂಟೆಗೆ ನಡೆದಿದೆ.

ಸೇಡಂನ ಸಂಜು (28) ಮತ್ತು ಕಾಶಿನಾಥ (18) ಹಾಗೂ ಮಳಖೇಡದ ಮಹೇಶ (33) ಮೃತರು. ಈ ಬಗ್ಗೆ ಸೇಡಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ಬೇಡಿಕೆ: ಜಿಲ್ಲಾ ಸಮಿತಿ ಪ್ರತಿಭಟನೆ

**ಕಲಬುರಗಿ:** ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸರಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ಹಾಸ್ಟೆಲ್, ವಸತಿ ಶಾಲಾ ಹೊರಗುತ್ತಿಗೆ ನೌಕರಿಗೆ ಕನಿಷ್ಠ ವೇತನ 25,714 ರೂ.ಜಾರಿ ಮಾಡಬೇಕು, ಬೀದರ್ ಮಾದರಿ ಸೋಸಾಯಿಟಿ ಪ್ರಾರಂಭಿಸಬೇಕು, ಸಿಬ್ಬಂದಿ ಕಡಿತ ಆದೇಶ ಹಿಂಪಡೆಯಬೇಕು, ವಾರಕ್ಕೊಂದು ರಜೆ ಕಡ್ಡಾಯವಾಗಿ ಮಂಜೂರು ಮಾಡಬೇಕು, ಏಪ್ರಿಲ್, ಮೇ ತಿಂಗಳಲ್ಲಿ ರಜೆ ಸಮೇತ ವೇತನ ನೀಡಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ.

## ದೂರೆ ಮಾಡಿದ್ದಕ್ಕೆ ತಲೆ ದಂಡ ಇಲ್ಲವೇ..?

• ಮಲ್ಲಮ್ಮ ನುಡಿ ವಾರ್ತೆ ತುಮಕೂರು

ಸಿಎಂ ಸಿದ್ದರಾಮಯ್ಯ ಪರವಾಗಿ ಧ್ವನಿ ಎತ್ತಿದ ನಾಯಕರನ್ನೇ ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಕೆಎನ್ ರಾಜಣ್ಣ ದೂರಿದ್ದು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ಕಾಂಗ್ರೆಸ್ ಪಕ್ಷ ಶಿಸ್ತಿನ ಪಕ್ಷ. ಈ ಹಿಂದೆ ಸದ್ಗುರು, ರಾಹುಲ್ ಗಾಂಧಿ ಯಾರು, ನನಗೆ ಗೊತ್ತಿಲ್ಲ ಎಂದು ಹೇಳಿದ್ದರು. ಇದೀಗ ರಾಹುಲ್ ಗಾಂಧಿಯೇ ಸದ್ಗುರು ಜೊತೆ ಹೋಗಿ ಕುಳಿತುಕೊಳ್ಳುತ್ತಾರೆ. ಇದು ಶಿಸ್ತು ಮೀರಿದಂತೆ ಅಲ್ವಾ ಎಂದು ಪ್ರಶ್ನೆ ಮಾಡಿದ್ದಾರೆ. ದೂರೆ ಮಾಡಿದ್ದಕ್ಕೆ ದಂಡ ಇಲ್ಲ ಅನ್ನೋ ಗಾದೆ ಮಾತಿದೆ. ಹಾಗೆಯೇ ನಡೆಯುತ್ತಿದೆ ಎನ್ನುವ ಮೂಲಕ ಕಾಂಗ್ರೆಸ್ ಶಿಸ್ತುಕ್ರಮದ ವಿರುದ್ಧ ಅಸಮಾಧಾನ ಹೊರಹಾಕಿದರು.



ನಾನು ಪಕ್ಷಕ್ಕಾಗಿ ದುಡಿಯುವವನು. ನಾನು ಯಾವತ್ತು ಅಧಿಕಾರ ಹುಡುಕಿಕೊಂಡು ಹೋದವನಲ್ಲ. ಅಧಿಕಾರ ಸಿಕ್ಕರೆ ಸ್ವೀಕರಿಸುತ್ತೇನೆ. ಅಧಿಕಾರದ ಲಾಭ ಬಡಜನರಿಗೆ ತಲುಪಿಸುತ್ತೇನೆ. ಅದನ್ನ ಸ್ವಂತಕ್ಕೆ ಬಳಸಿಕೊಳ್ಳಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ.

## ಮುಖ್ಯಮಂತ್ರಿ ಪಟ್ಟಿಯಲ್ಲಿ 10 ಹೆಸರು..!

• ಮಲ್ಲಮ್ಮ ನುಡಿ ವಾರ್ತೆ ಮಂಡ್ಯ

ನಮಗೆ ಅಧಿಕಾರಕ್ಕೆ ಬರುವುದು ಮುಖ್ಯವೇ ಹೊರತು ಸಿಎಂ ಯಾರಾಗಬೇಕು ಎಂಬುದು ಮುಖ್ಯವಲ್ಲ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿದ್ದಾರೆ.

ಮಂಡ್ಯದಲ್ಲಿ ಮಾತನಾಡಿದ ಅವರು, ನಮ್ಮಲ್ಲಿ ಮುಖ್ಯಮಂತ್ರಿ ಆಕಾಂಕ್ಷಿಗಳು ತುಂಬಾ ಜನರಿದ್ದಾರೆ. ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. 2028ಕ್ಕೆ ರಾಜ್ಯದಲ್ಲಿ ಜೆಡಿಎಸ್‌ಎಸ್–ಬಿಜೆಪಿ ಮೈತ್ರಿಕೂಟದ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಇದರಲ್ಲಿ ಯಾವ ಅನುಮಾನವೂ ಇಲ್ಲ. ಸಂಸತ್ತಿನಲ್ಲೂ ಜೆಡಿಎಸ್‌ಗೆ ಮೂರ್ನಾಲ್ಕು ಸ್ಥಾನಗಳನ್ನು ನೀಡಲಾಗಿದೆ. ಅದೇ ರೀತಿ ರಾಜ್ಯದಲ್ಲೂ ಮೈತ್ರಿ ಮುಂದುವರಿಯಲಿದೆ



ಎಂದು ಪ್ರತಿ ಪಾದಿಸಿದ್ದಾರೆ. ಸಿಎಂ ಯಾರಾಗಬೇಕು ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ನಿತಿನ್ ನಬೀನ್ ಅವರು ನಿರ್ಧರಿಸುತ್ತಾರೆ. ನನ್ನನ್ನೂ ಸೇರಿದಂತೆ ಈಗಾಗಲೇ 10 ಮಂದಿಯ ಹೆಸರುಗಳು ಕೇಳಿಬಂದಿದೆ. ನಮಗೆ ಅಧಿಕಾರಕ್ಕೆ ಬರುವುದೇ ಮುಖ್ಯ. ಜೊತೆಗೆ ಸಿದ್ದರಾಮಯ್ಯ ನೇತೃತ್ವದ ಭ್ರಷ್ಟ ಸರ್ಕಾರ ತೊಲಗುವುದು ಮುಖ್ಯ ಎಂದಿದ್ದಾರೆ.

# ನವ ಪ್ರತಿಜ್ಞೆಗೆ ನಮೋ ಕರೆ

### ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟಿಸಿದ ಪ್ರಧಾನಿ ಮೋದಿ | ಮಿಂಚಿದ ಸಿಎಂ, ಮಾಜಿ ಪ್ರಧಾನಿ

• ಮಲ್ಲಮ್ಮ ನುಡಿ ವಾರ್ತೆ ಮಂಡ್ಯ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜನತೆಗೆ ಒಂಬತ್ತು ಸಮೂಹ ಪ್ರತಿಜ್ಞೆಗಳನ್ನು ತೆಗೆದುಕೊಳ್ಳುವಂತೆ ಮನವಿ ಮಾಡಿದ್ದಾರೆ. ನೀರಿನ ಸಂರಕ್ಷಣೆ, ನೈಸರ್ಗಿಕ ಕೃಷಿ, ಆರೋಗ್ಯ ಹಾಗೂ ಸೇವೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಈ ಪ್ರತಿಜ್ಞೆಗಳು ಇರಲಿ ಎಂದು ಅವರು ಕರೆ ನೀಡಿದ್ದಾರೆ. ಮಂಡ್ಯದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಕಸಿತ ಕರ್ನಾಟಕ ಮತ್ತು ವಿಕಸಿತ ಭಾರತ ಗುರಿ ಸಾಧಿಸಲು ಇದು ಸಹಾಯಕ ಎಂದಿದ್ದಾರೆ.

**ನೀರಿನ ಸಂಹರಕ್ಷಣೆಯ ಮಹತ್ವ:** ತಮ್ಮ ಆದ್ಯತೆಗಳನ್ನು ವಿವರಿಸಿದ ಪ್ರಧಾನಿ ಮೋದಿ, ಆದ್ಯತೆಯಾಗಿ ನೀರಿನ ಸಂರಕ್ಷಣೆ ಮತ್ತು ಉತ್ತಮ ನೀರು ನಿರ್ವಹಣೆ ಬಗ್ಗೆ ಮಹತ್ವ ಸಾರಿದರು. ನಂತರ ತಾಯಿಯ ಹೆಸರಿನಲ್ಲಿ ಒಂದು ಮರ ಅಭಿಯಾನದಡಿ ಮರ ನೆಡುವುದು, ಸಾರ್ವಜನಿಕ ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡುವುದರ ಬಗ್ಗೆ ವಿವರಿಸಿದ್ದಾರೆ.

**ದೇಶೀಯ ಪ್ರವಾಸೋದ್ಯಮ:** ವೋಕಲ್ ಫಾರ್ ಲೋಕಲ್ ಮೂಲಕ ಸ್ಥಳೀಯ ಉತ್ಪನ್ನಗಳನ್ನು ಉತ್ತೇಜಿಸುವುದು, ದೇಶೀಯ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವುದು, ರಾಸಾಯನಿಕರಹಿತ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳುವುದು, ಸಿರಿಧಾನ್ಯಗಳನ್ನು ಒಳಗೊಂಡ ಆರೋಗ್ಯಕರ ಆಹಾರ, ಕಡಿಮೆ ಎಣ್ಣೆ ಬಳಕೆ ಉತ್ತೇಜಿಸಲು ಕರೆ ನೀಡಿದ್ದರೆ.





### ಆರ್ಥಿಕ ನೆರವಿಗಾಗಿ ಪ್ರಧಾನಿಗೆ ಸಿಎಂ ಮನವಿ

ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಅನುದಾನ ಬಾಕಿ, ಮೇಕೆದಾಟು, ಮಹದಾಯಿ ಯೋಜನೆಗೆ ಮಂಜೂರಾತಿ, ಜಲ್ಜೀವನ್ ಮಿಷನ್ ಯೋಜನೆಯ ಬಾಕಿ ಹಣ ಬಿಡುಗಡೆ, ಬೆಂಗಳೂರು ಅಭಿವೃದ್ಧಿಗೆ ವಿಶೇಷ ಅನುದಾನ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡುವ ಘೋಷಣೆ ಸೇರಿದಂತೆ ಕೇಂದ್ರದಿಂದ ತುರ್ತಾಗಿ ಆಗಬೇಕಾಗಿರುವ ಯೋಜನೆಗಳ ಮಂಜೂರಾತಿ, ಆರ್ಥಿಕ ನೆರವಿನ ಬಗ್ಗೆ ಸಿಎಂ ಪ್ರಧಾನಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

### ಭೈರವೈಕ್ಯ ಮಂದಿರದ ವಿಶೇಷತೆ?

ಪ್ರಧಾನಿ ಅವರು ಶ್ರೀಗುರು ಭೈರವೈಕ್ಯ ಮಂದಿರವನ್ನು ಲೋಕಾರ್ಪಣೆಗೊಳಿಸಿದ್ದಾರೆ. ಇದು ಆದಿಚುಂಚನಗಿರಿ ಮಠದ 71ನೇ ಪೀಠಾಧ್ಯಕ್ಷರಾಗಿದ್ದ ಡಾ. ಬಾಲಗಂಗಾಧರನಾಥ ಸ್ವಾಮಿಯವರ ಸಮಾಧಿ ಸ್ಥಳ. ದ್ರಾವಿಡ, ಚಾಲುಕ್ಯ, ಹೊಯ್ಸಳ, ಗಂಗರ ಶೈಲಿಯ ವಿನ್ಯಾಸಗಳನ್ನು ಒಳಗೊಂಡಿರುವ ಈ ಮಂದಿರವು ಒಡಿಶಾದ ಸೂರ್ಯ ದೇಗುಲದಿಂದ ಪ್ರೇರಣೆ ಪಡೆದಿದ್ದು, 80ಕೋಟಿ ವೆಚ್ಚಮಾಡಲಾಗಿದೆ.

### ಜ್ವಾಲಾಪೀಠಕ್ಕೂ ಪೂಜೆ

ಮಂದಿರ ಉದ್ಘಾಟನೆಗೂ ಮೊದಲು ಪ್ರಧಾನಮಂತ್ರಿ ಜ್ವಾಲಾ ಪೀಠಕ್ಕೂ, ಭೈರವೇಶ್ವರ ದೇಗಲಕ್ಕೂ ಭೇಟಿ ನೀಡಿದ ಮೋದಿ ಅವರು ಪೂಜೆ ಸಲ್ಲಿಸಿದ್ದಾರೆ. ರಾಜ್ಯಪಾಲ ತಾವರ್ಚಂದ್ ಗೆಹ್ಲೋಟ್, ಎಚ್.ಡಿ. ಕುಮಾರಸ್ವಾಮಿ ಮತ್ತು ಶೋಭಾ ಕರಂದ್ಲಾಜೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ರಾಗಿ ಬಗ್ಗೆ ಮುದ್ದೆ ಬಣ್ಣನೆ, ಕುಶಲೋಪರಿ

ರಾಗಿ ಮುದ್ದೆ ಕೇವಲ ಆಹಾರವಲ್ಲ ಅದೊಂದು ಶಕ್ತಿ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಅದನ್ನು ಫೇಮಸ್ ಮಾಡಿದ್ದಾರೆಂದು ಬಣ್ಣಿಸಿದ್ದಾರೆ. ಇದೇ ವೇಳೆ ದೇವೇಗೌಡರ ಜೊತೆ ನಡೆಸಿದ ಮಾತುಕತೆ ಎಲ್ಲರ ಗಮನಸೆಳೆದುದೆ. ಕಾರ್ಯಕ್ರಮದ ವೇದಿಕೆಗೆ ಆಗಮಿಸುತ್ತಿದ್ದಂತೆ ಕುರ್ಚಿಯಲ್ಲಿ ಆಸೀನರಾಗಿದ್ದ ದೇವೇಗೌಡರಿಗೆ ಮೋದಿಯವರು ಹಸ್ತಲಾಘವ ಮಾಡಿ, ಯೋಗಕ್ಷೇಮ ವಿಚಾರಿಸಿ, ಉಭಯ ಕುಶಲೋಪರಿ ನಡೆಸಿದ್ದಾರೆ.

## ಅಭ್ಯರ್ಥಿ ಸೋಲುವ ಭಯದಿಂದ ಬಲಿಪಶು

• ಮಲ್ಲಮ್ಮ ನುಡಿ ವಾರ್ತೆ ದಾವಣಗೆರೆ



ಪಕ್ಷದಿಂದ ಅಮಾನತು ಗೊಂಡಿರುವ ಜಬ್ಬಾರ್, ಜಮೀರ್ ಖಾನ್ ಅವರನ್ನು ಪ್ರಶಂಸಿಸಿ, ರಿಜ್ವಾನ್ ಅರ್ಷಾದ್ ಮತ್ತು ಸಲಿಂ ಅಹ್ಮದ್ ಅವರು 20 ದಿನಗಳಲ್ಲಿ ಸಾಧಿಸದ್ದನ್ನು ಜಮೀರ್ ಖಾನ್ ಕೇವಲ ಎರಡು ಗಂಟೆಗಳಲ್ಲಿ ಸಾಧಿಸಿದ್ದಾರೆ ಎಂದು ಬಣ್ಣಿಸಿದ್ದಾರೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಜನಸಂಖ್ಯೆ ಹೆಚ್ಚಿರುವುದನ್ನು ಪರಿಗಣಿಸಿ, ಕಾಂಗ್ರೆಸ್‌ನ ಅಲ್ಪಸಂಖ್ಯಾತ ನಾಯಕರು ತಮ್ಮ ಸಮುದಾಯದ ನಾಯಕನಿಗೆ ಟಿಕೆಟ್ ನೀಡುವಂತೆ ಬೇಡಿಕೆ ಇಟ್ಟಿದ್ದರು. ಆದರೆ ಈಗ ಚುನಾವಣೆಯಲ್ಲಿ ಸೋಲುವ ಭಯದಿಂದ ನನ್ನನ್ನು ಬಲಿಪಶುವನ್ನಾಗಿ ಮಾಡಲಾಗುತ್ತಿದೆ ಎಂದು ಎಂಎಲ್ಸಿ ಅಬ್ದುಲ್ ಜಬ್ಬಾರ್ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಾಕಿದ್ದಾರೆ. ನಾನು ನನಗಾಗಿ ಟಿಕೆಟ್ ಕೇಳಿಲ್ಲ, ಅಲ್ಪಸಂಖ್ಯಾತ ಸಮುದಾಯದ ಯಾವುದೇ ನಾಯಕರಿಗೆ ನೀಡುವಂತೆ ಕೇಳಿದ್ದೆ. ನನ್ನ ಮಾತುಗಳನ್ನು ಪರಿಶೀಲಿಸಬಹುದಾಗಿತ್ತು, ಆದರೆ ಹಾಗೆ ಆಗಲಿಲ್ಲ.

## ವಿನಯ್ ಕುಲಕರ್ಣಿ ದೋಷಿ: ತೀರ್ಪು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಧಾರವಾಡ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣ ಸಂಬಂಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಂತಿಮ ತೀರ್ಪು ಪ್ರಕಟಿಸಿದೆ. ಈ ಪ್ರಕರಣದಲ್ಲಿ ಮಾಜಿ ಸಚಿವ ವಿನಯ್ ಕುಲಕರ್ಣಿ ಸೇರಿ 21 ಮಂದಿ ಆರೋಪಿಗಳ ಹೆಸರಿದ್ದು, ವಿನಯ್ ಕುಲಕರ್ಣಿ ದೋಷಿ ಎಂದು ನ್ಯಾಯಾಲಯ ತೀರ್ಪು ನಿಡಿದೆ. ಶಿಕ್ಷೆಯ ಪ್ರಮಾಣ ಇಂದು ಪ್ರಕಟಿಸಲಿದೆ.


ಪ್ರಕರಣದ ವಿಚಾರಣೆ ಪೂರ್ಣಗೊಳಿಸಿದ್ದ ನ್ಯಾಯಾಲಯ ಏ.9ರಂದು ತೀರ್ಪು ಪ್ರಕಟಿಸುವುದಾಗಿ ತಿಳಿಸಿತ್ತು. ತಾಂತ್ರಿಕ ಕಾರಣ, ತೀರ್ಪು ಸಿದ್ಧಪಡಿಸುವ ಪ್ರಕ್ರಿಯೆ ಮುಕ್ತಾಯವಾದ ಹಿನ್ನೆಲೆಯಲ್ಲಿ ಏ.15ಕ್ಕೆ ಮುಂದೂಡಿತ್ತು. ಇದೀಗ ನ್ಯಾಯಾಯಲಯವು ತೀರ್ಪು ಪ್ರಕಟಿಸಿದೆ. ಪ್ರಕರಣದ ಹಿನ್ನೆಲೆ: ಧಾರವಾಡದ ಜಿಪಂ ಮಾಜಿ ಸದಸ್ಯ ಯೋಗೇಶ್ ಗೌಡ ಅವರನ್ನು 2016ರ ಜೂ.15ರಂದು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಚ್ಚಿಕೊಲೆಗೈದಿದ್ದರು. ಈ ಸಂಬಂಧ ಧಾರವಾಡದ ಉಪನಗರ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದರು.

## ಶೈಕ್ಷಣಿಕ ಬರವಣಿಗೆಯ ಕೌಶಲಕ್ಕೆ ಒತ್ತು

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕರ್ನಾಟಕ ಕೇಂದ್ರೀಯ ವಿವಿಯ ಇಂಗ್ಲಿಷ್ ವಿಭಾಗವು ಏ. 17, 18 ರಂದು ಸಿಯುಕೆಯ ತರಗತಿ ಸಂಕೀರ್ಣದ ಸೆಮಿನಾರ್‌ಹಾಲ್‌ನಲ್ಲಿ ಸಂಶೋಧನಾ ವಿಧಾನ ಮತ್ತು ಶೈಕ್ಷಣಿಕ ಬರವಣಿಗೆ ಕುರಿತು ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಲಿದೆ.

ಈ ಕುರಿತ ಕರಪತ್ರವನ್ನು ಬಿಡುಗಡೆ ಮಾಡಿದ ಕುಲಪತಿ ಪ್ರೊ ಬಟ್ಟು ಸತ್ಯನಾರಾಯಣ ಅವರು ಮಾತನಾಡಿ, ಮಾನವಶಾಸ್ತ್ರ ಮತ್ತು ಭಾಷೆಗಳಲ್ಲಿನ ಸಂಶೋಧನೆಯು ಸಾಂಸ್ಕೃತಿಕ ತಿಳುವಳಿಕೆ, ವಿಮರ್ಶಾತ್ಮಕ ವಿಚಾರಣೆ, ಮಾನವಿಕ ಜ್ಞಾನ ಉತ್ಪಾದನೆಯ ಬೌದ್ಧಿಕ ಮೂಲಾಧಾರವಾಗಿದೆ ಎಂದು ಹೇಳಿದ್ದಾರೆ. ಸಂಘಟನಾ ಕಾರ್ಯದರ್ಶಿ ಶ್ರೀ ಮಹೇಂದ್ರ ಎಂ, ಪ್ರೊ. ಪಾಂಡಾ, ಡಾ. ರೇಣುಕಾ, ಡಾ. ಪ್ರಕಾಶ, ಡಾ. ಆಶಿಶ ಪಸ್ಥಿತರಿದ್ದರು. ಹೈದರಾಬಾದ್‌ನ ಪ್ರೊ.ತಾರಕೇಶ್ವರ್ ವಿ.ಬಿ, ಪ್ರೊ. ನಿಖಿಲಾ ಎಚ್ ಅವರು ತಮ್ಮ ಅಭಿಪ್ರಾಯ ಹಂಚಿಕೊಳ್ಳಲಿದ್ದಾರೆ.



> ಮಾನವಶಾಸ್ತ್ರದಲ್ಲಿನ ಸಂಶೋಧನಾ ವಿಧಾನವು ಏಕಶಿಲೆಯ ಶಿಸ್ತಲ್ಲ; ಆದಾಗ್ಯೂ, ಇದು ವ್ಯಾಖ್ಯಾನಾತ್ಮಕ, ವಿಮರ್ಶಾತ್ಮಕ, ಪ್ರಾಯೋಗಿಕ ಮತ್ತು ಮಿಶ್ರ ಚೌಕಟ್ಟುಗಳನ್ನು ಆಧರಿಸಿದೆ. ಶೈಕ್ಷಣಿಕ ಬರವಣಿಗೆಯಲ್ಲಿ ವಾದ ರಚನೆ, ಶಿಸ್ತಿನ ಸಂಪ್ರದಾಯಗಳು, ಉಲ್ಲೇಖದ ಪ್ರೊಟೋಕಾಲ್ ಮತ್ತು ಪ್ರಕಟಣೆಯ ಮಾನದಂಡಗಳ ಮೇಲೆ ಹಿಡಿತ ಸಾಧಿಸುವುದು ಅಗತ್ಯವಾಗಿದೆ.
> –ಪ್ರೊ.ಬಸವರಾಜ ಡೋಣೂರ, ಇಂಗ್ಲಿಷ್ ವಿಭಾಗದ ಮುಖ್ಯಸ್ಥ

**ವಿದ್ವತ್ಪೂರ್ಣ ಪ್ರಕಟಣೆ, ನಿರೀಕ್ಷೆಗಳ ಮೇಲೆ ಪ್ರತಿಕೂಲ:** ಈ ಕ್ಷೇತ್ರಗಳಲ್ಲಿ ರಚನಾತ್ಮಕ, ಶಿಸ್ತು–ಸೂಕ್ಷ್ಮ ತರಬೇತಿಯ ಅನುಪಸ್ಥಿತಿಯು ಡಾಕ್ಟ–ರೇಟ್ ಪ್ರಬಂಧಗಳ ಗುಣಮಟ್ಟ, ಸಂಶೋಧನೆ ಪೂರ್ಣಗೊಳ್ಳುವ ವೇಗ ಮತ್ತು ವಿದ್ವತ್ಪೂರ್ಣ ಪ್ರಕಟಣೆಯ ನಿರೀಕ್ಷೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಪ್ರೊ. ವಿಕ್ರಮ್ ವಿಸಾಜಿ ವ್ಯಾಖ್ಯಾನಿಸಿದ್ದಾರೆ.

## ವಚನ ಜಾತ್ರೆ: 75 ಸೈನಿಕರಿಗೆ ಗೌರವ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪರಮಾತ್ಮನ ಜ್ಞಾನ ಹೊಂದಿದ ಸಾಧಕರಿಗೆ ಭೂಲೋಕದಲ್ಲಿ ಪರಮಾತ್ಮನ ಅನುಭಾವ ನೀಡಲು ದೇವರು ಕಳುಹಿಸುತ್ತಾನೆ, ಅಂತಹ ಸಾಧಕರೇ ಈ ಎಲ್ಲಾ ಸ್ವಾಮೀಜಿಗಳಾಗಿದ್ದಾರೆ ಎಂದು ಚಿದಂಬರಾಶ್ರಮ ಶ್ರೀ ಸಿದ್ಧಾರೂಢ ಮಠದ ಡಾ.ಶಿವಕುಮಾರ ಮಹಾಸ್ವಾಮಿಗಳು ಪ್ರತಿಪಾದಿಸಿದ್ದಾರೆ.

ಪಟ್ಟಣದ ಚನ್ನಬಸವಾಶ್ರಮದಲ್ಲಿ ವಿಶ್ವಗುರು ಬಸವಣ್ಣನವರ ಜಯಂತ್ಯುತ್ಸವ, ವಚನ ಜಾತ್ರೆ 2026, ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ, ಡಾ. ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ಯ ಆಯೋಜಿಸಿದ್ದ 75 ಸೈನಿಕರಿಗೆ ಸನ್ಮಾನ ಕಾರ್ಯಕ್ರಮದ ಸನ್ನಿಧಾನ ವಹಿಸಿ ಅವರು ಮಾತನಾಡಿದರು.

ಪರಮಾತ್ಮನು ತನ್ನ ಕಾರ್ಯವನ್ನು ಮಾಡುವ ನಿಟ್ಟಿನಲ್ಲಿ ಅವನ ದೂತರಾಗಿ ಸ್ವಾಮಿಗಳನ್ನು, ದಾರ್ಶನಿಕರನ್ನು ಜಗತ್ತಿನಲ್ಲಿ ಸೃಷ್ಟಿಸುತ್ತಾನೆ. ಅಂತಹ ಮಹಾನ್ ಸಾಧಕರು ಭಾಲ್ಕಿಯ ಪಟ್ಟದ್ದೇವರಾಗಿದ್ದಾರೆ. ಉರ್ದು, ಹಿಂದಿ ಪ್ರಾಬಲ್ಯವಿರುವ ಗಡಿ ಭಾಗದಲ್ಲಿ ಕನ್ನಡವನ್ನು ಉಳಿಸಿ, ಬೆಳೆಸಿಕೊಂಡು ಹೋದ ಕೀರ್ತಿ ಲಿಂಗೈಕ್ಯ ಡಾ. ಚನ್ನಬಸವ ಪಟ್ಟದ್ದೇವರು ಹಾಗು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರಿಗೆ ಸಲ್ಲುತ್ತದೆ ಎಂದು ವ್ಯಾಖ್ಯಾನಿಸಿದ್ದಾರೆ.



ಸನ್ನಿಧಾನ ವಹಿಸಿ ಮಾತನಾಡಿದ ಸಾಲೂರು ಬ್ರಹನ್ಮಠ, ಮಲೆಮಹಾದೇಶ್ವರ ಬೆಟ್ಟದ ಶ್ರೀ ವಿದ್ಯಾವಾನ ಡಾ. ಶಾಂತಮಲ್ಲಿಕಾರ್ಜುನ ಮಹಾಸ್ವಾಮಿಗಳು, ಸೈಕರಿಗೆ ಗೌರವ ಸಲ್ಲಿಸಿದರೆ ಭಾರತಕ್ಕೆ ಗೌರವ ಸಲ್ಲಿಸಿದಂತೆ, ನಾವೆಲ್ಲರೂ ಭಾರತ ದೇಶದಲ್ಲಿ ಸ್ವತಂತ್ರವಾಗಿ ಬಾಳಲು ಈ ಎಲ್ಲಾ ಸೈನಕರೇ ಕಾರಣ–ಕರ್ತರಾಗಿದ್ದಾರೆ. ಇಂತಹ ಸೈನಿಕರನ್ನು ಶ್ರೀಮಠ ಸನ್ಮಾನಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದಿದ್ದಾರೆ. ಹಿರೇಮಠ ಸಂಸ್ಥಾನದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಪ್ರಾಸ್ತಾವಿಕವಾಗಿ ಮಾತನಾಡಿದರು. ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಶ್ರೀ ಶಿವಲಿಂಗ ಶಿವಾಚಾರ್ಯರು, ಶ್ರೀ ಶಿವಲಿಂಗ ಮಹಾಸ್ವಾಮಿ, ಚನ್ನಮಲ್ಲ ಮಹಾಸ್ವಾಮೀಜಿ, ಗಂಗಾಧರ ಶಿವಾಚಾರ್ಯರು, ಅಭಿನವ ರುದ್ರಮುನಿ ಶಿವಾಚಾರ್ಯರು, ಪ್ರಮುಖರಾದ ಶಿವರಾಜ ಗಂದಗೆ, ನಾಮದೇವರಾವ ಪವಾರ, ವೈಜಿನಾಥ ಕಾಮಶೆಟ್ಟೆ, ಡಾ। ಎಸ್.ಬಿ.ದುರ್ಗೆ, ಅನೀಲ ರಗಟೆ, ಶಶಿಕಾಂತ ದುರ್ಗೆ, ಅಶೋಕ ರಾಜೋಳೆ, ಕಲ್ಯಾಣರಾವ ಶಿವಣಕರ, ವೀರುಪಾಕ್ಷ ಗಾದಗಿ, ವೈಜಿನಾಥಪ್ಪ ದಾಬಶೆಟ್ಟಿ, ಈಶ್ವರ ರುಮ್ಮಾ, ಅಕ್ಷಯ ಮುದ್ದಾ, ಚನ್ನಬಸವಣ್ಣ ಬಳತೆ ಉಪಸ್ಥಿತರಿದ್ದರು.

## ನಿಮ್ಮ ಸ್ವಾರ್ಥಕ್ಕೆ ಪಕ್ಷ ಬಿಟ್ಟುಹೋದಿರಿ: ಸಿಪಿ ಯೋಗೇಶ್ವರ್ ವಿರುದ್ಧ ನಿಖಿಲ್ ಕುಮಾರಸ್ವಾಮಿ ಕಿಡಿ

# ಖಯಂ ಕೃಷಿ ಅಧಿಕಾರಿ ನೇಮಕಕ್ಕೆ ಆಗ್ರಹಿಸಿ ರೈತ ಸಂಘದಿಂದ ಮನವಿ



• **ಮಲ್ಲಮ್ಮ ನುಡಿ ವಾರ್ತೆ, ಕಮಲನಗರ**

ತಾಲೂಕಿನ ಕಮಲನಗರ ರೈತ ಸಂಪರ್ಕ ಕೇಂದ್ರಕ್ಕೆ ಖಾಯಂ ಕೃಷಿ ಅಧಿಕಾರಿಯನ್ನು ನೇಮಿಸುವಂತೆ ಹಾಗೂ ಬಾಕಿ ಇರುವ ಎ.ಡಿ (ಸಹಾಯಕನಿರ್ದೇಶಕ) ಕಚೇರಿಯನ್ನು ಕೂಡಲೇ ಆರಂಭಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಪದಾಧಿಕಾರಿಗಳು ಬುಧವಾರ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

**ಸಮಸ್ಯೆಯ ವಿವರ:**

ಕಮಲನಗರ ರೈತ ಸಂಪರ್ಕ ಕೇಂದ್ರದಲ್ಲಿ 8 ವರ್ಷ ಕಳೆದರು, ಖಾಯಂ ಅಧಿಕಾರಿಗಳಿಲ್ಲದೆ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಸದ್ಯ ಉಸ್ತುವಾರಿಯಲ್ಲಿರುವ ಅಧಿಕಾರಿಗಳು ವಾರದಲ್ಲಿ ಕೇವಲ ಒಂದು ಅಥವಾ ಎರಡು ದಿನ ಮಾತ್ರ ಲಭ್ಯವಿರುತ್ತಾರೆ. ಇದರಿಂದಾಗಿ ಪಹಣಿ ದಾಖಲೆ ಒದಗಿಸುವುದು, ವಿವಿಧ ಕೃಷಿ ಯೋಜನೆಗಳ ನೋಂದಣಿ ಹಾಗೂ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ರೈತರು ಕಚೇರಿಗೆ ಅಲೆದಾಡುವಂತಾಗಿದೆ ಎಂದು ರೈತ ಮುಖಂಡ ಪ್ರವೀಣ ಕುಲಕರ್ಣಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ತಾಲ್ಲೂಕು ಅಧ್ಯಕ್ಷರಾದ ಪ್ರವೀಣ ಸುಧಾಕರರಾವ್ ಕುಲಕರ್ಣಿ, ಉಪಾಧ್ಯಕ್ಷ ವೈಜಿನಾಥ ವದ್ದೆ, ಕಾರ್ಯದರ್ಶಿ ವಿಠಲರಾವ್ ಪಾಟೀಲ, ಕಮಲನಗರ ಘಟಕ ಅಧ್ಯಕ್ಷ ರಾಮೇಶ್ವರ ಶಿವಣಕರ, ಮನೋಜ ಪಾಟೀಲ, ಸಂಗಮೇಶ ಬನವಾಸೆ ಸೇರಿದಂತೆ ಸಂಘದ ಪ್ರಮುಖ ಪದಾಧಿಕಾರಿಗಳು ಹಾಗೂ ರೈತರು ಉಪಸ್ಥಿತರಿದ್ದರು.

### ಪ್ರಮುಖ ಬೇಡಿಕೆಗಳು

“ ಕಮಲನಗರ ರೈತ ಸಂಪರ್ಕ ಕೇಂದ್ರಕ್ಕೆ ತಕ್ಷಣವೇ ಖಾಯಂ ಕೃಷಿ ಅಧಿಕಾರಿಯನ್ನು (A.O) ನೇಮಕ ಮಾಡಬೇಕು.

ಕಳೆದ ಹಲವು ಸಮಯದಿಂದ ನನೆಗುದಿಗೆ ಬಿದ್ದಿರುವ ಸಹಾಯಕ ಕೃಷಿ ನಿರ್ದೇಶಕರ (ಎ.ಡಿ) ಕಚೇರಿಯನ್ನು ತಾಲ್ಲೂಕು ಕೇಂದ್ರದಲ್ಲಿ ಕೂಡಲೇ ಕಾರ್ಯಾರಂಭ ಮಾಡಬೇಕು.

### ಬೃಹತ್ ಧರಣಿಯ ಎಚ್ಚರಿಕೆ

“ ಒಂದು ತಿಂಗಳ ಒಳಗಾಗಿ ಈ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ, ಮುಂದಿನ ದಿನಗಳಲ್ಲಿ ಕಮಲನಗರದ ರೈತ ಸಂಪರ್ಕ ಕೇಂದ್ರದ ಮುಂದೆ ಬೃಹತ್ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಸಂಘಟನೆಯು ಎಚ್ಚರಿಕೆ ನೀಡಿದೆ.

**ಬಂಜಾರಾ ಜಾನಪದ ಸಾಂಸ್ಕೃತಿಕ ಸಂಭ್ರಮ**

# ನಮ್ಮ ದೇಶೀಯ ಸಂಸ್ಕೃತಿ ಉಳಿಸಿ ಬೆಳೆಸುವ ಕಾರ್ಯವಾಗಲಿ: ಹೆಬ್ಬಾಳೆ



• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ಕಲಾವಿದರಿಂದ ನಮ್ಮ ದೇಶೀಯ ಸಂಸ್ಕೃತಿ ಉಳಿಸಿ ಬೆಳೆಸುವ ಕಾರ್ಯವಾಗಬೇಕು ಎಂದು ರಾಷ್ಟ್ರೀಯ ಬುಡಕಟ್ಟು ಕಲಾ ಪರಿಷತ್ತು ನವದೆಹಲಿಯ ಪ್ರಧಾನ ಕಾರ್ಯದರ್ಶಿ ಡಾ। ರಾಜಕುಮಾರ ಹೆಬ್ಬಾಳೆ ಅಭಿಪ್ರಾಯಪಟ್ಟರು.

ಪಟ್ಟಣದ ಕುಂಭೇಶ್ವರ ಗಜಾನನ ಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಆದಿಶಕ್ತಿ ಶಾಂಸ್ಕೃತಿಕ ಕಲಾ ಸಂಘ ಭಾಲ್ಕಿಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಬಂಜಾರ ಜಾನಪದ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಭಾರತೀಯ ಸಂಸ್ಕೃತಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರಸ್ತುತ ಸಾಲಿನ ವಿಶೇಷ ಘಟಕ ಸಂಘ ಸಂಸ್ಥೆಗಳು ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲು ಧನಸಹಾಯ ಯೋಜನೆಯಡಿ ಸರ್ಕಾರ ಅನುದಾನ ನೀಡುತ್ತಿದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರ ಏಳು ವಲಯಗಳ ಸಾಂಸ್ಕೃತಿಕ ಕೇಂದ್ರಗಳನ್ನು ಸ್ಥಾಪಿಸಿದೆ. ನಮ್ಮ ಭಾಗದ ಕೇಂದ್ರಗಳು ನಾಗಪುರ ಮತ್ತು ತಂಜಾವೂರಗಳಲ್ಲಿ ಕಾರ್ಯನಿರ್ವಹಿಸುತ್ತಲಿವೆ. ಈ ಕೇಂದ್ರಗಳಿಂದ ಕಲಾ ತಂಡಗಳನ್ನು ಬೆಳೆಸುವ ಕಾರ್ಯವಾಗುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಪ್ರೊ। ಶಂಭುಲಿಂಗ ಕಾಮಣ್ಣ, ಕಲೆ ದೇವರು ಕೊಟ್ಟ ವರ, ಸಮಾಜದ ಸೊತ್ತು. ಸಮಾಜ ಕಲಾವಿದರಿಗೆ ಋಣಿಯಾಗಿರಬೇಕು. ಕಲೆ ಬೆಳೆಯಲು ಸಹಜ ಪ್ರವೃತ್ತಿ ಮತ್ತು ಪ್ರಯತ್ನ ಪ್ರವೃತ್ತಿಗಳು ಬೇಕು. ಸಹಜ ಪ್ರವೃತ್ತಿ ಹುಟ್ಟಿನಿಂದ ದೈವದತ್ತವಾಗಿ ಬಂದ ಕಲೆ, ಪ್ರಯತ್ನಪೂರ್ವಕವಾಗಿ ಕಲಿತ ಕಲೆ ಪ್ರಯತ್ನ ಪ್ರವೃತ್ತಿಯಾಗಿದೆ. ಎರಡೂ ವೃತ್ತಿಗಳಿಂದಲೂ ಕಲೆಯನ್ನು ತನ್ನದಾಗಿಸಿಕೊಳ್ಳಬಹುದು. ಇಂತಹ ಕಲಾವಿದರನ್ನು ಗೌರವಿಸುವ ಕಾರ್ಯ ನಮ್ಮೆಲ್ಲರದ್ದಾಗಿದೆ ಎಂದು ಹೇಳಿದರು. ಕರ್ನಾಟಕ ಜಾನಪದ ಪರಿಷತ್ ಗೌರವಾಧ್ಯಕ್ಷೆ ರೇಖಾಬಾಯಿ ಅಷ್ಟೂರೆ ಮಾತನಾಡಿ, ಭಾಲ್ಕಿಯ ಕಲಾವಿದರು ರಾಷ್ಟ್ರಮಟ್ಟದಲ್ಲಿ ಬೆಳೆಯುಂತಾಗಲಿ ಎಂದು ಹೇಳಿದರು. ಆದಿಶಕ್ತಿ ಸಾಂಸ್ಕೃತಿಕ ಕಲಾ ಸಂಘದ ಅಧ್ಯಕ್ಷೆ ಭಾರತಿಬಾಯಿ ರಾಠೋಡ ಪ್ರಾಸ್ತಾವಿಕ ಮಾತನಾಡಿದರು.

ಇದೇವೇಳೆ ನಿವೃತ್ತ ಪ್ರಾಚಾರ್ಯ ಅಶೋಕ ರಾಜೋಳೆ, ಕರ್ನಾಟಕ ಬಂಜಾರಾ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ವಿಜಯಲಕ್ಷ್ಮಿ □□ ಚವ್ಹಾಣ, ನಿವೃತ್ತ ಪ್ರೌಢಶಾಲಾ ಶಿಕ್ಷಕ ರಂಗಲಾಲ ಜಾಧವ ರವರಿಗೆ ಆದಿಶಕ್ತಿ ಸಾಂಸ್ಕೃತಿಕ ಕಲಾ ಸಂಘದಿಂದ ವಿಶೇಷ ಸನ್ಮಾನ ಮಾಡಲಾಯಿತು. ಹಾಗು ಸೀಮಾ ಮತ್ತು ತಂಡ ಕಲಕೋರಾ ತಾಂಡಾ ಕಲಾವಿದರಿಂದ ಬಂಜಾರಾ ಜಾನಪದ ನೃತ್ಯ, ದೇವಿತಾಂಡಾ ಕಲಾವಿದರಿಂದ ಬಂಜಾರ ಭಜನೆ, ಬೀರಿ(ಬಿ) ತಾಂಡಾದ ಕಮಲಾಬಾಯಿ ಮತ್ತು ತಂಡದಿಂದ ಘೂಮರ ನೃತ್ಯ, ಡೋಣಗಾಪೂರದ ಸಂಗಮೇಶ ಮತ್ತು ತಂಡದಿಂದ ವಚನ ಗಾಯನ, ಹುಣಜಿಯ ಸಂಗೀತಾ ಸ್ವಾಮಿ ಮತ್ತು ತಂಡದಿಂದ ತತ್ವಪದ, ಅಲ್ಲಶಾ ರಿಂದ ಗಜಲ್ ಗೀತೆ, ಸುರೇಖಾ ಲಾಧಾ ರವರಿಂದ ಭಾವಗೀತೆ, ವಳಸಂಗದ ದ್ರೋಪದಿ ಗಾಯಕವಾಡ ಮತ್ತು ಸಂಗಡಿಗರಿಂದ ಕೋಲಾಟ, ಪಾರ್ವತಿ ವಳಸಂಗರಿಂದ ಭಜನೆ, ಮಂಗಲಾ ಸೋನಬಾ, ಬಾಲಿಕಾ ಜೋಳದಾಪಕಾ ರಿಂದ ಅಭಂಗ, ನಂದಕುಮಾರ ರಿಂದ ತಬಲಾಸೋಲೊ, ಮಾಹಾಲಿಂಗಯ್ಯಾ ಕಲಬುರಗಿಯವರಿಂದ ಡೊಳ್ಳುಕುಣಿತ, ವೈಷ್ಣವಿ ಸ್ವಾಮಿ ಹುಣಜಿಯವರಿಂದ ಜಾನಪದ ನೃತ್ಯ, ಸರಸ್ವತಿ ಹುಲಸೂರೆ ಮತ್ತು ತಂಡದವರಿಂದ ಭಕ್ತಿಗೀತೆ ನಡೆದವು.

ಕಾರ್ಯಕ್ರಮದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜಯರಾಜ ದಾಬಶೆಟ್ಟಿ, ಜಾನಪದ ಪರಿಷತ್ ಅಧ್ಯಕ್ಷ ವಸಂತ ಹುಣಸನಾಳೆ, ಪುರಸಭೆ ಸದಸ್ಯೆ ಲಲಿತಾಬಾಯಿ ಬಾಬುರಾವ ರಾಠೋಡ, ಸಂತೋಷ ಹಡಪದ, ವಿಜಯಕುಮಾರ ದೇಶಮುಖ, ಜಾನಪದ ಪರಿಷತ ಮಹಿಳಾ ಘಟಕದ ಅಧ್ಯಕ್ಷೆ ಆಶಾ ಎಂ ರಾಠೋಡ ಉಪಸ್ಥಿತರಿದ್ದರು. ಶ್ರೀದೇವಿ ಶಾಂತಯ್ಯಾ ಸ್ವಾಮಿ ಸ್ವಾಗತಗೀತೆ ಹಾಡಿದರು.

ಎಂ.ಪಿ.ರಾಠೋಡ ಸ್ವಾಗತಿಸಿದರು.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ಯುವಕರು ದೇಶಾಭಿಮಾನ ಹೆಚ್ಚಿಸಿಕೊಳ್ಳಬೇಕು

ದೇಶದ ಭವಿಷ್ಯ ಯುವಕರ ಕೈಯಲ್ಲಿದೆ ಎಂಬ ಮಾತು ಅಕ್ಷರಶಃ ಸತ್ಯ. ಒಂದು ದೇಶದ ಅಭಿವೃದ್ಧಿ, ಏಕತೆ ಮತ್ತು ಭದ್ರತೆ ಯುವಪೀಳಿಗೆಯ ಚಿಂತನೆ ಹಾಗೂ ಕಾರ್ಯಶೀಲತೆಯ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ಇಂದಿನ ಯುವಕರು ದೇಶಾಭಿಮಾನವನ್ನು ಹೆಚ್ಚಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ.

ದೇಶಾಭಿಮಾನ ಎಂದರೆ ಕೇವಲ ಧ್ವಜಾರೋಹಣ ಅಥವಾ ಘೋಷಣೆಗಳಿಗೆ ಸೀಮಿತವಲ್ಲ; ದೇಶದ ಕಾನೂನುಗಳನ್ನು ಗೌರವಿಸುವುದು, ಸಮಾಜದ ಹಿತಕ್ಕಾಗಿ ದುಡಿಯುವುದು, ದೇಶದ ಸಂಸ್ಕೃತಿ–ಪರಂಪರೆಯನ್ನು ಉಳಿಸುವುದು ಹಾಗೂ ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು ಕೂಡ ದೇಶಾಭಿಮಾನದ ಲಕ್ಷಣಗಳಾಗಿವೆ.

ಇಂದಿನ ಕೆಲವು ಯುವಕರು ಪಾಶ್ಚಾತ್ಯ ಸಂಸ್ಕೃತಿಯ ಅತಿಯಾದ ಪ್ರಭಾವಕ್ಕೆ ಒಳಗಾಗಿ ತಮ್ಮ ದೇಶದ ಮೌಲ್ಯಗಳನ್ನು ಮರೆತುಬಿಡುತ್ತಿದ್ದಾರೆ. ಇದು ಆತಂಕಕಾರಿ ಬೆಳವಣಿಗೆಯಾಗಿದೆ. ಯುವಕರು ಮೊದಲು ತಮ್ಮ ದೇಶದ ಇತಿಹಾಸ, ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಸಂವಿಧಾನದ ಮಹತ್ವ ಮತ್ತು ರಾಷ್ಟ್ರದ ಅಭಿವೃದ್ಧಿಗಾಗಿ ದುಡಿಯುತ್ತಿರುವ ಮಹನೀಯರ ಆದರ್ಶಗಳನ್ನು ತಿಳಿದುಕೊಳ್ಳಬೇಕು.

ಯುವಕರು ಶಿಕ್ಷಣ, ಶಿಸ್ತು, ಪರಿಶ್ರಮ ಹಾಗೂ ಸಾಮಾಜಿಕ ಜವಾಬ್ದಾರಿಗಳ ಮೂಲಕ ದೇಶದ ಪ್ರಗತಿಗೆ ಕೈಜೋಡಿಸಬೇಕು. ದೇಶದ ಅಭಿವೃದ್ಧಿಗೆ ತಂತ್ರಜ್ಞಾನ, ಕೃಷಿ, ಉದ್ಯಮ, ರಾಜಕೀಯ ಹಾಗೂ ಸಾಮಾಜಿಕ ಸೇವೆಗಳಲ್ಲಿ ಯುವಕರು ಸಕ್ರಿಯವಾಗಿ ಭಾಗವಹಿಸಬೇಕು.

ಒಟ್ಟಾರೆ, ದೇಶಾಭಿಮಾನವಿಲ್ಲದ ಯುವಜನತೆ ರಾಷ್ಟ್ರಕ್ಕೆ ಶಕ್ತಿ ಆಗಲಾರರು. ಆದ್ದರಿಂದ ಪ್ರತಿಯೊಬ್ಬ ಯುವಕ–ಯುವತಿಯು “ದೇಶ ಮೊದಲೇ ನಾನು ನಂತರ” ಎಂಬ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಬಲಿಷ್ಠ ಭಾರತ ನಿರ್ಮಾಣ ಸಾಧ್ಯ.

# ವಚನಗಳು ಜೀವನದ ದಾರಿದೀಪ

• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ವಿಶ್ವಗುರು ಬಸವಣ್ಣವರ ವಚನಗಳು ನಮ್ಮ ಜೀವನಕ್ಕೆ ದಾರಿ ದೀಪವಾಗಿವೆ. ಜೀವನದಲ್ಲಿ ಕಷ್ಟ, ನೋವು ಬಂದಾಗ ನಾವು ವಚನಗಳನ್ನು ಓದಬೇಕು, ವಚನಗಳು ನಮಗೆ ಸಾಂತ್ವನ ಹೇಳುತ್ತವೆ. ಮನಸ್ಸಿಗೆ ಧೈರ್ಯ ತುಂಬುತ್ತವೆ ಎಂದು ಹಂದಿಗುಂದ ಸಿದ್ದೇಶ್ವರ ಮಠದ ಶಿವಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿ, ವಚನ ಜಾತ್ರೆ–2026, ಡಾ.ಚನ್ನಬಸವ ಪಟ್ಟದ್ದೇವರ 27ನೆಯ ಸ್ಮರಣೋತ್ಸವ ಮತ್ತು ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಮಂಗಳವಾರ ಆಯೋಜಿಸಿದ್ದ ಸಾಮೂಹಿಕ ವಚನ ಪಾರಾಯಣ ಕಾರ್ಯಕ್ರಮದ ದೀಪ ಬೆಳಗಿಸಿ ಅವರು ಮಾತನಾಡಿದರು.

ವಚನಗಳು ಮನಸ್ಸಿನ ಕತ್ತಲೆಯನ್ನು ಕಳೆಯುತ್ತವೆ. ನಮ್ಮ ಬದುಕಿಗೆ ನೆಮ್ಮದಿ ತುಂಬುತ್ತವೆ. ವಚನಗಳ ಅಧ್ಯಯನ ಹೆಚ್ಚಾದಂತೆ, ನಮ್ಮ ಆಚರಣೆಗಳಲ್ಲಿ ಪರಿವರ್ತನೆ ಬರುತ್ತದೆ. ಮೂಢನಂಬಿಕೆಗಳನ್ನು ಕಳೆದು ಸದ್ಭಕ್ತಿಯನ್ನು ಮೂಡುತ್ತದೆ. ವಚನಗಳ ಪಾರಾಯಣ ಮಾಡುವುದೆಂದರೆ, ಶರಣರ ಜತೆಗೆ ಸಂವಾದ ನಡೆಸಿದಂತೆ ಎಂದು ನುಡಿದರು.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ನಿರಂಜನ ಸ್ವಾಮೀಜಿ, ಶಿವಾನಂದ ಸ್ವಾಮೀಜಿ, ಮಹಾಲಿಂಗ ಸ್ವಾಮೀಜಿ, ಪ್ರಭುಲಿಂಗ ಸ್ವಾಮೀಜಿ, ಶಿವಬಸವ ಸ್ವಾಮೀಜಿ, ಹರವ್ಯಕ್ತಾನಂದ ಸ್ವಾಮೀಜಿ, ಸುಗುಣಾತಾಯಿ ಸೇರಿದಂತೆ ಹಲವರು ಇದ್ದರು.

ನಿರ್ಮಲಾ ಸಿದ್ರಾಮಪ್ಪ ವಂಕೆ ಬಸವ ಗುರುವಿನ ಪೂಜೆ ನೆರವೇರಿಸಿದರು. ಸಾಮೂಹಿಕ ವಚನ ಪಾರಾಯಣ ಸೇವಾ ಸಮಿತಿ ಅಧ್ಯಕ್ಷೆ ಮಲ್ಲಮ್ಮ ಆರ್ ಪಾಟೀಲ್ ಸೇರಿದಂತೆ ಹಲವರು ಇದ್ದರು. ರಾಜು ಜುಬರೆ ನಿರೂಪಿಸಿ, ವಂದಿಸಿದರು.



# ಅಧ್ಯಕ್ಷೆ ಲಾಲಿಬಾಯಿ ಉಪಾಧ್ಯಕ್ಷೆ ಶಾಂತಬಾಯಿ ಅವಿರೋಧ ಆಯ್ಕೆ



• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ತಾಲೂಕಿನ ಗೋವಿಂದ ತಾಂಡಾ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಲಾಲಿಬಾಯಿ ಗಂಡ ನೌಸಿರಾಮ ಉಪಾಧ್ಯಕ್ಷರಾಗಿ ಶಾಂತಬಾಯಿ ಗಂಡ ಗುರುನಾಥ ಅವಿರೋಧವಾಗಿ ಆಯ್ಕೆಯಾದರು. ಬುಧವಾರ ಸಂಘದ ಕಾರ್ಯಾಲಯದಲ್ಲಿ ಜರುಗಿದ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಬಬ್ಬರೆ ನಾಮಪತ್ರ ಸಲ್ಲಿಸಿದರಿಂದ ಅವಿರೋಧವಾಗಿ ಘೋಷಣೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಶಿವಾನಂದ ಹಡಪದ ತಿಳಿಸಿದ್ದಾರೆ.

ನಂತರ ಸಂಘದ ಕಾರ್ಯದರ್ಶಿ ಬಬಲು ಸಿ. ರಾಠೋಡ ನೂತನ ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ಹಾಗೂ ಸರ್ವ ನಿರ್ದೇಶಕರಿಗೆ ಶಾಲು ಹೊದಿಸಿ ಸನ್ಮಾನಿಸಿದರು. ನಂತರ ನೂತನ ಅಧ್ಯಕ್ಷೆ ಮತ್ತು ಉಪಾಧ್ಯಕ್ಷೆ ಮಾತನಾಡಿ, ರೈತರ ಏಳಿಗೆಗಾಗಿ ಹಗಲಿರಳು ಶ್ರಮಿಸುತ್ತೇವೆ. ರೈತರಿಗೆ ಅನುಕೂಲವಾಗುವಂತಹ ಯೋಜನೆಗಳು ಹಾಕಿಕೊಂಡು ಕಾರ್ಯರೂಪಕ್ಕೆ ತರಲಾಗುತ್ತದೆ. ಅಲ್ಲದೆ ರೈತರ ಉತ್ತೇಜನಕ್ಕೆ ಪ್ರಯತ್ನ ಮಾಡುತ್ತೇವೆ,

ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪ್ರತಿಯೊಬ್ಬರ ರೈತರಿಗೆ ಮುಟ್ಟಿಸುವ ಕಾರ್ಯ ಪ್ರಾಮಾಣಿಕವಾಗಿ ಮಾಡುತ್ತೇವೆ ಎಂದರು. ನಿರ್ದೇಶಕರಾದ ಬಿಜಿಬಾಯಿ ಹೇಮಲಾ, ಕಮಲಾಬಾಯಿ ರಾಮಚಂದ್ರ, ಸುಶೀಲಾಬಾಯಿ ಶಿವರಾಮ, ಗೋನಿಬಾಯಿ ಕಿಶನ್, ಮೋತಿಬಾಯಿ ಶಕ್ರು, ಶಾಂತಾಬಾಯಿ ಅಂತರಾಮ, ಶಾಂತಾಬಾಯಿ ನಾತು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಕಾರಂಜಾ ನೀರು ಬಿಡುಗಡೆ: ಎಚ್ಚರ ವಹಿಸಲು ಸಾರ್ವಜನಿಕರಲ್ಲಿ ಮನವಿ



• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಕಾರಂಜಾ ಜಲಾಶಯದಿಂದ ಹಾಲಹಳ್ಳಿ ಬ್ಯಾರೇಜ್‌ಗೆ ನದಿಯ ಮುಖಾಂತರ 0.40 ಟಿ.ಎಂ.ಸಿ. ನೀರನ್ನು ದಿನಾಂಕ:16–04–2026 ರಂದು ಹಂತ ಹಂತವಾಗಿ ಹರಿಸುತ್ತಿರುವ ಪ್ರಯುಕ್ತ, ನದಿಯ ಹತ್ತಿರ ಅಕ್ಕಪಕ್ಕದ ಗ್ರಾಮದ ಜನರು, ಸಾರ್ವಜನಿಕರು ನದಿಗೆ ಇಳಿಯುವುದಾಗಲಿ, ಬಟ್ಟೆ ಒಗೆಯುವುದಾಗಲಿ, ಈಜುವುದಾಗಲಿ, ದನಕರುಗಳಿಗೆ ನದಿಗೆ ಇಳಿಸುವುದಾಗಲೀ ಮಾಡಬಾರದೆಂದು ಕರ್ನಾಟಕ ನೀರಾವರಿ ನಿಗಮ ನಿಯಮಿತದ ಕಾರ್ಯಪಾಲಕ ಇಂಜಿನೀಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಯ ವ್ಯಯ ಸಭೆ

• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಬೀದರ ಮಹಾನಗರ ಪಾಲಿಕೆ 2026–27ನೇ ಸಾಲಿನ ಆಯ–ವ್ಯಯ ಸಭೆಯನ್ನು ಮಹಾಪೌರರ ಅಧ್ಯಕ್ಷತೆಯಲ್ಲಿ ದಿನಾಂಕ: 17–04–2026 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಬೀದರ ಮಹಾನಗರ ಪಾಲಿಕೆಯ ಉಪ ಆಯುಕ್ತರು (ಕಂ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹನೀಯರ ಜಯಂತಿ ಅರ್ಥಪೂರ್ಣವಾಗಿ ಆಚರಿಸೋಣ: ಕರಾಳೆ



• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಏಪ್ರಿಲ್.21 ರಂದು ಬರುವ ಶಂಕರಾಚಾರ್ಯರ ಜಯಂತಿ ಹಾಗೂ ಏಪ್ರಿಲ್.23 ರಂದು ಬರುವ ಭಗೀರಥ ಮಹರ್ಷಿಯವರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸೋಣ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ ತಿಳಿಸಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಏಪ್ರಿಲ್.21 ರಂದು ಬರುವ ಶಂಕರಾಚಾರ್ಯರರ ಜಯಂತಿ ಹಾಗೂ ಏಪ್ರಿಲ್.23 ರಂದು ಬರುವ ಭಗೀರಥ ಮಹರ್ಷಿಯವರ ಜಯಂತಿಗಳ ಆಚರಣೆ ಕುರಿತು ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದಿನಾಂಕ: 21–04–2026 ರಂದು ಶಂಕರಾಚಾರ್ಯರರ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬೆಳಿಗ್ಗೆ 10 ಗಂಟೆಗೆ ಪೂಜೆ ಸಲ್ಲಿಸುವುದು, ಸಾಯಂಕಾಲ 4 ಗಂಟೆಗೆ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ. ದಿನಾಂಕ: 23–04–2026 ರಂದು ಎಲ್ಲ ಸರಕಾರಿ, ಅರೆ ಸರಕಾರಿ ಸಂಘ–ಸಂಸ್ಥೆಗಳಲ್ಲಿ ಬೆಳಿಗ್ಗೆ 8.30 ಗಂಟೆಗೆ ಭಗೀರಥ ಮಹರ್ಷಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ 9 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಭಗೀರಥ ಮಹರ್ಷಿಯವರ ಭಾವಚಿತ್ರಕ್ಕೆ ಪೂಜೆ ಭಾಗವಹಿಸುವುದು. 10 ಗಂಟೆಗೆ ಛತ್ರಪತಿ ಶಿವಾಜಿ ವೃತ್ತದಿಂದ ಭಗಿರಥ ಮಹರ್ಷಿಯವರ ಭಾವಚಿತ್ರದ ಮೆರವಣಿಗೆ ಪ್ರಾರಂಭಗೊಂಡು ಕರಿಯಪ್ಪ ವೃತ್ತ, ಭಗವಂತಸಿಂಗ ವೃತ್ತ, ಬಸವೇಶ್ವರ ವೃತ್ತ, ಅಂಬೇಡ್ಕರ ವೃತ್ತ, ಕರಿಯಪ್ಪ ವೃತ್ತದಿಂದ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಮುಕ್ತಾಯಗೊಂಡು 11 ಗಂಟೆಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ. ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಕಲಾ ತಂಡಗಳ ವ್ಯವಸ್ಥೆ, ಅಂದು ನಗರ ಸಭೆ ವತಿಯಿಂದ ಎಲ್ಲ ಮಹನೀಯರ ವೃತ್ತಗಳ ಮೇಲೆ ದೀಪಾಲಂಕಾರ, ಕುಡಿಯುವ ನೀರಿನ ವ್ಯವಸ್ಥೆ, ಪ್ರಮುಖ ವೃತ್ತಗಳ ಸ್ವಚ್ಛತೆ ಮಾಡುವುದು, ಪೊಲೀಸ್ ಇಲಾಖೆ ವತಿಯಿಂದ ಮೆರವಣಿಗೆ ಹೋಗುವ ಮಾರ್ಗದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ ಮಾಡುವಂತೆ ಸೂಚಿಸಿದರು.

ಈ ಸಭೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಶಿಂಧೆ, (ವೆಂಕಟಸಿಂಗ ಕುಲಕರ್ಣಿ) ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಅಧ್ಯಕ್ಷರಾದ ರಮೇಶ ಸರ್, ದೇವಿದಾಸ ಜೋಶಿ, ಸತೀಶ ಕುಲಕರ್ಣಿ, ಮನೋಹರ ದಂಡೆ, ಮಹೇಶ ಪತಗಿ, ರಾಜೇಶ ಕುಲಕರ್ಣಿ, ಸುನೀಲಕುಮಾರ ಕುಲಕರ್ಣಿ, ಭಗಿರತ ಮಹರ್ಷಿ ಸಮಾಜದ ತಾನಾಜಿ ಸಗರ, ಜಗನ್ನಾಥ ಆಲಗೋಲ, ಜಗನ್ನಾಥ ಉಪ್ಪಾರ, ಬಸವರಾಜ ಬೆಲೂರ, ರಾಜಕುಮರ ಟಿಲೇಕರ, ಸುಭಾಷ ಹಮೀಲಾಪೂರ ಸೇರಿದಂತೆ ಜಿಲ್ಲಾ ತಾಲ್ಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಸರ್ಕಾರಿ ಪದವಿ ಪೂರ್ವ ಕಾಲೇಜಿನ 8 ವಿದ್ಯಾರ್ಥಿಗೆ ಸನ್ಮಾನ ಫಲಿತಾಂಶ 86.36%

• **ಮಲ್ಲಮ್ಮ ನುಡಿ ವಾರ್ತೆ, ಬೀದರ**



ಭಾಲ್ಕಿ ತಾಲ್ಲೂಕಿನ ಹಲಬರ್ಗಾ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ□1 ನಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಎಂಟು ವಿದ್ಯಾರ್ಥಿಗಳನ್ನು ಕಾಲೇಜು ವತಿಯಿಂದ ಸನ್ಮಾನಿಸಲಾಯಿತು.

ಇತ್ತಿಚಿಗೆ ನಡೆದ ಕಾರ್ಯಕ್ರಮದಲ್ಲಿ ಅಗ್ರಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಗೌರವ ನೀಡಿ, ಪ್ರತಿಯೊಬ್ಬರಿಗೆ ರೂ.500ರ ಕಿರು ಕಾಣಿಕೆ ನೀಡಲಾಯಿತು.

ಕಾಲೇಜು ಈ ವರ್ಷ ಒಟ್ಟು 86.36% ಫಲಿತಾಂಶ ದಾಖಲಿಸಿದ್ದು, ಈ ಸಾಧನೆಗೆ ಅವಿರತ ಶ್ರಮಿಸಿ, ವಿದ್ಯಾರ್ಥಿಗಳ ಬಗ್ಗೆ ಅಪಾರ ಕಾಳಜಿ ವಹಿಸಿ ಬೋಧನಾ ಕಾರ್ಯ ನಿರ್ವಹಿಸಿದ ಎಲ್ಲಾ ಉಪನ್ಯಾಸಕರಿಗೆ ಕಾಲೇಜು ಪ್ರಾಚಾರ್ಯರು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಬಾರಿ ಅಗ್ರ ಶ್ರೇಣಿಯಲ್ಲಿ 8 ವಿದ್ಯಾರ್ಥಿಗಳು, ಪ್ರಥಮ ದರ್ಜೆಯಲ್ಲಿ 23 ವಿದ್ಯಾರ್ಥಿಗಳು ಹಾಗೂ ದ್ವಿತೀಯ ದರ್ಜೆಯಲ್ಲಿ 7 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಕಾರ್ಯಕ್ರಮದಲ್ಲಿ ಧನ್ನೂರು ಪೊಲೀಸ್ ಠಾಣೆಯ ಪಿಎಸ್‌ಐ ರಾಜಣ್ಣ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಚಂದ್ರಕಾಂತ್ ಫೂಲೆ, ಗ್ರಾ.ಪಂ. ಅಧ್ಯಕ್ಷೆ ಪದ್ಮಿನಿಬಾಯಿ ಠಾಕೂರ್, ಸದಸ್ಯರಾದ ದತ್ತು ಮೂಲಗೆ,

ಶಿವಕುಮಾರ ಪಾಟೀಲ್, ಪ್ರೇಮಕುಮಾರ ಪ್ರಭಾ, ಮಾರುತಿ ಸೂರ್ಯವಂಶಿ, ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಓಂಕಾರ ಸೂರ್ಯವಂಶಿ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ನಿಕಟಪೂರ್ವ ಕಾರ್ಯದರ್ಶಿ ರಾಜಶೇಖರ ಮಂಗಲಗಿ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಚಾರ್ಯ ಭಗವಾನ ಬಿರಾದಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಅಗ್ರ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು:

ಪ್ರಿಯಾಂಕಾ (565 ಅಂಕ, 94.10%), ರೇಷ್ಮಾ (555, 92.5%), ಕೀರ್ತಿ (550, 91.66%), ಯಾಶಾಸಿನ್ (542, 90.33%), ವಿದ್ಯಾರಾಣಿ (527, 87.83%), ಸಾರಿಕಾ (519, 86.5%), ರೇಷ್ಮಾ (515, 85.85%) ಹಾಗೂ ಗುಂಡುಮಣಿ (515, 85.55%) ಉತ್ತಮ ಸಾಧನೆ ತೇರಿದ್ದಾರೆ.

# ಬೂತ್ ಮಟ್ಟದಲ್ಲಿ ಸಂಘಟನೆ ಬಲಪಡಿಸಿ: ಶಾಸಕ ಪ್ರಭು ಚವ್ಹಾಣ



• ಮಲ್ಲಮ್ಮ ನುಡಿ ವಾರ್ತೆ. ಔರಾದ

ಕಾರ್ಯಕರ್ತರು ಮನೆ–ಮನೆಗೆ ತೆರಳಿ ಕೇಂದ್ರ ಸರ್ಕಾರದ ಜನಪರ ಯೋಜನೆಗಳು ಮತ್ತು ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಿಳಿಸಬೇಕು. ಬೂತ್ ಮಟ್ಟದಲ್ಲಿ ಸಂಘಟನೆಯನ್ನು ಮತ್ತಷ್ಟು ಬಲಪಡಿಸಿ, ಮುಂಬರುವ ಚುನಾವಣೆಯಲ್ಲಿ ಪಕ್ಷವನ್ನು ವಿಜಯದತ್ತ ಕೊಂಡೊಯ್ಯಲು ಎಲ್ಲರೂ ಸಂಕಲ್ಪ ಮಾಡಬೇಕು ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದರು.

ಭಾರತೀಯ ಜನತಾ ಪಕ್ಷ ಔರಾದ(ಬಿ) ಮಂಡಲದ ವತಿಯಿಂದ ಪಟ್ಟಣದಲ್ಲಿ ಏಪ್ರಿಲ್ 13 ರಂದು ನಡೆದ ಪಂಡಿತ ದೀನ ದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಬಿಜೆಪಿ ಕಾರ್ಯಕರ್ತರ ಪಕ್ಷ, ಶಿಸ್ತಿನ ಪಕ್ಷ ಹಾಗೂ ದೇಶದ ಹಿತ ಕಾಯುವ ಪಕ್ಷವಾಗಿದೆ. ಪ್ರತಿಯೊಬ್ಬ ಕಾರ್ಯಕರ್ತನ ಶ್ರಮ ಮತ್ತು ನಿಷ್ಠೆಯಿಂದಲೇ ಪಕ್ಷವು ವಿಶ್ವದ ಅತಿ ದೊಡ್ಡ ಪಕ್ಷವಾಗಿ ಬೆಳೆದಿದೆ. ನಾವು ಈ ಪಕ್ಷದ ಶಿಸ್ತಿನ ಶಿಪಾಯಿಗಳಾಗಿರುವುದು ನಮ್ಮ ಹೆಮ್ಮೆ ಎಂದರು. ಪ್ರಶಿಕ್ಷಣ ಮಹಾಭಿಯಾನವು ಕಾರ್ಯಕರ್ತರಿಗೆ ಪಕ್ಷದ ಸಿದ್ಧಾಂತ, ಸಂಘಟನೆ ಮತ್ತು ಕಾರ್ಯಪದ್ಧತಿಯ ಕುರಿತು ಸಮಗ್ರ ಮಾಹಿತಿ ನೀಡುವ ಮಹತ್ವದ ವೇದಿಕೆಯಾಗಿದೆ. ಇದರ ಮೂಲಕ ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ಹೆಚ್ಚಿದ್ದು, ಎರಡು ದಿನಗಳ ಪ್ರಶಿಕ್ಷಣ ವರ್ಗದಲ್ಲಿ ವಿಷಯವಾರು ಉಪನ್ಯಾಸಗಳು ಯಶಸ್ವಿಯಾಗಿ ನಡೆದಿರುವುದಕ್ಕೆ ಸಂತೋಷವಾಗಿದೆ ಎಂದು ಹೇಳಿದರು.

ಬಿಜೆಪಿ ನೇತೃತ್ವದ ಸರ್ಕಾರದಿಂದ ಹಲವಾರು ಜನಪರ ಕೆಲಸಗಳು ಜಾರಿಗೆ ಬಂದಿದ್ದು, ಅಭಿವೃದ್ಧಿ ಕಾರ್ಯಗಳು ವೇಗವಾಗಿ ನಡೆದಿದ್ದವು. ಆದರೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನೆಡೆಯಾಗುತ್ತಿದೆ. ಸರ್ಕಾರದ ಖಜಾನೆ ಖಾಲಿಯಾಗಿದ್ದು, ಆಡಳಿತ ದಿವಾಳಿತನದತ್ತ ಸಾಗುತ್ತಿದೆ. ಇದರ ಪರಿಣಾಮವಾಗಿ ಸಾರ್ವಜನಿಕರ ಮೇಲೆಯೇ ಆರ್ಥಿಕ ಹೊರೆ ಬೀಳುತ್ತಿದ್ದು, ಜನಸಾಮಾನ್ಯರು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷರಾದ ಸೋಮನಾಥ ಪಾಟೀಲ ಮಾತನಾಡಿ, ಪಕ್ಷದ ಸಂಘಟನೆ, ಪಕ್ಷದ ಕಾರ್ಯಕ್ರಮಗಳ ಅನುಷ್ಠಾನ, ಮುಂಬರುವ ಚುನಾವಣೆಗಳಲ್ಲಿ ಕಾರ್ಯಕರ್ತರ ಪಾತ್ರದ ಕುರಿತು ವಿವರಣೆ ನೀಡಿದರು.

ಈ ಸಂದರ್ಭದಲ್ಲಿ ಪ್ರಶಿಕ್ಷಣ ಪ್ರಕೋಷ್ಠದ ರಾಜ್ಯ ಸಾಮಚಾಲಕ ರಾಜಶೇಖರ ನಾಗಮೂರ್ತಿ, ಬುಡಾ ಮಾಜಿ ಅಧ್ಯಕ್ಷ ಬಾಬು ವಾಲಿ, ಮಾರುತಿ ಚವ್ಹಾಣ, ಮಂಡಲ ಅಧ್ಯಕ್ಷ ರಾಮಶೆಟ್ಟಿ ಪನ್ನಾಳೆ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಬಸವರಾಜ ಪವಾರ, ಅರಹಂತ ಸಾವಳೆ, ಜಿಲ್ಲಾ ಮಾಜಿ ಅಧ್ಯಕ್ಷ ಶಿವರಾಜ ಗಂದಗೆ, ಪ್ರಧಾನ ಕಾರ್ಯದರ್ಶಿ ಕಿರಣ ಪಾಟೀಲ, ಮಾಧವ ಹೊಸೂರೆ, ಕಾರ್ಯದರ್ಶಿಗಳಾದ ಮಹೇಶ್ವರ ಸ್ವಾಮಿ ಲುಂಬಿಣಿ ಗೌತಮ, ರಾಜಕುಮಾರ ಪಾಟೀಲ, ಮಹಿಳಾ ಮೋರ್ಚಾ ಅಧ್ಯಕ್ಷೆ ಉಲ್ಲಾಸಿನಿ ಮುಧಾಳೆ, ರೈತ ಮೋರ್ಚಾ ಅಧ್ಯಕ್ಷ ಶಿವರಾಜ ಅಲ್ಮಾಜೆ, ಮಹಿಳಾ ಮೋರ್ಚಾ ಕಾರ್ಯದರ್ಶಿ ವಿಜಯಲಕ್ಷ್ಮಿ ಕೌಟಗೆ, ಭಾಲ್ಕಿ ಮಂಡಲ ಅಧ್ಯಕ್ಷ ವೀರಣ್ಣಾ ಕಾರಬಾರಿ, ಮಂಡಲ ಪ್ರಧಾನ ಕಾರ್ಯದರ್ಶಿ ಖಂಡೋಬಾ ಕಂಗಟೆ, ಮುಖಂಡರಾದ ಚನ್ನಬಸವ ಬಳತೆ, ಸತೀಷ ರಾಠೋಡ ರೇವಣಸಿದ್ದಪ್ಪ ಜಾಡರ, ವೆಂಕಟ ಲಾಳೆ, ಬಿಎ▯▯▯–1 ಪ್ರವೀಣ ಕಾರಬಾರಿ ಸೇರಿದಂತೆ ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಕಲ್ಯಾಣದಲ್ಲಿ ಗುರು ಶಿಷ್ಯರ ಸಮಾಗಮ , ಪ್ರಪಂಚದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಇಲ್ಲಿನ ಎಸ್. ಎಸ್. ಕೆ. ಬಸವೇಶ್ವರ ಮಹಾ ವಿದ್ಯಾಲಯದಲ್ಲಿ ನಡೆದ 2013ರಿಂದ 2016ರ ವರೆಗಿನ ಶೈಕ್ಷಣಿಕ ವರ್ಷದಲ್ಲಿ ಬಿ.ಎ ಪದವಿ ಮುಗಿಸಿದ ಹಳೆವಿದ್ಯಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮೇಳನ ಕಾರ್ಯಕ್ರಮವನ್ನು ಜರುಗಿತು. ತಮ್ಮಗೆ ಅಕ್ಷರ ಜ್ಞಾನವನ್ನು ಎರೆದು ಬಾಳು ಬೆಳಗಿದ ಎಲ್ಲಾ ಗುರುಗಳಿಗೆ ಸನ್ಮಾನಿಸಿ ಗೌರವಿಸಿ ಗುರು ಕಾಣಿಕೆಯನ್ನು ನೀಡಿದರು. ನಿವೃತ್ತ ಪ್ರಾಧ್ಯಾಪಕರಾದ ಪ್ರೋ.ಸಿ.ಬಿ ಪ್ರತಾಪೂರೆ ಅವರು ಉದ್ಘಾಟಿಸಿ ಮಾತನಾಡಿ ಶಿಕ್ಷಕ ವಿದ್ಯಾರ್ಥಿಗಳ ಭವಿಷ್ಯವನ್ನು ಕಲ್ಪಿಸಿಕೊಳ್ಳುವಂತೆ ಮಾಡಿ ಅವರ ಭವಿಷ್ಯವನ್ನು ನಿರ್ಮಿಸುತ್ತಾನೆ ಆದ್ದರಿಂದ ಈ ಪ್ರಪಂಚದಲ್ಲಿ ಶಿಕ್ಷಕನ ಪಾತ್ರ ಮಹತ್ವದ್ದಾಗಿದೆ ಎಂದರು.

ಪ್ರೊ.ವೆಂಕಣ್ಣ ಡೋಣ್ಣೆಗೌಡರ್ ಮಾತನಾಡಿ ಸಮಾಜದಲ್ಲಿ ಅನೇಕ ಸಾಮಾಜಿಕ ಸಮಸ್ಯೆಗಳು ಉದ್ಭವಿಸಿವೇ ಅವುಗಳನ್ನು ಪರಿಹರಿಸಲು ಪ್ರಯತ್ನಿಸಿ ಎಂದು ಹೇಳಿದರು.

ಪ್ರೊ. ಜಿ.ಎಸ್.ಕರಣೆ, ಪ್ರೊ.ಡಿ.ಟಿ.ಅಂಗಡಿ, ಪ್ರೊ. ಎಸ್. ಆರ್.ಘಟಪಣದಿ , ಪ್ರೊ.ಕೆ.ಎಸ್.ಬಿರಾದಾರ, ಪ್ರೊ.ಎಸ್. ಕೆ .ಪಟವಾಡಿ, ಪ್ರೊ. ಡಿ.ಎಸ್.ಪಾಟೀಲ. ಮುಖ್ಯ ಅತಿಥಿಗಳಾದ ಡಾ.ವಿರಶೇಟ್ಟಿ ಗಾರಂಪಳ್ಳಿ ಯವರು ಮಾತನಾಡಿದರು. ಮಹಾವಿದ್ಯಾಲಯದ ಹಳೆ ವಿದ್ಯಾ ಸಂಸ್ಥೆರ್ಥಿಯಾದ ವೀರೇಶ ತಮ್ಮ ಹಳೆ ಆಟಯ ನೆನಪುಗಳನ್ನು ಮೆಲುಕು ಹಾಕಿದರು.

ಎಸ್ ಎಸ್ ಕೆ ಬಸವೇಶ್ವರ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಶಿವಕುಮಾರ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ ಶರಣಬಸವೇಶ್ವರ ಸಂಸ್ಥಾನವು ಗುರು ಶಿಷ್ಯರ ನಡುವಿನ ಸಂಬಂಧ ಮಹತ್ವವನ್ನು ಸಾರಿದ ಮಹಾನ್ ಸಂಸ್ಥೆಯಾಗಿದೆ. ಇಂತಹದ್ದೆ ಒಂದು ಕ್ಷಣಕ್ಕೆ ಇಂದು ನಮ್ಮ ಮಹಾವಿದ್ಯಾಲಯ ಸಾಕ್ಷಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಪ್ರೊ.ವಿಠೋಬಾ ಡೋಣ್ಣೆಗೌಡರ್ , ಕಲ್ಯಾಣಪ್ಪ ನಾವದಗಿ, ಸೂರ್ಯಕಾಂತ ನಾಸೆ , ರೂಪೇಶ, ಮಹಾದೇವ.ಡಿ, ಭೀಮಾಶಂಕರ ಪೂಜಾರಿ, ಕು.ಭಾರತಿಮಠ, ಶಿಲ್ಪಾ.ಬಿರಾದಾರ, ಜ್ಯೋತಿ ಪಾಟೀಲ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ 2013–16ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಂಗಮೇಶ ಮತ್ತು ವೀರೇಶ ನಿರೂಪಿಸಿದರು, ಕು.ರಾಜಶ್ರೀ ಪ್ರಾರ್ಥನಾ ಗೀತೆಯನ್ನು ಹಾಡಿದರು, ಅರ್ಚನಾ ವಂದಿಸಿದರು.

# ಬಿಸಿಗಾಳಿ ಹೆಚ್ಚಾಗುವ ಸಾಧ್ಯತೆ ಸಾರ್ವಜನಿಕರು ಸಲಹೆ ಪಾಲಿಸಲು ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಭಾರತೀಯ ಹವಾಮಾನ ಇಲಾಖೆಯ ಮುನ್ನೆಚ್ಚರಿಕೆಯಂತೆ ಕಲಬುರಗಿ ಜಿಲ್ಲೆಯಾದ್ಯಂತ ಮುಂಬರುವ ಏಪ್ರಿಲ್ 15 ರಿಂದ 17 ರವರೆಗೆ ಬಿಸಿಗಾಳಿ ಪರಿಸ್ಥಿತಿ ಹೆಚ್ಚಾಗುವ ಸಾಧ್ಯತೆಯಿದ್ದು, (ಎಲ್ಲೋ ಅಲರ್ಟ್ ನೀಡಲಾಗಿದೆ). ಈ ಹಿನ್ನೆಲೆಯಲ್ಲಿ ಹೀಟ್ ವೇವ್ (ಶಾಖದ ಹೊಡೆತ) ಹೀಟ್ ವೇವ್ ಸ್ಟ್ರೋಕ್‌ದಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿದ್ದು, ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಾರ್ವಜನಿಕರು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ನೀಡಿರುವ ಈ ಕೆಳಕಂಡ ಸಲಹೆಗಳನ್ನು ನೀಡಿರುವ ಸಲಹೆಗಳನ್ನು ಪಾಲಿಸಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಕಲಬುರಗಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆದ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ.

ಸಾರ್ವಜನಿಕರಿಗೆ ಸಲಹೆಗಳು: ವಿಶೇಷವಾಗಿ ಸಾರ್ವಜನಿಕರು ಮಧ್ಯಾಹ್ನ 12 ರಿಂದ ಸಂಜೆ 4 ಗಂಟೆಯವರೆಗೆ ಬಿಸಿಲಿನಲ್ಲಿ ಹೋಗುವುದನ್ನು ತಪ್ಪಿಸಬೇಕು. ಹೆಚ್ಚಾಗಿ ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ನೀರು ಕುರಿಯಬೇಕು. ಸಾಧ್ಯವಾದಷ್ಟು ಹಗುರವಾದ, ತಿಳಿ ಬಣ್ಣದ, ಸಡಿಲವಾದ ಮತ್ತು ರಂಧ್ರವಿರುವ ಹತ್ತಿ ಬಟ್ಟೆಗಳನ್ನು ಧರಿಸಬೇಕು. ಬಿಸಿಲಿನಲ್ಲಿ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಛತ್ರಿ/ಟೋಪಿ, ಬೂಟುಗಳು ಅಥವಾ ಚಪ್ಪಲ್‌ಗಳನ್ನು ಬಳಸಬೇಕು. ಹೊರಗಿನ ತಾಪಮಾನ ಹೆಚ್ಚಿರುವಾಗ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸಬೇಕು. ಮಧ್ಯಾಹ್ನ 12 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಹೊರಗೆ ಕೆಲಸ ಮಾಡುವುದನ್ನು ತಪ್ಪಿಸಬೇಕು. ದೇಹವನ್ನು ನಿರ್ಜಲೀಕರಣಗೊಳಿಸುವ ಆಲೋಹಾಲ್, ಚಹಾ, ಕಾಫಿ ಮತ್ತು ಕಾರ್ಬೋನೇಟೆಡ್ ತಂಪು ಪಾನೀಯಗಳನ್ನು ಸೇವನೆ ಮಾಡುವುದನ್ನು ತಪ್ಪಿಸಬೇಕು.

# ಖೇಡ ಗ್ರಾಮ ಪಂಚಾಯತ್‌ನಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ, ಕಮಲನಗರ

ತಾಲೂಕಿನ ಖೇಡ ಗ್ರಾಮ ಪಂಚಾಯತ್ ಕಾರ್ಯಾಲಯದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಸಡಗರ ಮತ್ತು ಗೌರವದಿಂದ ಆಚರಿಸಲಾಯಿತು.

ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಕಆಔ) ಸಂಧ್ಯಾರಾಣಿ ಅವರು ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಜೀವನಾದರ್ಶಗಳು ಮತ್ತು ಅವರು ದೇಶಕ್ಕೆ ನೀಡಿದ ಸಂವಿಧಾನದ ಮಹತ್ವವನ್ನು ಸ್ಮರಿಸಿದರು. ಸಮಾಜದ ಕಟ್ಟಕಡೆ–ಯ ವ್ಯಕ್ತಿಗೂ ನ್ಯಾಯ ಸಿಗುವಂತಾಗಲು ಅವರ ವಿಚಾರಧಾರೆಗಳು ಇಂದಿಗೂ ದಾರಿದೀಪವಾಗಿವೆ ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ ಸಿಬ್ಬಂದಿ ವರ್ಗ ಹಾಗೂ ಗ್ರಾಮದ ಹಿರಿಯ ಮುಖಂಡರು ಭಾಗವಹಿಸಿದ್ದರು.

# ಬಿ.ಆರ್. ಅಂಬೇಡ್ಕರ್ ಜಯಂತಿ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ತಾಲೂಕ ಪಂಚಾಯಿತಿ ಅಂಕೋಲಾ ಹಾಗೂ ಸಮಾಜಕಲ್ಯಾಣ ಇಲಾಖೆ ಅಂಕೋಲಾ ಇವರ ಆಶ್ರಯದಲ್ಲಿ ತಾ. ಪಂ.ಸಭಾಭವನದಲ್ಲಿ ಡಾ.ಬಿ ಆರ್ ಅಂಬೇಡ್ಕರ ಅವರ 135 ನೇ ಹಾಗೂ ಬಾಬು ಜಗಜೀವನರಾಂ 119ನೆ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು.

ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ರಾಮು ಗುನಗಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ ಅವರ ದೂರದೃಷ್ಟಿತ್ವದಿಂದಾಗಿ ಇಡೀ ಜಗತ್ತಿಗೇ ಮಾದರಿಯಾದ ಒಂದು ಉತ್ತಮ ಸಂವಿಧಾನದ ರಚನೆಗೆ ಕಾರಣವಾಯಿತು. ಇಂತಹ ಶ್ರೇಷ್ಠ ಸಂವಿಧಾನವನ್ನು ಎಲ್ಲರೂ ಗೌರವಿಸಿ, ಎಲ್ಲರ ಹಕ್ಕುಗಳನ್ನೂ ಗೌರವಿಸಿ ನಮ್ಮ ಕರ್ತವ್ಯಗಳನ್ನು ನಿರ್ವಹಿಸೋಣ ಎಂದರು.ಶಿರಸ್ತೆದಾರ ಗಿರೀಶ ಜಾಂಬಾವಳಿಕರ ಅಧ್ಯಕ್ಷತೆ ವಹಿಸಿದ್ದ ಮಾತನಾಡಿ, ಭಾರತದೇಶ ಶ್ರೇಷ್ಠ ಸಂವಿಧಾನವನ್ನು ಹೊಂದಿದೆ. ಎಂದರು.

# ಬಾಬಾಸಾಹೇಬರು ಆರಾಧಕರ ಸ್ವತ್ತಲ್ಲ, ಅಧ್ಯಯನಶೀಲ, ಕ್ರಿಯಾತ್ಮಕ ಅನುಯಾಯಿಗಳ ಸ್ವತ್ತು

• ಮಲ್ಲಮ್ಮ ನುಡಿ ವಾರ್ತೆ: ಗಂಗಾವತಿ



ನಾಗೇಶ್ವರರಾವ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಪ್ರಾಸ್ತಾವಿಕವಾಗಿ ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಶಂಕ್ರಪ್ಪ ಎಂ ಮಾತನಾಡಿ . ಡಾ. ಅಂಬೇಡ್ಕರ್ ಅವರು ಬಹುಮುಖ ಪ್ರತಿಭೆಯ ಮಹಾನ್ ವ್ಯಕ್ತಿಯಾಗಿದ್ದು, ಶ್ರೇಷ್ಠ ಆರ್ಥಿಕ ತಜ್ಞ, ರಾಜಕೀಯ ಚಿಂತಕ, ತತ್ವಜ್ಞಾನಿ ಹಾಗೂ ಸಮಾನತೆಯ ಹರಿಕಾರರಾಗಿದ್ದರು ಎಂದು ವಿವರಿಸಿದರು. ಬಾಬಾಸಾಹೇಬರು ಪುಸ್ತಕಪ್ರೇಮಿಯಾಗಿದ್ದು, ಅವರ ಜ್ಞಾನ ಸಂಪತ್ತು ಹಾಗೂ ಚಿಂತನೆಗಳು ಇಂದಿಗೂ ಮುಂದಿನ ಪೀಳಿಗೆಗಳಿಗೆ ಮಾರ್ಗದರ್ಶಕವಾಗಿವೆ

ಎಂದು ಹೇಳಿದರು. "ಮುಂದೊಂದು ದಿನ ಇಂಥ ಮಹಾನ್ ವ್ಯಕ್ತಿ ಜೀವಂತವಾಗಿದ್ದರೆಂಬುದನ್ನು ಜನಾಂಗ ನಂಬದೇ ಹೋಗಬಹುದು" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಪ್ರೊ.ಕರಿಗೂಳಿ ಅವರು ಮಾತನಾಡಿ, ಈ ಹಿಂದೆ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಮಾಡುವುದಕ್ಕೂ ಕೂಡ ಪಟ್ಟಭದ್ರ ಹಿತಾಸಕ್ತಿಗಳು ಬಿಡುತ್ತಿರಲಿಲ್ಲ ಆದರೆ ಇಂದು ಸಪ್ತಸಾಗರಾದಾಚೆ ಅವರ ಜಯಂತಿಯನ್ನು ಆಚರಿಸುತ್ತಿರುವುದು ಅವರ ವಿದ್ವತ್ತಿಗೆ ಹಾಗೂ ಜಾಗತಿಕ ಮಟ್ಟದಲ್ಲಿ ಅವರ ವಿಚಾರಗಳ ಪ್ರಸ್ತುತತೆಗೆ ಸಾಕ್ಷಿ ಎಂದರು. ಅವರು ಕೇವಲ ಆರಾಧಿಸುವವರ ಸ್ವತಲ್ಲ ಬದಲಾಗಿ ಅಧ್ಯಯನಶೀಲ, ಚಿಂತಾನಶೀಲ ರಚನಾತ್ಮಕ ಕಾರ್ಯಗಳನ್ನು ಮಾಡುವ ಅನುಯಾಯಿಗಳ ಸ್ವತ್ತು, ಬಾಬಾಸಾಹೇಬರ ಮೇರು ಕೃತಿಗಳಲ್ಲೊಂದಾದ 'ಜಾತಿ ವಿನಾಶ' (ಂಟಿಟಿಖುಟಚಿಣುಂಟಿ ಂಜಿ ಅಚಿಣಜ) ಎಂಬ ಪುಸ್ತಕವು, ಪ್ರಪಂಚದ ಪ್ರಾಚೀನ ಭಾಷೆಗಳಲ್ಲೊಂದಾದ ಹಿಬ್ರೂ ಭಾಷೆಗೆ ಅನುವಾದಗೊಂಡು, ಆ ಸಮಾಜದಲ್ಲಿ ಉಂಟಾದ ಕ್ಷಿಪ್ರ ಸಾಮಾಜಿಕ ಬದಲಾವಣೆಗಳ ಮೇಲೆಯೂ ಬೆಳಕು ಚೆಲ್ಲುತ್ತಿದೆ, ಜಗತ್ತಿನ ಇತರೆ ಭಾಗದ ನಾಗರಿಕರ ಅವಶ್ಯಕತೆಗಳಿಗೂ ಸ್ಪಂದಿಸುವ ವಿಚಾರಧಾರೆ ಬಾಬಾಸಾಹೇಬರ ಕೃತಿಗಳಿಗಿದೆ ಅಂತೆಯೇ ಬಾಬಾಸಾಹೇಬರನ್ನು ಜಾಗತಿಕ ಸಮಾನತೆಯ ತತ್ವಜ್ಞಾನಿ ಎಂದು ಕರೆಯುವುದು.

ಕಾರ್ಯಕ್ರಮದಲ್ಲಿ ಅಧ್ಯಾಪಕರಾದ

ಡಾ.ಸರ್ಫರಾಜ್ ಅಹ್ಮದ್, ಐಕ್ಯೂಎಸಿ ಸಂಚಾಲಕರಾದ ರವಿಕುಮಾರ, ಶಶಿಕುಮಾರ್, ಕಚೇರಿ ಸಿಬ್ಬಂದಿಯಾದ ಜಬೀನ, ವಿನಾಯಕ, ಉಪನ್ಯಾಸಕರಾದ ಈಶಪ್ಪ, ಅಯ್ಯಪ್ಪ, ಪೆನಾಜ ಹಾಗೂ ಸಹಾಯಕ ಸಿಬ್ಬಂದಿ ಉಪಸ್ಥಿತರಿದ್ದರು.

# ಶ್ರೇಷ್ಠವಾದ ಸಂವಿಧಾನ ಭಾರತಕ್ಕೆ ನೀಡಿದ ಮಹಾನ್ ಚೇತನ ಅಂಬೇಡ್ಕರ್: ನವೀನ್



• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ಭಾರತೀಯ ಜನತಾ ಪಾರ್ಟಿ ಕೊಪ್ಪಳ ಜಿಲ್ಲೆಯ ಕಾರ್ಯಾಲಯದಲ್ಲಿ ಹಮ್ಮಿಕೊಂಡ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135 ನೇ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಕುಮಾರ ಗುಳಗಣ್ಣನವರ್ ಮಾತನಾಡಿ ವಿಶ್ವದಲ್ಲಿಯೇ ಒಂದು ಶ್ರೇಷ್ಠವಾದ ಸಂವಿಧಾನವನ್ನು ರಚನೆ ಮಾಡಿ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಹುಟ್ಟು ಹಾಕಿ ದೇಶವನ್ನು ಸದೃಢವಾಗಿ ಕಟ್ಟಲು ಭದ್ರ ಬುನಾದಿ ಹಾಕಿದವರು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕಂಡ ಸಮಾನತೆಯ ಭಾರತದ ಕನಸನ್ನು ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಸಬ್ ಕಾ ವಿಶ್ವಾಸ್ ಸಬ್ ಕಾ ಪ್ರಯಾಸ್ ಎನ್ನುವ ಘೋಷಣೆಯೊಂದಿಗೆ ಭಾರತವನ್ನು ಸದೃಢವಾಗಿ ಕಟ್ಟುತ್ತಿರುವರು ನಮ್ಮ ಹೆಮ್ಮೆಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು. ಪಂಚ ತೀರ್ಥ ಯೋಜನೆ ಮೂಲಕ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಿದ್ದು ನಮ್ಮ ಕೇಂದ್ರ ಸರಕಾರ.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್, ಡಾ. ಬಸವರಾಜ ಕ್ಯಾವಟರ್, ಜಿಲ್ಲಾ ಎಸ್ ಸಿ ಮೋರ್ಚಾ ಅಧ್ಯಕ್ಷರಾದ ಗಣೇಶ ಹೊರಟಾತ್ನಾಳ್, ಮಾಂತೇಶ ಮೈನಹಳ್ಳಿ, ಅಂಬರೀಷ್ ಮುರಳಿ, ವೀರೇಶ್ ಸಜ್ಜನ್, ಮಹಾಲಕ್ಷ್ಮಿ ಕಂದಾರಿ, ರಾಘುಚಾಕ್ರಿ ಮಾರುತಿ, ಕನಕ ಮೂರ್ತಿ ಚಲವಾದಿ, ಸುನಿಲ್ ಹೆಸರೂರ್ ಪ್ರದೀಪ್ ಪಲ್ಲೆದ್ ಸೋಮಣ್ಣ ಸೋಂಪುರ್ ಉಪಸ್ಥಿತರಿದ್ದರು

## ಅಂಬೇಡ್ಕರ್ ಜಯಂತಿ ಅಂಗವಾಗಿ ಸಾಮೂಹಿಕ ವಿವಾಹ

# ಜಯಂತಿ ಆಚರಣೆ ಮಾತ್ರವಲ್ಲ, ಜೀವನದಲ್ಲಿ ಅಂಬೇಡ್ಕರ್ ಚಿಂತನೆ ಅಗತ್ಯ: ಪ್ರಜ್ಞಾ ಬಂತೆ

• ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ



ನಗರದ ಹಿರೇಜಂತಕಲ್ ಚಲವಾದಿ ವಾಣಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಸರಳವಾಗಿ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಪ್ರಜ್ಞಾಬಂತೀಜಿ, ಮಾತನಾಡಿ ನಿಮ್ಮ ಹೊಸ ದಾಂಪತ್ಯ ಜೀವನದಲ್ಲಿ ಸರಳತೆ ಮತ್ತು ಸಹನೆಯ ಮಹತ್ವವನ್ನು ವಿವರಿಸಿ, "ಗಂಡ–ಹೆಂಡತಿ ಇಬ್ಬರೂ ಪರಸ್ಪರ ಹೊಂದಿಕೊಂಡು ಸಾಗಿದಾಗ ಮಾತ್ರ ಸುಖ ಸಂಸಾರ ನೆಮ್ಮದಿಯಿಂದ ಸಾಗಲು ಸಾಧ್ಯ. ಮತ್ತು ಯಾವುದೇ ಸಮಸ್ಯೆ ಬಂದರೂ ಶಾಂತಿ, ತಾಳ್ಮೆ ಮತ್ತು ಸಹನೆಯಿಂದ ಬಗೆಹರಿಸಿಕೊಂಡು ಜೀವನ ನಡೆಸಿದಾಗ ಮಾತ್ರ ಬದುಕಿಗೆ ನಿಜವಾದ ಅರ್ಥ ಸಿಗುತ್ತದೆ" ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಗಾಲಿ ಜನಾರ್ದನ್ ರೆಡ್ಡಿ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಸಾಮೂಹಿಕವಾಗಿ ಆಚರಿಸುವುದು ಎಲ್ಲರಿಗೂ ಆದರ್ಶವಾಗಿದ್ದು, ಕೇವಲ ಒಂದು ದಿನ ಮಾತ್ರ ಆಚರಿಸದೇ, ಅವರ ತತ್ವಗಳನ್ನು ವರ್ಷಪೂರ್ತಿ ಸ್ಮರಿಸುವುದು ನಿಜವಾದ ಗೌರವ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಪರಣ್ಣ ಮನವಳ್ಳಿ, ಉದ್ಯಮಿ ಸರ್ವೇಶ್, ದಲಿತ ಹಿರಿಯ ಹೋರಾಟಗಾರ ಹುಲುಗಪ್ಪ ಮಾಗಿ, ವೆಂಕಟೇಶ್ ಮನಹಳ್ಳಿ. ಕೆ ವಿರುಪಾಕ್ಷಪ್ಪ ಮೂರ್ತಿ ನಗರಸಭೆ ಪೌರಾಯುಕ್ತರು ಮಾಜಿ ನಗರಸಭೆ ಸದಸ್ಯರಾದ ಎಫ್. ರಾಘವೇಂದ್ರ ಹಾಗೂ ಹುಲಿಗೆಮ್ಮ ಕಿರಿಕಿರಿ, ಹುಲಗಪ್ಪ ಮಾಸ್ತರ್, ಚಲವಾದಿ ಸಮಾಜದ ಅಧ್ಯಕ್ಷ ಹರೀಶ್ ಕೋರಿ, ತಿಮ್ಮಣ್ಣ ಮುಂಡೋಸ್, ವೀರೇಶ ಅತಿರ, ಭೀಮಣ್ಣ ಕರಿಮುತ್ತಿ, ಆಂಜನೇಯ, ರವಿ ಬಾಬು ಆರ್ತಿ, ರವಿ ಸೋಮನಾಳ, ರೇಣಪ್ಪ ಗೋಟೂರು, ಮುನಿಯಪ್ಪ, ಹನುಮಂತ ಸೇರಿದಂತೆ ಅನೇಕರು ಹಾಗೂ ಅಂಬೇಡ್ಕರ್ ಅಭಿಮಾನಿಗಳು ಭಾಗವಹಿಸಿದರು.




ಕುರುಗೋಡು: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಇಲ್ಲಿಗೆ ಸಮೀಪದ ಬಸವಪುರ ಗ್ರಾಮದ ಪ್ರಮುಖ ವೃತ್ತದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಶಿಕ್ಷಣ, ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯದ ಮಹತ್ವವನ್ನು ಅವರು ಪ್ರತಿಪಾದಿಸಿದ್ದು, ಪ್ರತಿಯೊಬ್ಬರೂ ಅವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಪ್ರತಿಯೊಬ್ಬರೂ ಮಕ್ಕಳಿಗೆ ಶಿಕ್ಷಣದ ಮೂಲಕ ಮನೆ ಮನೆಯಲ್ಲಿ ಅಂಬೇಡ್ಕರ್ ಅವರನ್ನು ಹುಟ್ಟಿಸಬೇಕು ಇಂದಿನ ಯುವಜನತೆ ಅವರ ಮಾರ್ಗದಲ್ಲಿ ನಡೆದು ಸಮಾಜ ನಿರ್ಮಾಣದಲ್ಲಿ ಪಾಲ್ಗೊಳ್ಳಬೇಕು ಎಂದು ಮುಖಂಡರು ಸಲಹೆ ನೀಡಿದರು.ಜಯಂತಿ ನಿಮಿತ್ತ ಅನ್ನಸಂತರ್ಪಣೆ ನಡೆಯಿತು.ನಂತರ ಮೆರವಣಿಗೆ ವಿಜೃಂಭಣೆಯಿಂದ ಜರುಗಿತು ಈ ಸಂದರ್ಭದಲ್ಲಿ ಬಸವಪುರ ಗ್ರಾಮದ ಹಿರಿಯ ಮುಖಂಡರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಅಂಬೇಡ್ಕರ್ ವಾದವೇ ನಿಜವಾದ ರಾಷ್ಟ್ರ ಪಥ



• **ಮಲ್ಲಮ್ಮ ನುಡಿ ವಾರ್ತೆ, ಹುಣಸೂರು**

ಅಂಬೇಡ್ಕರ್ ವಾದವೇ ನಿಜವಾದ ರಾಷ್ಟ್ರ ಪಥ ಎಂದು ಶಾಲೆಯ ಮುಖ್ಯ ಶಿಕ್ಷಕ– ಎಚ್.ಎಸ್. ಸುರೇಶ್ ಅಭಿಪ್ರಾಯ. ತಿಳಿಸಿದರು ನಗರ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಯಲ್ಲಿ ಆಯೋಜಿಸಿದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಿ ನಂತರ ಕಾರ್ಯಕ್ರಮದಲ್ಲಿ ಮತದಾರರುಮಹಾ ನಾಯಕ ಅಂಬೇಡ್ಕರ್ ಅವರು ತಮ್ಮ ಎಲ್ಲಾ ಓದಿನ ಹಾಗೂ ಅನುಭವದ ಜ್ಞಾನವನ್ನು ರಾಷ್ಟ್ರಪಥವಾಗಿ ಸಂವಿಧಾನದ ಮೂಲಕ ಪರಿವರ್ತಿಸಿದರು. ಇದರಿಂದಾಗಿ ಅವರು ಕಂಡ ಕನಸುಗಳೆಲ್ಲಾ ಸಮಾನತಾವಾದವಾಗಿ ಸಂವಿಧಾನದ ಮೂಲಕ ಸಾಕಾರಗೊಂಡಿದೆ ಎಂದು ಅಭಿಪ್ರಾಯ ಪಟ್ಟರುಸಾಹಿತಿ ಹಾಗೂ ಶಿಕ್ಷಕ ಡಾ. ಮಾದುಪ್ರಸಾದ್ ಮಾತನಾಡಿ ಸಂವಿಧಾನದ ವೈವಿಧ್ಯತೆಯು ಈ ದೇಶದ ಅಸ್ಮಿತೆಯಾಗಿದೆ. ಅಂಬೇಡ್ಕರ್ ಅವರು ಪ್ರಧಾನವಾಗಿ ಈ ದೇಶವನ್ನು ಮೇಲೆತ್ತಲು ಅವಶ್ಯಕವಾದ ಸಂವಿಧಾನವು ನಮಗೆ ವರವಾಗಿ ಸಿಕ್ಕಿತು ಎಂದರು. ಶಿಕ್ಷಕ ನರಸಿಂಹ ಅವರು ಮಾತನಾಡಿ ಅಂಬೇಡ್ಕರ್ ಅಂತಹ ಯುಗಪುರುಷರು ಜನ್ಮ ಜನ್ಮಕ್ಕೂ ನೆನೆದುಕೊಳ್ಳುವ ನಾಯಕ. ಅವರಿಂದ ಕೋಟಿ ಕೋಟಿ ಜನರ ಬದುಕು ಹಸನಾಗಿದೆ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ ಉಪಾಧ್ಯಕ್ಷ ಮೊಹಮ್ಮದ್ ರಫಿಕ್ ವಹಿಸಿದ್ದು ಕಾರ್ಯಕ್ರಮದಲ್ಲಿ ಮಾತನಾಡಿದ್ದಾರೆ ಹಳೇ ವಿದ್ಯಾರ್ಥಿ ಬಳಗದ ಅಧ್ಯಕ್ಷ ರಮೇಶ್ ಶಿಕ್ಷಕರಾದ ಜಯರಾಮೇಗೌಡ. ಡಾ.ಚಲುವರಾಜು, ಸೋಮಸುಂದರ್, ಕೃಷ್ಣಮೂರ್ತಿ, ವೀಣ, ಆರೋಕ್ಯಮೇರಿ, ವಸಂತಕುಮಾರಿ, ಶಿಲ್ಪ, ಸುಧಾ, ನರಸಿಂಹಯ್ಯ ಶೋಭರಾಣಿ, ಕವಿತ, ಪುಷ್ಪ,ಕಾಜೀಮ ಹಾಜರಿದ್ದರು.

# ಪಿಯು ಪರೀಕ್ಷೆ : ವಿದ್ಯಾ ಕಲ್ಯಾಣಿ ಸಾಧನೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**



ಜಿಲ್ಲೆಯ ಜಮಖಂಡಿ ತಾಲೂಕಿನ ಕೊಣ್ಣೂರ ಪಿಯು ಕಾಲೇಜಿನ ವಿದ್ಯಾರ್ಥಿನಿ, ಬಾಗಲಕೋಟೆಯ ಶಶಿಧರ ಶರಣಪ್ಪ ಕಲ್ಯಾಣಿ ಅವರ ಪುತ್ರಿ ವಿದ್ಯಾ ಶಶಿಧರ ಕಲ್ಯಾಣಿ ಶೇ. 94.83 ರಷ್ಟು (569ಅಂಕ) ಫಲಿತಾಂಶ ಪಡೆದು ಸಾಧನೆ ಮಾಡಿದ್ದಾಳೆ.

ಕನ್ನಡ ವಿಷಯದಲ್ಲಿ 99, ಇಂಗ್ಲೀಷ 92, ಭೌತಶಾಸ್ತ್ರ 96, ರಸಾಯಣಶಾಸ್ತ್ರ 93, ಗಣಿತ 94 ಹಾಗೂ ಜೀವಶಾಸ್ತ್ರ ವಿಷಯಕ್ಕೆ 95 ಅಂಕ ಸೇರಿ ಒಟ್ಟು ಶೇ.94.83 ಅಂಕ ಪಡೆದಿದ್ದಾಳೆ.


# ಅಸಮಾನತೆ ಹೋಗಲಾಡಿಸಲು ಶಿಕ್ಷಣವೇ ಏಕೈಕ ಮಾರ್ಗ: ಹೊಸಮನಿ

• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ**

ಪಟ್ಟಣದ ಆನಂದ ಬುದ್ಧ ವಿಹಾರದಲ್ಲಿ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಭಗವಾನ್ ಬುದ್ಧ ಮೂರ್ತಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಮಂಜು ಕೊಂಬಿನ್ ಪಂಚಶೀಲ ಹಾಗೂ ತ್ರೀಸರಣ ಪಠಣ ಬೋಧಿಸಿದರು. ಮಾನಪ್ಪ ಬಡಿಗೇರ ಹಾಗೂ ಪರಶುರಾಮ ಬಳಬಟ್ಟಿ ಧ್ವಜಾರೋಹಣ ನೆರವೇರಿಸಿದರು.

ದಲಿತ ಮುಖಂಡ ಲಾಲಪ್ಪ ಹೊಸಮನಿ ಅವರು ಅಂಬೇಡ್ಕರ್ ಅವರ ಜೀವನ ಸಂದೇಶದ ಕುರಿತು ಮಾತನಾಡುತ್ತಾ, ಅಂಬೇಡ್ಕರ್ ಅವರು ತಮ್ಮ ಶಾಲಾ–ಕಾಲೇಜು ದಿನಗಳಲ್ಲಿ ಹಾಗೂ ಉದ್ಯೋಗದ ಸ್ಥಳಗಳಲ್ಲಿ ತೀವ್ರವಾದ ಜಾತಿ ನಿಂದನೆ ಮತ್ತು ಅವಮಾನಗಳನ್ನು ಎದುರಿಸಿದರು. ಈ ಸಾಮಾಜಿಕ ಪಿಡುಗನ್ನು ತೊಡೆದುಹಾಕಲು ಪಣತೊಟ್ಟ ಅವರು, ಹಗಲು–ರಾತ್ರಿ ಅಭ್ಯಾಸ ಮಾಡಿ, ನಮ್ಮ ದೇಶಕ್ಕೆ ಬೃಹತ್ ಸಂವಿಧಾನವನ್ನು ಅರ್ಪಿಸಿದರು. ನಮ್ಮ ಸಂವಿಧಾನವು ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗದ ಮೂಲಕ ದೇಶವನ್ನು ಮುನ್ನಡೆಸುತ್ತಿದೆ. ಸಮಾಜದಲ್ಲಿರುವ ಅಸಮಾನತೆ ಹೋಗಲಾಡಿಸಲು ಶಿಕ್ಷಣವೇ ಏಕೈಕ ಮಾರ್ಗ, ಎಲ್ಲರೂ ಶಿಕ್ಷಣವಂತರಾಗಿ, ಸಂಘಟಿತರಾಗಿ ಅನ್ಯಾಯದ ವಿರುದ್ಧ ಹೋರಾಡಿದರೆ ಮಾತ್ರ ಜಯ ಸಿಗಲು ಸಾಧ್ಯ ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ತಿಪ್ಪಣ್ಣ ಅಗ್ನಿ, ಶಿವಶರಣ ಯಾಳಗಿ, ಮಾಳಪ್ಪ ರಾಜಾಪುರ, ಸೈದಪ್ಪ ಅರಳಗುಂಡಗಿ, ಶಿವಪ್ಪ ಕಂಬಾರ, ಮಹೇಶ್ ಕಟ್ಟಿಮನಿ, ರಾಯಪ್ಪ ಯತ್ನಾಳ್, ಜುಮಣ್ಣ ಕಟ್ಟಿಮನಿ, ಸಿದ್ದಪ್ಪ ಕಂಬಾರ, ಧರ್ಮಣ್ಣ ಚಿಂಚೋಳಿ, ಮಾಳಪ್ಪ ಯತ್ನಾಳ್, ಹಣಮಂತ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



**ಶ್ರೀ ಸತ್ಯಸಾಯಿ ಬಾಬಾ ಜನ್ಮದಿನ: ಪ್ರೇಮ ಪ್ರವಾಹಿನಿ ರಥ ಯಾತ್ರೆ**

# ವಿಬಿಆರ್ ಆಸ್ಪತ್ರೆಯಲ್ಲಿ ನೂತನ ಎನ್‌ಐಸಿಯು ಘಟಕಕ್ಕೆ ಚಾಲನೆ



• **ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ**

ಯಾದಗಿರಿ ನಗರದಲ್ಲಿ ಶ್ರೀ ಸತ್ಯಸಾಯಿ ಬಾಬಾ ಅವರ 100ನೇ ಜನ್ಮದಿನದ ಅಂಗವಾಗಿ ಪುಟ್ಟಪರ್ತಿಯಿಂದ ಆಗಮಿಸಿದ ಪ್ರೇಮ ಪ್ರವಾಹಿನಿ ರಥವನ್ನು ಭವ್ಯವಾಗಿ ಯಾದಗಿರಿ ಶಾಸಕ ಚೆನ್ನರೆಡ್ಡಿ ಪಾಟೀಲ್ ಹಾಗೂ ಯಾದಗಿರಿ ಭಕ್ತರಿಂದ ಸ್ವಾಗತಿಸಲಾಯಿತು. ಮಹಿಳೆಯರ ಕುಂಭದೊಂದಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಡೊಳ್ಳಿನ ಕುಣಿತ, ಸಹಸ್ರಾರು ಭಕ್ತರ ಮೆರವಣಿಗೆ ಹಾಗೂ ಭಕ್ತರ ಸಂಭ್ರಮದೊಂದಿಗೆ ಭವ್ಯ ಮೆರವಣಿಗೆಯ ರಥವು ವಿಬಿಆರ್ ಆಸ್ಪತ್ರೆ ತಲುಪಿತು. ಇದೇ ಶುಭ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ನೂತನ ನಿಯೋನಾಟಲ್ ಇಂಟೆನ್ಸಿವ್ ಕೇರ್ ಯುನಿಟ್ (ಓಐಅಗ) ಘಟಕಕ್ಕೆ ಗಣ್ಯರಿಂದ ಚಾಲನೆ ನೀಡಲಾಯಿತು. ಈ ವಿಶೇಷ ಘಟಕವು ಆರೋಗ್ಯ ಸಮಸ್ಯೆಗಳಿರುವ ನವಜಾತ ಶಿಶುಗಳಿಗೆ ಉತ್ತಮ ಮಟ್ಟದ ವೈದ್ಯಕೀಯ ಆರೈಕೆ ಮತ್ತು ಚಿಕಿತ್ಸೆ ಒದಗಿಸಲು ಅತ್ಯಾಧುನಿಕ ಸೌಲಭ್ಯಗಳ ಈ ಘಟಕ ಲೋಕಾರ್ಪಣೆಗೊಳಿಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಜಿಲ್ಲಾ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಮಾತನಾಡಿ ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳ ಜನರಿಗೆ ಇಂತಹ ಆರೋಗ್ಯ ಸೇವೆಗಳು ಅತ್ಯಂತ ಅಗತ್ಯವಾಗಿದ್ದು, ನವಜಾತ ಶಿಶುಗಳ ಆರೈಕೆಗೆ ಈ ಘಟಕ ಸಹಾಯಕವಾಗಲಿದೆ ಎಂದು ತಿಳಿಸಿದರು. ತಾವು ಸಹ ಸತ್ಯ ಸಾಯಿ ಸಂಸ್ಥೆಯಲ್ಲಿ ಶಿಕ್ಷಣ ಪಡೆದಿದ್ದು, ಸಾವಿರಾರು ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ಮೌಲ್ಯಗಳನ್ನು ಸದಾ ಸತ್ಯ ಸಾಯಿ ಬಾಬಾ ಟ್ರಸ್ಟ ನೀಡುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶ್ರೀ ಸತ್ಯಸಾಯಿ ಟ್ರಸ್ಟ್ ರಾಜ್ಯಧ್ಯಕ್ಷ ಪದ್ಮನಾಭ ಪೆ□ ಹಾಗೂ ಅವರ ಧರ್ಮಪತ್ನಿ, ರಾಚನ ಗೌಡ ಮುದ್ನಾಳ, ಮಹೇಶ್ ಮುದ್ನಾಳ, ಚನ್ನಬಸವರೆಡ್ಡಿ ಮುದ್ನಾಳ, ಡಾ.ಸಂಗಮ್ಮ ವಿ.ಮುದ್ನಾಳ, ನಾಗರತ್ನ ಕುಪ್ಪಿ, ವಿಮಲಾ ಶೆಟ್ಟಿ, ನಿಂಗಣ್ಣ ಗೌಡ, ಪ್ರೇಮ ಸೋಮನಾಥ ಗೌಡರ, ಅರ್ಚನಾ ಅಪ್ರೋಜಿ□, ಎಲ್ ಜಿ ರೆಡ್ಡಿ, ಡಾ.ಬಸವರಾಜ ನರಸಣಗಿ, ಮಲ್ಲಿಕಾರ್ಜುನ ಗೌಡ ಸೇರಿದಂತೆ ಅನೇಕ ಗಣ್ಯರು, ವಿಬಿಆರ್ ಆಸ್ಪತ್ರೆ ವೈದ್ಯರಾದ ಡಾ. ಅಮೋಘ, ಕ್ಷಿತಿಜ್, ಆಸ್ಪತ್ರೆ ಸಿಬ್ಬಂದಿ ಹಾಗೂ ಭಕ್ತರು ಭಾಗವಹಿಸಿದರು.

# ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಸಂಭ್ರಮ



• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ**

ಪಟ್ಟಣದಲ್ಲಿ ಮಂಗಳವಾರ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಜಯಂತಿ ಅಂಗವಾಗಿ ಜೈ ಭೀಮ್ ನಗರದಿಂದ ಮಹಾನಾಯಕ ಪುತ್ಥಳಿಯವರೆಗೆ. ಡಾ. ಅಂಬೇಡ್ಕರ್ ಅವರ ಭಾವಚಿತ್ರದ ಭವ್ಯ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯುದ್ದಕ್ಕೂ ಜೈ ಭೀಮ್ ಘೋಷಣೆಗಳು ಮೊಳಗಿದವು. ಗಣ್ಯರು ಡಾ. ಅಂಬೇಡ್ಕರವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಪಿಯು ಕಾಲೇಜಿನ ಪ್ರಾಚಾರ್ಯ ಅಶೋಕ ತಳಿಕೇರಿ ಮಾತನಾಡಿ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿದ್ದಾರೆ. ಸಂವಿಧಾನವನ್ನು ಬದಲಿಸಲು ಯಾರಿಂದಲೂ ಸಾಧ್ಯವಿಲ್ಲ. ಸಂವಿಧಾನ ಒಂದು ಧರ್ಮ ಅಥವಾ ಜಾತಿಗೆ ಸೀಮಿತವಲ್ಲ; ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸ್ವಾತಂತ್ರ್ಯ ನೀಡಿದ ಶ್ರೇಷ್ಠ ಗ್ರಂಥ. ಇದನ್ನು ಪ್ರತಿಯೊಬ್ಬರೂ ಗೌರವಿಸಬೇಕು ಎಂದು ತಿಳಿಸಿದರು.

ಭೀಮರಾಯ ಮಾಳಳ್ಳಿಕರ್ ಅಧ್ಯಕ್ಷತೆ ವಹಿಸಿದ್ದರು, ಅತಿಥಿಗಳಾಗಿ ಯುವ ಮುಖಂಡ ಆದಿತ್ಯಗೌಡ ಪೊಲೀಸ್ ಪಾಟೀಲ್, ಪುರಸಭೆ ಸದಸ್ಯ ರವಿಶಂಕರ್ ಸೊನ್ನದ, ಭೀಮು ಮಲಕಾಪುರ, ಎಎ□□□ ಬಸವನಗೌಡ, ಶಿವಾನಂದ ದಿಂಡವಾರ, ಶಿಕ್ಷಕಿ ನೀಲಮ್ಮ ಬಿ. ಮಲ್ಲೆ, ಬಸವಣ್ಣೆಪ್ಪ ಆರ್. ಮಾಳಳ್ಳಿಕರ್, ಮಲ್ಲಿಕಾರ್ಜುನ ಕಟ್ಟಿಮನಿ, ಯೋಗಪ್ಪ ಮಾಳಳ್ಳಿಕರ್, ಮಡಿವಾಳಪ್ಪ ಬಳಬಟ್ಟಿ, ಜೇಟ್ಟೆಪ್ಪ ಬಸರಿಗಿಡ, ಭೀಮರಾಯ ಯಮನೂರ್ ಉಪಸ್ಥಿತರಿದ್ದರು.

ಹಾಗೆಯೇ ಧರ್ಮಣ್ಣ ಬಡಗೇರ್, ಅಯ್ಯಣ್ಣ ಮಾಳಳ್ಳಿಕರ್, ಶಂಕರ್ ಬಿ. ಕಟ್ಟಿಮನಿ, ಜುಮ್ಮಣ್ಣ ಕಟ್ಟಿಮನಿ, ಲಕ್ಷ್ಮಣ್ಣ ಬಾಯಿಮನಿ, ಪರಶುರಾಮ ಮಾಳಳ್ಳಿಕರ್, ರಾಯಪ್ಪ ಬಡಗೇರ್, ಸುರೇಶ ಮಾಳಳ್ಳಿಕರ್, ಭಿಮಾಶಂಕರ್ ಸೋಮನಾಳಕರ್ ಸೇರಿದಂತೆ ನೂರಾರು ಮಹಿಳೆಯರು ಹಾಗೂ ಮಕ್ಕಳು ಈ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು.


# ಸಿದ್ದಾರ್ಥ್ ಕೋಚಿಂಗ್ ಸೇಂಟರ್ ನಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಜಯಂತಿ ಆಚರಣೆ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಯಾದಗಿರಿ ತಾಲೂಕಿನ ಯರಗೋಳ ಗ್ರಾಮದಲ್ಲಿ ಭೀಮ ಜ್ಯೋತಿ ಗ್ರಾಮೀಣ ಅಭಿವೃದ್ಧಿ ಶಿಕ್ಷಣ ಸಂಸ್ಥೆ ಯಾದಗಿರಿ ಇವರ ಸಂಯುಕ್ತಾಶ್ರಯದಲ್ಲಿ ಸಿದ್ದಾರ್ಥ ಕೋಚಿಂಗ್ ಸೆಂಟರ್ ಬೇಸಿಗೆ ಶಿಬಿರದಲ್ಲಿ ಸಂವಿಧಾನ ಶಿಲ್ಪಿ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ 135 ನೆಯ ಂತೋತ್ಸವ ಆಚರಿಸಲಾಯಿತು ಈ ಸಂದರ್ಭದಲ್ಲಿ ಶ್ರೀ ಗವಿ ಸಿದ್ದಲಿಂಗೇಶ್ವರ ಮಠದ ಸಂಗಮೇಶ್ವರ ಸ್ವಾಮೀಜಿಗಳು ಇವರು ಮಾತನಾಡಿ ಅಂಬೇಡ್ಕರ್ ಅವರು ಕೆಸರಿನಲ್ಲಿನ ಕಮಲದಂತೆ ಬಡತನದಲ್ಲಿ ಹುಟ್ಟಿ ಶಿಕ್ಷಣದ ಮುಖಾಂತರ ಉನ್ನತ ಸ್ಥಾನಕ್ಕೆ ಹೋಗಿ ಭಾರತಕ್ಕೆ ಎಲ್ಲಾ ಜನಾಂಗದವರಿಗೆ ಅನುಕೂಲವಾಗುವಂತೆ ಸಂವಿಧಾನವನ್ನು ರಚನೆ ಮಾಡಿದ ಮೇರು ವ್ಯಕ್ತಿ ಡಾ. ಬಿಆರ್ ಅಂಬೇಡ್ಕರ್ ಎಂದು ಹೇಳಿದರು

ಈ ಸಂದರ್ಭದಲ್ಲಿ ಜೈಯಶ್ರೀ ದೇವಣ್ಣ ದೇಸಿ ಎಸ್ ಡಿ ಎಮ್ ಸಿ ಅಧ್ಯಕ್ಷರು ಸರ್ಕಾರಿ ಮಾದರಿ ಪ್ರಥಮ ಶಾಲೆ ಯರಗೋಳ

ಬಸವರಾಜ್ ಗುಳೇದ ಬಿಜೆಪಿ ಭೂತ ಅಧ್ಯಕ್ಷರು ಯರಗೊಳ ಸ□ದಪ್ಪ ಸೊನದಾರ ಗ್ರಾಮ ಘಟಕ ಅಧ್ಯಕ್ಷರು ಅಂಬೇಡ್ಕರ್ ಸೇನೆ ಯರಗೋಳ ಮರೆಪ್ಪ ಪೂಜಾರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿದ್ದಾರ್ಥ್ ಕೋಚಿಂಗ್ ಕ್ಲಾಸನ ನಿರ್ದೇಶಕರಾದ ಶ್ರೀ ಭೀಮಾಶಂಕರ ಎಂ ಯರಗೋಳ ಇವರು ವಹಿಸಿದ್ದರು ಸಿದ್ದಾರ್ಥ್ ಕೋಚಿಂಗ್ ಕ್ಲಾಸನ ವಿದ್ಯಾರ್ಥಿನಿಯಾದ ಕುಮಾರಿ ಭವಾನಿ ಶರಣಪ್ಪ ಕಾರ್ಯಕ್ರಮ ನಿರೂಪಣೆ ಮಾಡಿದಳು ಕುಮಾರಿ ಭವಾನಿ ಚಂದರಡ್ಡಿ ಸ್ವಾಗತಿಸಿದಳು ಮುಖ್ಯ ಗುರುಗಳಾದ ಶ್ರೀಮತಿ ಮಾಲಾಶ್ರೀ ಬಿ ಯರಗೋಳ ಪ್ರಾರ್ಥನ ಗೀತೆ ಹಾಡಿದರು ಸಿದ್ದಾರ್ಥ್ ಕೋಚಿಂಗ್ ಕ್ಲಾಸ್ ನ ಎಲ್ಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.



# ಸಮಾನತೆಯ ಹರಿಕಾರ ಅಂಬೇಡ್ಕರ: ಹೊಂಕಣ್ಣವರ

• **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ**

ಸಮಾಜದಲ್ಲಿನಅಸಮತೋಲತೆಯ ವಿರುದ್ದ ಹೋರಾಡಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾನತೆಯಿಂದ ಬಾಳುವ ಮಂತ್ರಭೋದಿಸಿದ ಡಾ ಬಿ.ಆರ್ ಅಂಬೇಡ್ಕರ ಸಮಾನತೆಯ ಹರಿಕಾರರಾಗಿದ್ದಾರೆಂದು ತಹಶಿಲ್ದಾರ ಬಸವರಾಜ ಹೊಂಕಣ್ಣವರ ತಿಳಿಸಿದರು.

ಅವರು ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ತಾಲೂಕಾ ಆಡಳಿತ.ತಾಲೂಕ ಪಂಚಾಯತ್, ಸಮಾಜ ಕಲ್ಯಾಣ ಇಲಾಕೆ, ಪಟ್ಟಣ ಪಂಚಾಯತ್ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಡಾ ಬಿ.ಆರ್ ಅಂಬೇಡ್ಕರ 135ನೇ ಹುಟ್ಟು ಹಬ್ಬದ ನಿಮಿತ್ಯ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರೊಂದಿಗೆ ಅವರ ಭಾವಚಿತ್ರಕ್ಕೆಪುಶ್ಪಾರ್ಚನೆ ಮಾಡಿ ಉದ್ಘಾಟಿಸಿ ಮಾತನಾಡಿ ಸಮಗ್ರ ಭಾರತದ ಕಲ್ಪನೆಯ ಜೊತೆಗೆ ಅನೇಕ ಪಾಶ್ಚಿಮಾತ್ಯ ದೇಶಗಳು ಸಮಗ್ರ ಸಂವಿದಾನದ ಕಲ್ಪನೆ ಇಲ್ಲದೆ ಅವನತಿ ಹಂತದಲ್ಲಿದ್ದು ನಮ್ಮ ದೇಶ ಮಾತ್ರಯಾರಿಂದಲು ಕಂಡರಿಯದ ಸಂವಿಧಾನವನ್ನು ನಮಗೆ ನೀಡಿದ ವ್ಯಕ್ತಿ ಭಾರತ ರತ್ನ ಡಾ ಬಿ.ಆರ್ ಅಂಬೇಡ್ಕರ ಎಂದು ಹೇಳಿದರು.



ಕಲಘಟಗಿ ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ಭಾರತ ರತ್ನ ಡಾ ಬಿ.ಆರ್ ಅಂಬೇಡ್ಕರವರ 135 ದಿನಾಚರಣೆಯನ್ನು ತಹಶಿಲ್ದಾರ ಬಸವರಾಜ ಹೊಂಕಣ್ಣವರ ಜ್ಯೋತಿ ಬೆಳಗಿಸುವುದರೊಂದಿಗೆ ಉದ್ಘಾಟಿಸಿದರು.

ಡಾ ಬಿ.ಆರ್ ಅಂಬೇಡ್ಕರರವರ ಜೀವನ ಚರಿತ್ರೆ ಹಾಗೂ ಕೊಡುಗೆಗಳ ಕುರಿತು ಕರ್ನಾಟಕ ವಿಶ್ವವಿದ್ಯಾಲಯ ದಾರವಾಡ ಬೋಧನಾ ಸಹಾಯಕ ಭಾಷಾ ವಿಜ್ಞಾನ ಡಾ ಆರ್ ಸಿ ಹಿರೇಮಠ ಕನ್ನಡ ಅಧ್ಯಯನ ಪೀಠದ ಡಾ ಮಹಿಂದ್ರ ಜಿ ಹಿರಹರ ಉಪನ್ಯಾಸ ನೀಡಿದರು.

ಭಾರತ ರತ್ನ ಡಾ ಬಿ.ಆರ್ ಅಂಬೇಡ್ಕರ ಭಾವಚಿತ್ರವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಡೊಳ್ಳು ಕುಣಿತ ಬೊಂಬೆ ಕುಣಿತದೊಂದಿಗೆ ಮರೆವಣಿಗೆ ಮಾಡಲಾಯಿತು.ಇಸಂಧರ್ಬದಲ್ಲಿ ತಾ.ಪಂಕಾರ್ಯನಿರ್ವಾಹಕಅಧಿಕಾರಿ ಪಿ.ವಾಯ್ ಸಾವಂತ.ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಚಂದ್ರಶೇಖರ ಬಿ.ಸಿ.ಪಿ.ಐ ಶ್ರೀಶೈಲ ಕೌಜಲಗಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಅನುಷಾ ಹಿರೇಮಠ, ಬಿ.ಇ.ಓ ಗಾಯತ್ರಿದೇವಿ ಸಜ್ಜನ, ನೋದಣಾಧಿಕಾರಿ ಘಂಟಿ, ನೌಕರ ಸಂಘದ ಅಧ್ಯಕ್ಷ ಜಗಧೀಶ ವಿರಕ್ತಿಮಠ, ಬ್ಲಾಕ ಕಾಂಗ್ರೆಸ ಅಧ್ಯಕ್ಷ ಮಂಜುನಾಥ ಮುರಳ್ಳಿ, ಮಹೇಶ ಅಲಗೂರ, ಮಂಗಲಪ್ಪ ಲಮಾಣಿ, ಬಾವಕರ, ಅಬಕಾರಿ ಅಧಿಕಾರಿ ಶಿವಪ್ಪ ಕಣಮನಿ, ವಾಸು ಲಮಾಣಿ, ಬಸವರಾಜ ಮಾದರ, ಯಲ್ಲಪ್ಪ ಮೇಲಿನಮನಿ, ಗೀರಿಶರಡ್ಡೇರ, ಬಸವರಾಜ ಕಟ್ಟಿಮನಿ, ಸತೀಶ ಮಾದರ, ಯಲ್ಲಪ್ಪ ಹುಲಮನಿ, ಮಂಜುನಾಥ ಮಾದರ, ನಾಗರಾಜ ಹೊಸಮನಿ, ದೇವೇಂದ್ರಪ್ಪ ಕಟ್ಟಿಮನಿ,

ಮಂಜುನಾಥ ಹಂಚಿನಮನಿ, ಗೋಪಾಲ ದೊಡಮನಿ, ಫಕ್ಕಿರಗೌಡ ಹಟಕಿನಾಳ, ಆನಂದ ಮೇತ್ರಿ, ಶಶಿಕುಮಾರ ಕಟ್ಟಿಮನಿ, ರಾಜು ಅವಧಿ, ಉಳವಪ್ಪ ಬಿದರಳ್ಳಿ ಇದ್ದರು.ಶಿಕ್ಷಕ ಪ್ರಭು ಗ್ಯಾನಪ್ಪನವರ ಕಾರ್ಯಕ್ರಮವನ್ನು ನಿರೂಪಿಸಿದರು.

# ಸಮಾನತೆ, ನ್ಯಾಯದ ಪ್ರತೀಕ ಅಂಬೇಡ್ಕರ್: ಬಸವರಾಜ ಅಗ್ನಿ

• **ಮಲ್ಲಮ್ಮ ನುಡಿ ವಾರ್ತೆ ಹುಣಸಗಿ**


ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಪಟ್ಟಣದ ಸ್ವಾಮಿ ವಿವೇಕಾನಂದ ಪದವಿ ಮಹಾವಿದ್ಯಾಲಯ ಹಾಗೂ ವಜ್ಜಲ್ ಶಾಂತಗೌಡ ಪಾಟೀಲ್ ಮೆಮೋರಿಯಲ್ ಕೈಗಾರಿಕಾ ತರಬೇತಿ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಉಪನ್ಯಾಸಕ ಬಸವರಾಜ ಅಗ್ನಿ ಅವರು, ಡಾ. ಅಂಬೇಡ್ಕರ್ ಅವರು ಕೇವಲ ಒಬ್ಬ ವ್ಯಕ್ತಿಯಲ್ಲ, ಸಮಾನತೆ, ನ್ಯಾಯ ಹಾಗೂ ಮಾನವ ಹಕ್ಕುಗಳ ಪ್ರತೀಕವಾಗಿದ್ದಾರೆ ಎಂದು ಹೇಳಿದರು. ಭಾರತದ ಸಂವಿಧಾನದ ಶಿಲ್ಪಿಯಾಗಿ, ಸಮಾಜ ಸುಧಾರಕರಾಗಿ ಮತ್ತು ಅರ್ಥಶಾಸ್ತ್ರಜ್ಞರಾಗಿ ಖ್ಯಾತರಾಗಿರುವ ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ. ಅಸ್ಪೃಶ್ಯತೆ, ಜಾತಿ ವ್ಯವಸ್ಥೆ ಹಾಗೂ ಸಾಮಾಜಿಕ ಅಸಮಾನತೆಯ ವಿರುದ್ಧ ಅವರು ನಡೆಸಿದ ಹೋರಾಟ ಅಪ್ರತಿಮವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಪ್ರಾಚಾರ್ಯ ಸುರೇಶ ಕೀರಣಗಿ ಅವರು ಮಾತನಾಡಿ, "ಶಿಕ್ಷಣ, ಸಂಘಟನೆ ಮತ್ತು ಹೋರಾಟ" ಎಂಬ ಅಂಬೇಡ್ಕರ್ ಅವರ ತ್ರಿಸೂತ್ರ ಮಾರ್ಗವನ್ನು ಎಲ್ಲರೂ ಅನುಸರಿಸಬೇಕು ಎಂದು ಹೇಳಿದರು. ಶಿಕ್ಷಣದ ಮೂಲಕವೇ ಸಮಾಜದಲ್ಲಿ ಸಬಲೀಕರಣ ಸಾಧ್ಯವೆಂದು ಅಭಿಪ್ರಾಯಪಟ್ಟರು.

ಐಟಿಐ ಕಾಲೇಜಿನ ಪ್ರಾಚಾರ್ಯ ಬಸವರಾಜ್ ಮರೋಳ ಅವರು ಶಿಕ್ಷಣದ ಮಹತ್ವವನ್ನು ಒತ್ತಿಹೇಳಿ, ಅಂಬೇಡ್ಕರ್ ಅವರ ಆದರ್ಶಗಳನ್ನು ಪಾಲಿಸಿದಾಗ ಮಾತ್ರ ಜಯಂತಿ ಆಚರಣೆ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ಪ್ರಕಾಶ ಪಾಟೀಲ್, ಗುರುಸ್ವಾಮಿ ಹಾಗೂ ಸ್ಪಂದನ ಶಾಲೆಯ ಮುಖ್ಯಸ್ಥ ಮಲ್ಲಿಕಾರ್ಜುನ ಗುತ್ತೇದಾರ ಅವರು ಅಂಬೇಡ್ಕರ್ ಅವರ ಜೀವನ ಹಾಗೂ ಸಾಧನೆ ಕುರಿತು ಮಾತನಾಡಿದರು.



# ಸಮಾನತೆಯ ಹರಿಕಾರ ಡಾ ಬಿ.ಆರ್ ಅಂಬೇಡ್ಕರ: ಹೊಂಕಣ್ಣವರ



• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ

ಸಮಾಜದಲ್ಲಿನ ಅಸಮತೋಲತೆಯ ವಿರುದ್ಧ ಹೋರಾಡಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾನತೆಯಿಂದ ಬಾಳುವ ಮಂತ್ರ ಭೋದಿಸಿದ ಡಾ ಬಿ.ಆರ್ ಅಂಬೇಡ್ಕರ ಸಮಾನತೆಯ ಹರಿಕಾರರಾಗಿದ್ದಾರೆಂದು ತಹಶಿಲ್ದಾರ ಬಸವರಾಜ ಹೊಂಕಣ್ಣವರ ತಿಳಿಸಿದರು.

ಅವರು ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ತಾಲೂಕಾ ಆಡಳಿತ.ತಾಲೂಕ ಪಂಚಾಯತ್, ಸಮಾಜ ಕಲ್ಯಾಣ ಇಲಾಕೆ, ಪಟ್ಟಣ ಪಂಚಾಯತ್ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಡಾ ಬಿ.ಆರ್ ಅಂಬೇಡ್ಕರ 135ನೇ ಹುಟ್ಟು ಹಬ್ಬದ ನಿಮಿತ್ಯ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರೊಂದಿಗೆ ಅವರ ಭಾವಚಿತ್ರಕ್ಕೆ ಪುಶ್ಪಾರ್ಚನೆ ಮಾಡಿ ಉದ್ಘಾಟಿಸಿ ಮಾತನಾಡಿ ಸಮಗ್ರ ಭಾರತದ ಕಲ್ಪನೆಯ ಜೊತೆಗೆ ಅನೇಕ ಪಾಶ್ಚಿಮಾತ್ಯ ದೇಶಗಳು ಸಮಗ್ರ ಸಂವಿದಾನದ ಕಲ್ಪನೆ ಇಲ್ಲದೆ ಅವನತಿ ಹಂತದಲ್ಲಿದ್ದು ನಮ್ಮ ದೇಶ ಮಾತ್ರ ಯಾರಿಂದಲು ಕಂಡರಿಯದ ಸಂವಿಧಾನವನ್ನು ನಮಗೆ ನೀಡಿದ ವ್ಯಕ್ತಿ ಭಾರತ ರತ್ನ ಡಾ ಬಿ.ಆರ್ ಅಂಬೇಡ್ಕರ ಎಂದು ಹೇಳಿದರು.

ಡಾ ಬಿ.ಆರ್ ಅಂಬೇಡ್ಕರರವರ ಜೀವನ ಚರಿತ್ರೆ ಹಾಗೂ ಕೊಡುಗೆಗಳ ಕುರಿತು ಕರ್ನಾಟಕ ವಿಶ್ವವಿದ್ಯಾಲಯ ದಾರವಾಡ ಬೋಧನಾ ಸಹಾಯಕ ಭಾಷಾ ವಿಜ್ಞಾನ ಡಾ ಆರ್ ಸಿ ಹಿರೇಮಠ ಕನ್ನಡ ಅಧ್ಯಯನ ಪೀಠದ ಡಾ ಮಹಿಂದ್ರ ಜಿ ಹಿರಹರ ಉಪನ್ಯಾಸ ನೀಡಿದರು.

ಭಾರತ ರತ್ನ ಡಾ ಬಿ.ಆರ್ ಅಂಬೇಡ್ಕರ ಭಾವಚಿತ್ರವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಡೊಳ್ಳು ಕುಣಿತ ಬೋಂಬೆ ಕುಣಿತದೊಂದಿಗೆ ಮರೆವಣಿಗೆ ಮಾಡಲಾಯಿತು.

ಇ ಸಂಧರ್ಬದಲ್ಲಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಪಿ.ವಾಯ್ ಸಾವಂತ.ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಚಂದ್ರಶೇಖರ ಬಿ.ಸಿ.ಪಿ.ಐ ಶ್ರೀಶೈಲ ಕೌಜಲಗಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಅನುಷಾ ಹಿರೇಮಠ, ಬಿ.ಇ ಓ ಗಾಯತ್ರಿದೇವಿ ಸಜ್ಜನ, ನೋದಣಾಧಿಕಾರಿ ಘಂಟಿ, ನೌಕರ ಸಂಘದ ಅಧ್ಯಕ್ಷ ಜಗಧೀಶ ವಿರಕ್ತಿಮಠ,ಬ್ಲಾಕ ಕಾಂಗ್ರೆಸ ಅಧ್ಯಕ್ಷ ಮಂಜುನಾಥ ಮುರಳ್ಳಿ,ಮಹೇಶ ಅಲಗೂರ,ಮಂಗಲಪ್ಪ ಲಮಾಣಿ, ಬಾವಕರ,

ಅಬಕಾರಿ ಅಧಿಕಾರಿ ಶಿವಪ್ಪ ಕಣಮನಿ,ವಾಸು ಲಮಾಣಿ,ಬಸವರಾಜ ಮಾದರ,ಯಲ್ಲಪ್ಪಮೇಲಿನಮನಿ,ಗೀರಿಶ ರಡ್ಡೇರ,ಬಸವರಾಜ ಕಟ್ಟಿಮನಿ,ಸತೀಶ ಮಾದರ,ಯಲ್ಲಪ್ಪಹುಲಮನಿ,ಮಂಜುನಾಥ ಮಾದರ,ನಾಗರಾಜಹೊಸಮನಿ,ದೇವೇಂದ್ರಪ್ಪ ಕಟ್ಟಿಮನಿ,ಮಂಜುನಾಥಹಂಚಿನಮನಿ,ಗೋಪಾಲ ದೊಡಮನಿ,ಫಕ್ಕಿರಗೌಡಹಟಕಿನಾಳ,ಆನಂದ ಮೇತ್ರಿ,ಶಶಿಕುಮಾರ ಕಟ್ಟಿಮನಿ,ರಾಜು ಅವಧಿ,ಉಳವಪ್ಪ ಬಿದರಳ್ಳಿ ಇದ್ದರು.

ಶಿಕ್ಷಕ ಪ್ರಭು ಗ್ಯಾನಪ್ಪನವರ ಕಾರ್ಯಕ್ರಮವನ್ನು ನಿರೂಪಿಸಿದರು.

### ವಿವಿಧ ಕಡೆ ಸಂವಿಧಾನ ಶಿಲ್ಪಿ. ಡಾ.ಅಂಬೇಡ್ಕರ್ 135ನೇ ಜಯಂತಿ

# ಭಾರತ ದೇಶದಲ್ಲಿ ಆಳುವಂತ ರೋಗಿಗಳಿಂದ ಭಾರತ ದೇಶ ಇನ್ನೂ ನರಳುತ್ತಿದೆ: ದೊಡ್ಡ ಮನೆ

• ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು

ಈ ದೇಶದಲ್ಲಿ ಒಂದು ಮಗು ಜನಿಸುತ್ತದೆ. ಅ ಮಗು ದೇಶದಲ್ಲಿ ಅನಾಗರಿಕ ಸಮಾಜವನ್ನು ಕಿತ್ತು ಹೋಗಿದ್ದು ನಾಗರಿಕ ಸಮಾಜವನ್ನು ರೂಪಿಸುತ್ತದೆ ಎಂದು ಯಾರಿಗೂ ಗೊತ್ತಿರುವುದಿಲ್ಲ ಎಂದರೆ ಅವರೇ ಮಹಾನ್ ನಾಯಕ ಡಾ ಅಂಬೇಡ್ಕರ್ ಅವರು ಎಂದು ಲಿಂಗರಾಜ ದೊಡ್ಡ ಮನೆ ಹೇಳಿದರು

ತಾಲೂಕ ಆಡಳಿತ ಸಿಂಧನೂರು ನಗರ ಸಭೆ. ತಾಲೂಕು ಪಂಚಾಯತ್ ಇಲಾಖೆ ಹಾಗೂ ಸಮಾಜ ಕಲ್ಯಾಣ ಸಂಯುಕ್ತಶ್ರಯದಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರ 135 ನೇ ಜಯಂತಿ ಆಚರಣೆ ಕಾರ್ಯಕ್ರಮ ನಗರದ ಟೌನ್ ಹಾಲ್ ನಲ್ಲಿ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಮಹಾನ್ ನಾಯಕ ಡಾ ಅಂಬೇಡ್ಕರ್ ಭಾವಚಿತ್ರಕ್ಕೆ ಹಾಗೂ ಸಂವಿಧಾನದ ಪೀಠಿಕೆ ಗೆ ಮಾಲಾರ್ಪಣೆ ಮಾಡಿ ಸಂವಿಧಾನದ ಪೀಠಿಕೆ ಓದುವುದರ ಮೂಲಕ ಜಯಂತಿ ಆಚರಣೆ ಮಾಡಲಾಯಿತು. ಇವತ್ತು 135 ವರ್ಷಗಳ ನಂತರ ಡಾ. ಬಾಬು ಸಾಹೇಬ್ ಅಂಬೇಡ್ಕರ ಅವರನ್ನ ನೆನಪಿಸುತ್ತಾ ಹೋದರೆ ಜಗತ್ತಿನಲ್ಲಿ ಏನೆಲ್ಲಾ ಬದಲಾವಣೆ ಆಗಿದೆ ಎಂಬುದು ನಮಗೆಲ್ಲ ಅನಿಸುತ್ತದೆ ಎಂದು ಹೇಳಿದರು.

ಜನವರಿ 26 ರಂದು ಭಾರತ ದೇಶಕ್ಕೆ ಸಂವಿಧಾನ ಜಾರಿಗೆ ಯಾಗಿ ಬಂದು ಮೇಲೆ



ತಲೆಯಿಂದ ಇಡಿದು ಪಾದದ ಕೆಳಗೆ ಇರುವ ಮನುಷ್ಯನಿಗೆ ಇರುವ ರೋಗಗಳು ಏನು ಇವೆ ಅವುಗಳ 50% ರೋಗಗಳು ನಿವಾರಣೆ ಯಾಗಿವು ಎಂದರೆ ಅದಕ್ಕೆ ಕಾರಣ ಸಂವಿಧಾನ. ಆದರೆ 75 ವರ್ಷಗಳಲ್ಲಿ ಎಲ್ಲ ರೋಗಗಳು ನಿವಾರಣೆ ಆಗಬೇಕಿತ್ತು.ಆದರೆ ನಮ್ಮನ್ನು ಆಳುವ ನಾಯಕರು ಅವರೇ ಇವತ್ತು ರೋಗಿಗಳು ಆಗಿವೆ ಅದಕ್ಕೆ ಭಾರತ ನರಳುತ್ತಿದೆ ಎಂದು ಹೇಳಿದರು.

ಇವತ್ತು ವಿವಿಧ ರಾಷ್ಟ್ರಗಳಲ್ಲಿ ಭಾರತ ದೇಶದಲ್ಲಿ ಎಷ್ಟು ಜನರು ಇದ್ದಾರೆ. ಕೇಳಿದರೆ ನಾವು ಭಾರತ ದೇಶದ ಪ್ರಜೆಗಳು ಎಂದು ಕೈ ಎತ್ತಿ ಹೇಳುತ್ತವೆ ಎಂದರೆ ಇದಕ್ಕೆ ಡಾ ಅಂಬೇಡ್ಕರ್ ಅವರೇ ಕಾರಣ ಎಂದು ಹೇಳಿದರು

ಭಾರತ 1950 ರ ಸಂವಿಧಾನ ಜಾರಿಗೆ ಬರಲಾರ ಮುಂಚೆ ಭಾರತ ದೇಶ ಭಾರತವಾಗಿ ಇರಲಿಲ್ಲ. ಜಾತಿಗಳು

ಭಾರತವಾಗಿತ್ತು. ಬಡವ ಶ್ರೀಮಂತ ಹುಚ್ಚು ನಿಚ .ಅನಿಷ್ಠ ಪದ್ಧತಿ. ಲಿಂಗ ತಾರತಮ್ಯ ನೀತಿಯನ್ನು ಒಳಗೊಂಡಿತ್ತು. ತಲೆ ಯಿಂದ ಪಾದಗಳಿಗೆ ರೋಗಗಳು ತುಂಬಿಕೊಂಡಿರುವ ಭಾರತ ದೇಶವಾಗಿತ್ತು. ಸಂವಿಧಾನ ಜಾರಿಗೆ ಬಂದ ನಂತರ ಇವತ್ತು ಬದಲಾವಣೆ ಆಗಿದ್ದವು ಎಂದರೆ ಇದಕ್ಕೆ ಕಾರಣ ಡಾ. ಬಾಬು ಸಾಹೇಬ್ ಅಂಬೇಡ್ಕರ್ ಅವರು ಎಂದು ಯಾರೂ ಸಹ ಮರೆಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು

ಏಕೆಂದರೆ. ಇವತ್ತೂ ಐಎಎಸ್ ಕೆಎಎಸ್ ಐಪಿಎಸ್. ಸೇರಿದಂತೆ ಹಲವು ಉನ್ನತ ಮಟ್ಟದ ಅಧಿಕಾರಿಗಳಾಗಿದ್ದೀರಿ ಎಂದರೆ ಇದಕ್ಕೆ ಕಾರಣ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ನೀಡಿರುವ ಸಂವಿಧಾನದಿಂದ ಯಾರು ಮರೆಯಬಾರದು ಎಂದು ವಿಶೇಷ ಭಾಷಣಕಾರರ ನಿಂಗಪ್ಪ ದೊಡ್ಡ ಮನೆ ಹೇಳಿದರು

ನಗರದ ಪಿಡಬ್ಲ್ಯೂಡಿ ಕ್ಯಾಂಪ್ ನಲ್ಲಿ ಡಾ ಅಂಬೇಡ್ಕರ್ ಪುತ್ಥಳಿ ಗೆ ಎಲ್ಲಾ ಗಣ್ಯಾತಿ ಗಣ್ಯರು ಅಧಿಕಾರಿಗಳು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಮಾಲಾರ್ಪಣೆ ಮಾಡಿದರು ನಂತರ ಅಲ್ಲಿಂದ ಟೌನ್ ಹಾಲ್ ವರೆಗೂ ಅಂಬೇಡ್ಕರ್ ಅವರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು. ವಿವಿಧ ಇಲಾಖೆ ಅಧಿಕಾರಿಗಳು ಸಂಘ ಸಂಸ್ಥೆಗಳು ರಾಜಕೀಯ ಮುಖಂಡರುಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ.ತಾಲೂಕು ತಹಶೀಲ್ದಾರ್ ಅರುಣ್ ಎಚ್ ದೇಸಾಯಿ. ತಾಲೂಕು ಇಒ ಚಂದ್ರಶೇಖರ . ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎಂ ದೊಡ್ಡ ಬಸವರಾಜ. ಡಿವೈಎಸ್ಪಿ ಚಂದ್ರಶೇಖರ್ ನಾಯಕ್ ಪೌರಾಯುಕ್ತರು ಪಾಂಡುರಂಗ ಇಟಗಿ. ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಹಿರೇಮಠ. ಲಿಂಗಪ್ಪ ಅಂಗಡಿ . ನಿಂಗನಗೌಡ. ಬಸಲಿಂಗಪ್ಪ ಬಿ.ಓ. ಶರಣಪ್ಪ ಹೊಸಳ್ಳಿ ಕ್ಯಾಂಪ್ ವೆಂಕಟರಾವ್ ಬಾದರ್ಲಿ. ನಿಜಲಿಂಗ ದೊಡ್ಡಮನೆ. ಯಾದಗಿರಿ. ಎಮ್ ವೆಂಕಟೇಶ್ ಸಮಾಜ ಕಲ್ಯಾಣ ಇಲಾಖೆ. ಚಂದ್ರಶೇಖರ ಮೀನುಗಾರಿಕೆ ಇಲಾಖೆ. ಹಾಗೂ ಅಂಬೇಡ್ಕರ್ ಅವರ ಅನುಯಾಯಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಎಸ್ಟಿ ಪ್ರಮಾಣ ನೀಡುವಂತೆ ಆಗ್ರಹಿಸಿ ಏ, 27ಕ್ಕೆ ಕಲಬುರಗಿ ಚಲೋ




• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ತಳವಾರ ಸಮಾಜಕ್ಕೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ನೀಡುವಂತೆ ಆಗ್ರಹಿಸಿ ಮಾಡು ಇಲ್ಲವೇ ಮಡಿ ಎಂಬ ಘೋಷ ವಾಕ್ಯದೊಂದಿಗೆ ಕಲಬುರಗಿ ಚಲೋ ಏಪ್ರಿಲ್ 27ರಂದು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ತಳವಾರ ಸಮಾಜದ ರಾಜ್ಯಾಧ್ಯಕ್ಷ ಡಾ. ಸರ್ದಾರ ರಾಯಪ್ಪ ಹೇಳಿದರು. ಬುಧವಾರ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿ ಎದುರಿಗೆ ಅನಿರ್ದಿಷ್ಟಾವಧಿಗೆ ಹೋರಾಟ ಮಾಡಲಾಗುವುದು ಎಂದು ಹೇಳಿದರು.

ಬಿಜೆಪಿ ಸರ್ಕಾರವು 2020ರಲ್ಲಿ ತಳವಾರ ಸಮಾಜಕ್ಕೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ನೀಡಿತ್ತು. ಆದರೆ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ 2024ರ ಲೋಕಸಭೆ ಚುನಾವಣೆ ಮುಗಿಯುವವರೆಗೆ ಸುಮ್ಮನಿದ್ದು ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ತಳವಾರ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರವನ್ನು ನೀಡುವುದನ್ನು ಕಾನೂನು ಬಾಹಿರವಾಗಿ ತಡೆ ಹಿಡಿದಿದ್ದಾರೆ ಎಂದು ಆರೋಪಿಸಿದರು. ಇವತ್ತಿಗೂ ಕೂಡ ರಾಜ್ಯಾದ್ಯಂತ ತಳವಾರರಿಗೆ ಯಾವುದೇ ಸಮಸ್ಯೆ ಇಲ್ಲದೆ ಪರಿಶಿಷ್ಟ ಪಂಗಡ ಜಾತಿ ಪ್ರಮಾಣ ಪತ್ರ, ಸಿಂಧುತ ಪ್ರಮಾಣ ಪತ್ರ ಸೇರಿದಂತೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಆದರೆ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ತಳವಾರ ಸಮುದಾಯಕ್ಕೆ ಪರಿಶಿಷ್ಟ ಪಂಗಡ ಪ್ರಮಾಣ ಪತ್ರ ನೀಡದೆ ಎಲ್ಲ ಜನಪ್ರತಿನಿಧಿಗಳು ಅನ್ಯಾಯ ಮಾಡುತ್ತಿದ್ದಾರೆ ಎಂದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕಲ್ಯಾಣ ಕರ್ನಾಟಕ ಭಾಗದ ಜನಪ್ರತಿನಿಧಿಗಳು ಮರಣ ಶಾಸನ ಬರೆಯುವ ಕೆಲಸ ಬಹಳ ಅಚ್ಚುಕಟ್ಟಾಗಿ ಮಾಡುತ್ತಾರೆ ಎಂದು ಹೇಳಿದರು. ತಳವಾರ ಸಮಾಜದವರಿಗೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ, ಸಿಂಧುತ್ವ ಪ್ರಮಾಣ ಪತ್ರ, ಸರ್ಕಾರದ ವಿವಿಧ ಸೌಲಭ್ಯಗಳನ್ನು ಸಿಗದಂತೆ ಮಾಡಿ, ಶೈಕ್ಷಣಿಕ, ಸಾಮಾಜಿಕ, ರಾಜಕೀಯವಾಗಿ ಯಾವತ್ತೂ ಮೇಲಕ್ಕೆಳದಂತೆ ತುಳಿಯುತ್ತಿದ್ದಾರೆ ಎಂದರು. ನಮ್ಮ ಸಮಾಜ ಮತ್ತು ಸಮುದಾಯದ ಮಕ್ಕಳ ಭವಿಷ್ಯವನ್ನೇ ಹಾಳು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವೆಂಕಟೇಶ ಅಯ್ಯಪ್ಪ ತಳವಾರ, ರೇವಣಸಿದ್ದಪ್ಪ ಗೌಡ ಕಮಾನಮನಿ, ಭೀಮಣ್ಣ ಶಾಖಾಪೂರ, ಬಾಪುಗೌಡ ಮಾಲಿಪಾಟೀಲ, ಅಶೋಕ ಕಂಕಿ ನೆಲೋಗಿ, ಸಿದ್ದು ಯಲಬಾ ನಾರಾಯಣಪುರ, ಭೀಮರಾಯ ತಳವಾರ, ಪರಮಾನಂದ ತಳವಾರ, ಎಚ್.ಆರ್. ಬಡಿಗೇರ ಶಿವಶಂಕರ ಇದ್ದರು.

# ನೀರು ಪೂರೈಕೆಯಾಗದ ಸ್ಥಳಗಳಿಗೆ ಅಧಿಕಾರಿಗಳ ಭೇಟಿ

• ಮಲ್ಲಮ್ಮ ನುಡಿ ವಾರ್ತೆ, ಗೋಕರ್ಣ

ಇಲ್ಲಿನ ಹಲವೆಡೆ ಕುಡಿಯುವ ನೀರು ಪೂರೈಕೆಯಾಗದ ಸ್ಥಳಗಳಿಗೆ ಮಾಜಿ ಗ್ರಾ. ಪಂ. ಸದಸ್ಯರ ಜೊತೆ ಅಧಿಕಾರಿಗಳು ಭೇಟಿ ನೀಡಿ ಸರಿಪಡಿಸುವ ಭರವಸೆ ನೀಡಿದ್ದಾರೆ.

ರಸ್ತೆ ನಿರ್ಮಾಣದಿಂದ ಪೈಪ್‌ಲೈನ್ ಹಾಳಾಗಿ ನಾಲ್ಕು ತಿಂಗಳಿಂದ ನೀರು ಪೂರೈಕೆಯಾಗದೆ ತೊಂದರೆಯಾಗುತ್ತಿದ್ದ ಅಜ್ಜಿಹಕ್ಕಲದ ಸ್ಥಳ ವೀಕ್ಷಿಸಿ ನೂತನ ಪೈಪ್ ಲೈನ್ ಅಳವಡಿಸಿ ನೀರು ಸರಬರಾಜು ಮಾಡುವಂತೆ ಕುಡಿಯುವ ನೀರು ಸರಬರಾಜು ಇಲಾಖೆಯ ಎ.ಇ. ರಾಘವೇಂದ್ರ ನಾಯ್ಕ ಸೂಚಿಸಿದರು.

ಚೌಡಗೇರಿ, ಕೆ.ಇ.ಬಿ.ಗ್ರೀಡ್ ಮತ್ತಿತರ ಕಡೆ ಅವೈಜ್ಞಾನಿಕ ಪೈಪ್ ಲೈನಿಂದ ನೀರು ಪೂರೈಕೆಯಲ್ಲಿ ತೊಡಕಾಗುತ್ತಿರುವ ಬಗ್ಗೆ ತಿಳಿದು ಅಗತ್ಯವಿದ್ದಲ್ಲಿ ಗೇಟ್‌ವಾಲ್ ಅಳವಡಿಸಿ ಸಮರ್ಪಕವಾಗಿ ನೀರು ಪೂರೈಸಲು ಗ್ರಾಮ ಪಂಚಾಯತ ಅಧಿಕಾರಿಗಳಿಗೆ ತಿಳಿಸಿದರು. ಸರಿಯಾಗಿ ನೀರು ಸಿಗದೆ ತೊಂದರೆ ಆಗುತ್ತಿರುವುದನ್ನು ಬಗ್ಗೆ ಮಾಜಿ ಗ್ರಾಮ ಪಂಚಾಯತ ಸದಸ್ಯ ಗಣಪತಿ ನಾಯ್ಕ್ ಹಾಗೂ ರಮೇಶ್ ಪ್ರಸಾದ್ ಈ ಭಾಗದ ಜನರು ತಿಳಿಸಿದ್ದು ತಕ್ಷಣ ಅಧಿಕಾರಿಗಳಿಗೆ ವಿಷಯ ತಿಳಿಸಿ ಸಮಸ್ಯೆಗೆ ಬಗೆಹರಿಸುವ ಕಾರ್ಯ ಮಾಡಿದ್ದಾರೆ

ಈ ವೇಳೆ ಕುಡಿಯುವ ನೀರುಸರಬರಾಜು ಇಲಾಖೆಯ ಇಂಜಿನೀಯರ ಪೂರ್ಣಿಮಾ, ಗ್ರಾಮ ಪಂಚಾಯತ ಅಭಿವೃದ್ದಿ ಅಧಿಕಾರಿ ವಿ.ಎ.ಪಟಗಾರ, ಕಾರ್ಯದರ್ಶಿ ಮಂಜುನಾಥ, ಮಾಜಿ ಸದಸ್ಯರಾದ, ಗಣಪತಿ ನಾಯ್ಕ ರಮೇಶ ಪ್ರಸಾದ ಇತರರಿದ್ದರು.

# ಅಂಬೇಡ್ಕರ್ ಅವರ ಕಾನೂನು ಪ್ರತಿಯೊಬ್ಬರಿಗೂ ಶ್ರೀರಕ್ಷೆ: ನಾಗರಾಜ್



• ಮಲ್ಲಮ್ಮ ನುಡಿ ವಾರ್ತೆ , ಪಿರಿಯಾಪಟ್ಟಣ

ಅಂಬೇಡ್ಕರ್ ರವರ ಕಾನೂನುಗಳೇ ಪ್ರತಿಯೊಬ್ಬರಿಗೂ ಶ್ರೀರಕ್ಷೆಯಾಗಿದೆ ಎಂದು ಉಪನ್ಯಾಸಕ ಹುಣಸೂರು ನಾಗರಾಜ್ ತಿಳಿಸಿದರು.

ತಾಲ್ಲೋಕಿನ ತಾತನಳ್ಳಿ ಗ್ರಾಮದಲ್ಲಿ ಜೈಭೀಮ್ ಯುವಕ ಸಂಘದವತಿಯಿಂದ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ರವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಸಂವಿಧಾನದಡಿಯಲ್ಲಿ ಅಂಬೇಡ್ಕರ್ ರವರು ಕಾನೂನಿನ ಮೂಲಕ ಪ್ರತಿಯೊಂದು ಸಮುದಾಯಕ್ಕೂ ಶ್ರೀರಕ್ಷೆ ನೀಡಿದ್ದಾರೆ. ಸ್ವಾಭಿಮಾನದ ಮೂಲಕ ಜೀವನ ರೂಪಿಸಿಕೊಳ್ಳುವ ಆತ್ಮಸ್ಥೈರ್ಯ ತುಂಬಿದ್ದಾರೆ. ತಾನು ಅನುಭವಿಸಿದ ಸಂಕಷ್ಟವನ್ನು ಇತರರು ಅನುಭವಿಸಬಾರದು ಎಂದು ಸಮಾನತೆಯನ್ನು ಸಾರಿದ್ದಾರೆ. ಶಿಕ್ಷಣದ ಮೂಲಕ ಸಾಮಾಜಿಕ ಚಿಂತನೆ ಸಾಧ್ಯ ಎಂದು ತಿಳಿಸಿಕೊಟ್ಟಿದ್ದಾರೆ. ಪ್ರತಿಯೊಬ್ಬರು ಆರ್ಥಿಕ ಸದೃಢತೆ ಹೊಂದುವುದರಿಂದ ಇತರರನ್ನು ಕೂಡ ಮೇಲಕ್ಕೆತ್ತುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದಿದ್ದಾರೆ. ತನಗೆ ಬಂದ ಕಷ್ಟಗಳಿಂದ ಎಂದಿಗೂ ಅಂಬೇಡ್ಕರ್ ರವರು ಎದೆಗುಂದಲಿಲ್ಲ. ಈ ಸಂಕಷ್ಟಗಳನ್ನು ಮೆಟ್ಟಿನಿಲ್ಲುವುದರ ಮೂಲಕ ಇಂದು ವಿಶ್ವಮಾನವನಾಗಿ ನಿಂತಿದ್ದಾರೆ. ಆದ್ದರಿಂದ ಇವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರು ಪಾಲಿಸಬೇಕು ಎಂದರು. ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಟಿ. ಈರಯ್ಯ ಮಾತನಾಡಿ ಸಮಾಜದ ಉನ್ನತೀಕರಣಕ್ಕೆ ಶ್ರಮಿಸಿದ ಪ್ರತಿಯೊಬ್ಬ ಮಹನೀಯರನ್ನು ಪ್ರತಿನಿತ್ಯ ನಾವು ಸ್ಮರಿಸಬೇಕು. ಸಾಕಷ್ಟು ಸಾಮಾಜಿಕ ಅನಿಷ್ಟ ಪದ್ದತಿಗಳಿಂದ ಜನರನ್ನು ಶೋಷಣೆ ಮಾಡುತ್ತಿದ್ದ ಸಂದರ್ಭದಲ್ಲಿ ಶೋಷಿತರ ವಿಮೋಚನೆಗೆ ತನ್ನನ್ನು ಅರ್ಪಿಸಿಕೊಂಡು ಪ್ರಾಣ ತ್ಯಾಗ ಮಾಡಿದ ಅಂಬೇಡ್ಕರ್ ರವರನ್ನು ಯಾರು ಮರೆಯಬಾರದು. ಸಂಘಟನೆಕಾರರು ಕೂಡ ಅಂಬೇಡ್ಕರ್, ಬುದ್ಧ, ಬಸವಣ್ಣ ರಂತಹ ಮಹನೀಯರ ತತ್ವ ಆದರ್ಶಗಳನ್ನು ಜನ ಸಾಮಾನ್ಯರಿಗೆ ತಿಳಿಸುವ ಕಾರ್ಯ ಮಾಡಬೇಕು. ಕೇವಲ ಆಡಂಬರ ಆಚರಣೆಗೆ ಜಯಂತಿ ಕಾರ್ಯಕ್ರಮಗಳು ಸೀಮಿತವಾಗಬಾರದು ಇವರ ಆದರ್ಶಗಳ ಪಾಲನೆಗೆ ಮುಂದಾಗಬೇಕು ಎಂದರು.ಈ ಸಂದರ್ಭದಲ್ಲಿ ಮಾಜಿ ಗ್ರಾ ಪಂ ಸದಸ್ಯರಾದ ಮಲ್ಲಿಕಾರ್ಜುನ, ಸೋಮಶೇಖರ್, ಜಗದೀಶ್, ಶಿಕ್ಷಕ ಪುಟ್ಟ ಮಾದಯ್ಯ, ಉಖಬ್ಬಾಸ್ತ್ರದ ಆನಂದ, ಮುಷಿರ್, ಶ್ರೀನಿವಾಸ್, ದೊಡ್ಡ ಸ್ವಾಮಿ, ಜ್ಯೋತಿ, ನಾಗಯ್ಯ, ಪುಟ್ಟಣ್ಣ, ಶಿವಣ್ಣ, ಸೋಮಣ್ಣ,

ಜೈ ಭೀಮ್ ಯುವಕ ಸಂಘದ ಗೋವಿಂದರಾಜ್, ನಾಗರಾಜ್, ಶೇಖರ್, ಕೃಷ್ಣ, ವಿಜಯ್, ಉಮೇಶ್, ರವಿ, ಪುಟ್ಟು, ವಿಠಲ ಸೇರಿದಂತ್ತೆ ಗ್ರಾಮಸ್ಥರು ಹಾಜರಿದ್ದರು.

# ಅಂಬೇಡ್ಕರ್ ಎಲ್ಲಾ ಜಾತಿಯವರಿಗೆ ಮೀಸಲಾತಿ ಕಲ್ಪಿಸಿದ್ದಾರೆ: ನರಸಪ್ಪ

• ಮಲ್ಲಮ್ಮ ನುಡಿ ವಾರ್ತೆ , ಕುರುಗೋಡು



ಸಮಾಜದಲ್ಲಿ ದೀನ, ದಲಿತ, ಹಿಂದುಳಿದ, ಹಾಗು ಅಲ್ಪಸಂಖ್ಯಾತರ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸಿಕೊಟ್ಟ ಮಹಾನಾಯಕ ಡಾ. ಬಿಆರ್. ಅಂಬೇಡ್ಕರ್ ಎಂದು ಕುರುಗೋಡು ತಹಶೀಲ್ದಾರ್ ನರಸಪ್ಪತಹಶೀಲ್ದಾರ್ ಹೇಳಿದರು.

ಅವರು ಪಟ್ಟಣದ ತಹಶೀಲ್ದಾರ್ ಸಭಾಂಗಣದಲ್ಲಿ ತಾಲೂಕು ಆಡಳಿತ ಕುರುಗೋಡು, ತಾಪಂ. ಕುರುಗೋಡು, ಹಾಗು ಪುರಸಭೆ ಕುರುಗೋಡು ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂವಿಧಾನಶಿಲ್ಪಿ ಡಾ.ಬಿಆರ್.ಅಂಬೇಡ್ಕರ್ ರವರ 135ನೇ ಜಯಂತೋತ್ಸವ ಹಾಗು ಹಸಿರುಕ್ರಾಂತಿಯ ಹರಿಕಾರ ಡಾ.ಬಾಬುಜಗಜೀವನರಾಮ್ ಅವರ 119ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಡಾ.ಬಿಆರ್. ಅಂಬೇಡ್ಕರ್ ಜಯಂತಿಯನ್ನು ಕೇವಲ ಒಂದೇ ಜಾತಿಗೆ ಸೀಮಿತಗೊಳಿಸದೇ ಎಲ್ಲಾ ಸಮುದಾಯಗಳಿಗೆ ಸೀಮಿತವಾಗಬೇಕೆಂದು ನೆರೆದ ಸಭಿಕರಿಗೆ ಕರೆನೀಡಿದರು.

ಪ್ರೌಢಶಾಲೆಯ ಮುಖ್ಯಗುರು ಡಿ.ಮಲ್ಲಿಕಾರ್ಜುನ ಅವರು ಸಂವಿಧಾನಶಿಲ್ಪಿ ಡಾ. ಬಿಆರ್. ಅಂಬೇಡ್ಕರ್ ಅವರ ವಿಚಾರಧಾರೆಯ ಬಗ್ಗೆ ಸಭಿಕರಿಗೆ ಮನಮುಟ್ಟುವ ಹಾಗೆ ಉಪನ್ಯಾಸ ನೀಡಿದರು.

ಪುರಸಭೆ ಅಧ್ಯಕ್ಷ ಟಿ.ಶೇಖಣ್ಣ, ರೈತಮುಖಂಡ ವಿಎಸ್.ಶಿವಶಂಕರ್ ಸೇರಿದಂತೆ ಇತರೆ ಮುಖಂಡರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಪ್ರಾರಂಭದಲ್ಲಿ ಬಿಆರ್.ಅಂಬೇಡ್ಕರ್ ಹಾಗು ಡಾ.ಜಗಜೀವನರಾಮ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಶ್ರದ್ಧಾ-ಭಕ್ತಿಯಿಂದ ಪೂಜಿಸಿದರು. ನಂತರ ಸಂವಿಧಾನ ಪೀಠಿಕೆಯನ್ನು ಸಭೆಯಲ್ಲಿ ಓದಿ ಸಾದರಪಡಿಸಿದರು.

ಪ್ರಾರಂಭದಲ್ಲಿ ತೆರೆದ ವಾಹನದಲ್ಲಿ ಡಾ.ಬಿಆರ್. ಅಂಬೇಡ್ಕರ್ ಮತ್ತು ಡಾ.ಜಗಜೀವನರಾಮ್ ಅವರ ಭಾವಚಿತ್ರದೊಂದಿಗೆ ಕುರುಗೋಡಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಹಂಡಿಜೋಗಿ ಕಲಾತಂಡದೊಂದಿಗೆ ಭವ್ಯವಾಗಿ ಮೆರವಣಿಗೆ ಮಾಡಿದರು. ಮೆರವಣಿಗೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ದತ್ತಾತ್ರೇಯಹೆಗೆಡೆ, ತಾಪಂ. ಇಒ. ನಿರ್ಮಲ, ಸಿಪಿಐ. ಬಾಳನಗೌಡ, ಪಿಎಸ್ಐ. ಸುಪ್ರಿತ್ ವಿರುಪಾಕ್ಷಪ್ಪ, ಬಿಇಒ. ಸಿದ್ದಲಿಂಗಮೂರ್ತಿ, ಆಹಾರ ಇಲಾಖೆಯ ನಿರೀಕ್ಷಕ ಮಲ್ಲಿಕಾರ್ಜುನಗೌಡ, ಅಂಬೇಡ್ಕರ್ ಸಂಘದ ಟಿ.ಸಿದ್ದಪ್ಪ, ಜಗಜೀವನರಾಮ್ ಸಂಘದ ಸುರೇಶ, ಗ್ರೇ□□2 ತಹಶೀಲ್ದಾರ್ ಮಲ್ಲೇಶಪ್ಪ, ಸಮಾಜ ಕಲ್ಯಾಣ ಅಧಿಕಾರಿ ಅರುಣ್‌ಕುಮಾರ್, ಜಿ.ಬಸವನಗೌಡ, ಬಂಗಿಮಲ್ಲಯ್ಯ, ಮಸೂತಿನಾಗರಾಜ, ಕೆ.ಬಸವರಾಜ, ತಹಶೀಲ್ದಾರ್ ಕಛೇರಿಯ ಶಿರಸ್ತೆದಾರ್ ವಿಜಯಕುಮಾರ್, ಉಪತಹಶೀಲ್ದಾರ್ ಎಸ್.ರಾಜಶೇಖರ, ಆರ್‌ಐ. ಸುರೇಶ, ವೀರಭದ್ರಯ್ಯಸ್ವಾಮಿ, ಎಲ್ಲಾ ಗ್ರಾಮಲೆಕ್ಕಾಧಿಕಾರಿಗಳು, ಪುರಸಭೆಯ ಸದಸ್ಯರು, ವಿವಿದ ಸಂಘ-ಸಂಸ್ಥೆಯ ಮುಖಂಡರು, ದಲಿತಸಂಘಟನೆಗಳ ಮುಖಂಡರು, ತಾಲೂಕುಮಟ್ಟದ ಅಧಿಕಾರಿಗಳು, ಸಿಬ್ಬಂದಿವರ್ಗದವರು ಇದ್ದರು.

# ಸಮರ್ಪಕ ಬೀಜ, ರಸಗೊಬ್ಬರ ಪೂರೈಕೆಗೆ ಕ್ರಮ : ಸಂಗಪ್ಪ

• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ



ಪ್ರಸಕ್ತ ಮುಂಗಾರು ಹಂಗಾಮಿಗೆ ರೈತರಿಗೆ ಅಗತ್ಯವಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಸಮರ್ಪಕ ಪೂರೈಕೆಗೆ ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಪ್ರಸಕ್ತ ಹಂಗಾಮಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಪೂರೈಕೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿಗೆ ಜಿಲ್ಲೆಯಲ್ಲಿ 3.17 ಲಕ್ಷ ಹೆಕ್ಟೇರ್ ಕ್ಷೇತ್ರ ಬಿತ್ತರ್ನೆಗೆ ಗುರಿ ಹೊಂದಲಾಗಿದೆ. ರೈತರಿಗೆ ಬೀಜ, ಗೊಬ್ಬರದ ಕೊರತೆ ಉಂಟಾಗದಂತೆ ಕ್ರಮವಹಿಸಿ ಅಗತ್ಯ ಪ್ರಮಾಣದ ಬೀಜ ಮತ್ತು ಗೊಬ್ಬರಗಳನ್ನು ಸಂಗ್ರಹಿಸಲಾಗಿದ್ದು, ರಿಯಾಯಿತಿ ದರದಲ್ಲಿ ವಿತರಣೆಗೆ ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲೆಯ ಸಹಕಾರಿ ಸಂಘಗಳು, ಕೃಷಿ ಇಲಾಖೆ ಕೇಂದ್ರಗಳು ಹಾಗೂ ಖಾಸಗಿ ಮಾರಾಟ ಮಳಿಗೆಗಳ ಮೂಲಕ ಪ್ರಮಾಣಿತ ಹಾಗೂ ಉತ್ತಮ ಗುಣಮಟ್ಟದ ಬೀಜಗಳನ್ನು ರೈತರಿಗೆ ಲಭ್ಯವಾಗುವಂತೆ ಕ್ರಮಕೈಗೊಳ್ಳಲಾಗಿದೆ. ಏಕದಳ, ದ್ವಿದಳ ಆಹಾರ ಧಾನ್ಯ, ಎಣ್ಣೆ ಕಾಳು ಬೆಳೆಗಳು ಸೇರಿದಂತೆ ಪ್ರಮುಖ ಬೆಳೆಗಳ ಬೀಜಗಳು ಸಮಪರ್ಕಕವಾಗಿ ಲಭ್ಯವಿವೆ ಎಂದು ತಿಳಿಸಿದರು.

ರಸಗೊಬ್ಬರಗಳ ಪೂರೈಕೆಯಲ್ಲಿಯೂ ಯಾವುದೇ ಕೊರತೆ ಇಲ್ಲದಂತೆ ಯೂರಿಯಾ, ಡಿಎಪಿ, ಎನ್‌ಪಿಕೆ ಸೇರಿದಂತೆ ಅಗತ್ಯ ಗೊಬ್ಬರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಲಾಗಿದ್ದು, ಬೇಡಿಕೆಗೆ ಅನುಗುಣವಾಗಿ ಸರಬರಾಜು ಮಾತನಾಡಲಾಗುತ್ತದೆ. ಜಿಲ್ಲೆಯಲ್ಲಿ ಈಗಾಗಲೇ ಯೂರಿಯಾ 13456 ಮೆಟ್ರಿಕ್ ಟನ್, ಡಿಎಪಿ 5954 ಮೆಟ್ರಿಕ್ ಟನ್, ಕಾಂಪ್ಲೆಕ್ಸ್ 17202 ಮೆಟ್ರಿಕ್ ಟನ್, ಎಂ.ಓ.ಪಿ 3183 ಮೆ.ಟನ್, ಎಸ್.ಎಸ್.ಪಿ 1747 ಮೆ.ಟನ್ ಸೇರಿ ಒಟ್ಟು 38742 ಮೆಟ್ರಿಕ್ ಟನ್ ದಾಸ್ತಾನು ಲಭ್ಯವಿರುವುದಾಗಿ ತಿಳಿಸಿದರು.

ಯೂರಿಯಾ ರಸಗೊಬ್ಬರ ಖರೀದಿಗೆ ಇನ್ನುಂದೆ ರೈತರು ಕಡ್ಡಾಯವಾಗಿ ಎಫ್‌ಐಡಿ ಹೊಂದಿರಬೇಕು. ಅಷ್ಟೇ ಅಲ್ಲ ತಮ್ಮ ಭೂಮಿಯನ್ನು ಸಹ ಎಫ್‌ಐಡಿಗೆ ಜೋಡಿಸಿರಬೇಕು. ಇದರ ಆಧಾರದ ಮೇಲೆ ಯೂರಿಯಾ ರಸಗೊಬ್ಬರವನ್ನು ಕೆ.ಕಿಸಾನ್ ತಂತ್ರಾಂಶದ ಮೂಲಕ ವಿತರಣೆ ಮಾಡಲಾಗುತ್ತದೆ. ಯೂರಿಯಾ ರಸಗೊಬ್ಬರ ತಯಾರಿಕೆಗೆ ವಿದೇಶದಿಂದ ಕಚ್ಚಾ ಸಾಮಗ್ರಿ ಹೆಚ್ಚು ಆಮದು ಮಾಡಿಕೊಳ್ಳಲಾಗುತ್ತಿದೆ. ಯುದ್ದದಿಂದ ರಸಗೊಬ್ಬರ ತಯಾರಿಕೆ ಕಚ್ಚಾ ಸಾಮಗ್ರಿ ಆಮದಿನಲ್ಲಿ ಸಮಸ್ಯೆಯಾಗಿದೆ. ಹೀಗಾಗಿ ಈ ಬಾರಿ ರಸಗೊಬ್ಬರ ಉತ್ಪಾದನೆಯಲ್ಲಿ ಕುಸಿತವಾಗುವ ಸಾಧ್ಯತೆ ಇರುವದರಿಂದ ರಸಗೊಬ್ಬರ ವಿತರಣೆಯ ಮೇಲೆ ವಿಶೇಷ ನಿಗಾ ಇರಿಸಲು ನಿರ್ಧರಿಸಲಾಗಿದೆ ಎಂದರು. ಜಿಪಂ ಸಿಇಓ ಶಶಿಧರ ಕುರೇರ ಮಾತನಾಡಿ, ಕೃಷಿ ಇಲಾಖೆಯ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ರೈತರಿಗೆ ತಾಂತ್ರಿಕ ಮಾರ್ಗದರ್ಶನ ನೀಡಬೇಕು. ಸಮತೋಲನ ಗೊಬ್ಬರ ಬಳಕೆ ಹಾಗೂ ಶಿಫಾರಸ್ಸು ಮಾಡಿದ ಬೀಜ ಬಳಕೆ ಕುರಿತು ಜಾಗೃತಿ ಮೂಡಿಸಬೇಕು. ರೈತರು ಅನಾವಶ್ಯಕವಾಗಿ ಗೊಬ್ಬರ ಸಂಗ್ರಹಿಸದೇ ಅಗತ್ಯವಿರುವಷ್ಟು ಮಾತ್ರ ಪಡೆಯಬೇಕು. ಕಳೆದ ಸಾಲಿನಲ್ಲಿ ರೈತರು ವಿವಿಧ ಬೆಳೆಗಳಿಗೆ ವಿಮೆ ಒಳಪಡಿಸಿದ ಹಾಗೂ ಆ ಪೈಕಿ ಪರಿಹಾರ ವಿತರಣೆ ಮಾಡಲಾದ ಮಾಹಿತಿಯನ್ನು ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಕೃಷಿ ಜಂಟಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು ಹಾಗೂ ಜಿಲ್ಲೆಯ ವಿವಿಧ ಬೀಜ, ರಸಗೊಬ್ಬರ ಮಾರಾಟಗಾರರ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಪಾದಚಾರಿ ದಾರಿಗಳ ತೆರವು ಕಾರ್ಯಾಚರಣೆ ಆರಂಭ: 65ಕ್ಕೂ ಹೆಚ್ಚು ಅಕ್ರಮ ಆಕ್ರಮಣ ಪತ್ತೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮಹಾನಗರ ಪಾಲಿಕೆಯ ವತಿಯಿಂದ ನಗರದಲ್ಲಿನ ಪ್ರಮುಖ ರಸ್ತೆಗಳಲ್ಲಿ ಪಾದಚಾರಿ ದಾರಿಗಳ (ಫುಟ್‌ಪಾತ್) ಅಕ್ರಮ ಆಕ್ರಮಣ ತೆರವು ಕಾರ್ಯಾಚರಣೆ ಇಂದು ಬೆಳಿಗ್ಗೆಯಿಂದ ಆರಂಭಿಸಲಾಯಿತು. ಸಾರ್ವಜನಿಕರಿಗೆ ಸುಗಮ ಸಂಚಾರ ಮತ್ತು ಪಾದಚಾರಿಗಳ ಸುರಕ್ಷತೆಗಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ನಗರದ ಗಡಿಗಿ ಚನ್ನಪ್ಪ ವೃತ್ತದಿಂದ ಎಎಂಪಿಸಿ ವರೆಗೆ, ಸಂಗಮ್ ವೃತ್ತದಿಂದ ತಾರಾನಾಥ್ ಆಸ್ಪತ್ರೆವರೆಗೆ ಹಾಗೂ ದುರ್ಗಮ್ಮ ದೇವಸ್ಥಾನದಿಂದ ತಾಳೂರು ರಸ್ತೆವರೆಗೆ ವಿವಿಧ ಪ್ರದೇಶಗಳಲ್ಲಿ ಈ ಕಾರ್ಯಾಚರಣೆ ನಡೆಯುತ್ತಿದೆ. ಪಾಲಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ತಂಡಗಳು ಸಂಯುಕ್ತವಾಗಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾರೆ.



ಕಾರ್ಯಾಚರಣೆಯ ವೇಳೆ ಸುಮಾರು 65ಕ್ಕೂ ಹೆಚ್ಚು ಫುಟ್‌ಪಾತ್ ಅಕ್ರಮ ಆಕ್ರಮಣ ಪ್ರಕರಣಗಳು ಪತ್ತೆಯಾಗಿದ್ದು, ಅವುಗಳನ್ನು ತೆರವುಗೊಳಿಸುವ ಕಾರ್ಯ ಮುಂದುವರಿದಿದೆ. ಅಂಗಡಿ ಮುಂಭಾಗಗಳಲ್ಲಿ ನಿರ್ಮಿಸಿದ ತಾತ್ಕಾಲಿಕ ಶೆಡ್‌ಗಳು, ವಸ್ತುಗಳ ಸಂಗ್ರಹಣೆ ಸೇರಿದಂತೆ ಹಲವು ರೀತಿಯ ಅಕ್ರಮಗಳು ಗುರುತಿಸಲ್ಪಟ್ಟಿವೆ.

ಈ ಕುರಿತು ಮಹಾನಗರ ಪಾಲಿಕೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಇಇ) ಮುನ್ನಫ್ ಪಟೇಲ್ ಅವರು ಮಾಧ್ಯಮಗಳೊಂದಿಗೆ ಮಾತನಾಡಿ, "ನಗರದ ಪಾದಚಾರಿ ದಾರಿಗಳನ್ನು ಸಂಪೂರ್ಣವಾಗಿ ಮುಕ್ತಗೊಳಿಸಲು ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಈಗಾಗಲೇ 65ಕ್ಕೂ ಹೆಚ್ಚು ಅಕ್ರಮ ಆಕ್ರಮಣಗಳನ್ನು ಗುರುತಿಸಿದ್ದೇವೆ" ಎಂದು ಮಾಹಿತಿ ನೀಡಿದರು.

ಅದೇ ವೇಳೆ, ಫುಟ್‌ಪಾತ್‌ಗಳನ್ನು ಅಕ್ರಮವಾಗಿ ಆಕ್ರಮಿಸಿಕೊಂಡಿರುವವರಿಗೆ ಮುನ್ನೆಚ್ಚರಿಕೆ ನೀಡಲಾಗಿದ್ದು, ಸ್ವಯಂ ಪ್ರೇರಿತವಾಗಿ ತೆರವುಗೊಳಿಸದಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.

ನಗರದಲ್ಲಿ ಪಾದಚಾರಿಗಳಿಗೆ ಸುರಕ್ಷಿತ ಸಂಚಾರ ವ್ಯವಸ್ಥೆ ಒದಗಿಸುವ ಉದ್ದೇಶದಿಂದ ಮುಂದಿನ ದಿನಗಳಲ್ಲಿಯೂ ಇಂತಹ ಕಾರ್ಯಾಚರಣೆಗಳನ್ನು ಮುಂದುವರಿಸಲಾಗುವುದು ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಈ ಕ್ರಮಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಪಾದಚಾರಿ ದಾರಿಗಳು ತೆರವುಗೊಂಡರೆ ಸಂಚಾರ ದಟ್ಟಣೆ ಕಡಿಮೆಯಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

# 2029ರಲ್ಲಿ ನಾರಿಶಕ್ತಿ ಪ್ರಭಾವ :ಹೇಮಲತಾ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬರುವ 2029ರ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಜಾರಿಯಾಗಿ, ನಾರಿಶಕ್ತಿ ಸಂಸತ್ತಿನಲ್ಲಿ ಶಕ್ತಿಯುತವಾಗಿ ಪ್ರತಿನಿಧಿಸಲಿದೆ ಎಂದು ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ ವಿಶ್ವಾಸ ವ್ಯಕ್ತಪಡಿಸಿದರು. ನಗರದ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಜಾರಿಗೆ ತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದ್ದು, ಸಂಸತ್ತಿನ ವಿಶೇಷ ಅಧಿವೇಶನ ಕರೆದಿರುವುದು ಇತಿಹಾಸಾತ್ಮಕ ಬೆಳವಣಿಗೆ ಎಂದರು. "ಮಹಿಳಾ ಮೀಸಲಾತಿ ಮಸೂದೆ ಹಲವು ವರ್ಷಗಳಿಂದ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಪ್ರಸ್ತಾಪವಾದರೂ ಅನುಷ್ಠಾನಕ್ಕೆ ಬಂದಿರಲಿಲ್ಲ. ಆದರೆ ಇದೀಗ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ಇದನ್ನು



ಸಂಸತ್ತಿನಲ್ಲಿ 33% ಮಹಿಳಾ ಮೀಸಲಾತಿ

ಜಾರಿಗೆ ತರುವ ದಿಟ್ಟ ನಿರ್ಧಾರ ಕೈಗೊಂಡಿದೆ. ಈ ಹಿನ್ನೆಲೆಯಲ್ಲಿ 2029ರೊಳಗೆ ಮಹಿಳೆಯರಿಗೆ ಶೇ 33ರಷ್ಟು ಪ್ರತಿನಿಧಿತ್ವ ದೊರೆಯುವುದು ಖಚಿತ" ಎಂದು ಹೇಳಿದರು. ಹಿಂದಿನ ದಿನಗಳಲ್ಲಿ ಸಂಸತ್ತಿನಲ್ಲಿ ಮಹಿಳಾ ಸದಸ್ಯರ ಪ್ರಮಾಣ ಕೇವಲ ಶೇ 4ರಷ್ಟಿತ್ತು. ಬಸವರಾಜೇಶ್ವರಿ, ನಾಗಮ್ಮ ಕೇಶವಮೂರ್ತಿ ಮೊದಲಾದ ನಾಯಕರಿಂದ ಪ್ರೇರಿತರಾಗಿ ಅನೇಕ ಮಹಿಳೆಯರು ರಾಜಕೀಯಕ್ಕೆ ಪ್ರವೇಶಿಸಿದ್ದಾರೆ. 2019ರ ವೇಳೆಗೆ ಮಹಿಳಾ ಸದಸ್ಯರ ಪ್ರಮಾಣ ಶೇ 15ರಷ್ಟು ಏರಿಕೆಯಾಗಿದೆ ಎಂದು ಅವರು ವಿವರಿಸಿದರು. ಮಹಿಳಾ ಮೀಸಲಾತಿ ವಿಚಾರಕ್ಕೆ ದೇಶದಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ವಿರೋಧ ಪಕ್ಷಗಳ ಆಕ್ಷೇಪಗಳ ನಡುವೆಯೂ ಎನ್‌ಡಿಎ ಸರ್ಕಾರ ಇದನ್ನು ಜಾರಿಗೆ ತರುವ ಬದ್ಧತೆಯಿದೆ. 2029ರ ಚುನಾವಣೆಯ ವೇಳೆಗೆ ಮಹಿಳೆಯರು ತಮ್ಮ ಹಕ್ಕಿನ ಮೀಸಲಾತಿ ಅನುಭವಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು. ಮಹಿಳಾ ಸಬಲೀಕರಣದ ದೃಷ್ಟಿಯಿಂದ 'ಡ್ರೋಣ್ ದೀದಿ', 'ಮುದ್ರಾ' ಯೋಜನೆಗಳಂತಹ ವಿವಿಧ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ಯಶಸ್ವಿಯಾಗಿ ಜಾರಿಗೊಳಿಸಿದೆ. ಇದರ ಮೂಲಕ ಮಹಿಳೆಯರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಶಕ್ತಿಶಾಲಿಗಳಾಗುತ್ತಿದ್ದಾರೆ ಎಂದು ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಡಾ. ಸುಧಾ, ವಿಜಯಲಕ್ಷ್ಮಿ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಹಂಪಿ ರಮಣ, ಮುಖಂಡರಾದ ಡಾ. ಅರುಣಾ ಕಾಮಿನೇನಿ, ಡಾ. ರೇಣುಕಾ ಮಂಜುನಾಥ, ಅಲುವೇಲು, ಸಾಧನಾ ಹಿರೇಮಠ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ದೇವದಾಸಿ ಮಹಿಳೆಗೆ ಮೂರು ಬಾರಿ ಶಸ್ತ್ರಚಿಕಿತ್ಸೆ ತನಿಖೆ,50 ಲಕ್ಷ ಪರಿಹಾರಕ್ಕೆ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ನಗರದ ಬಿಎಂಸಿ ಆರ್‌ಸಿ ಆಸ್ಪತ್ರೆಗೆ ಸಂಬಂಧಿಸಿದಂತೆ ವೈದ್ಯರ ನಿರ್ಲಕ್ಷ್ಯದಿಂದ ದೇವದಾಸಿ ಮಹಿಳೆಯೊಬ್ಬರಿಗೆ ಅನ್ಯಾಯವಾಗಿದೆ ಎಂಬ ಗಂಭೀರ ಆರೋಪ ಕೇಳಿಬಂದಿದ್ದು, ಪ್ರಕರಣದ ಸಮಗ್ರ ತನಿಖೆ ನಡೆಸಿ ಪೀಡಿತೆಗೆ 50 ಲಕ್ಷ ಪರಿಹಾರ ನೀಡಬೇಕೆಂದು ದೇವದಾಸಿ ಮಹಿಳಾ ಸಂಘದ ಗೌರವಾಧ್ಯಕ್ಷ ಯು. ಬಸವರಾಜ ಒತ್ತಾಯಿಸಿದ್ದಾರೆ. ನಗರದ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಬಳ್ಳಾರಿ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಸಂಡೂರು ತಾಲೂಕಿನ



ವೈದ್ಯರ ನಿರ್ಲಕ್ಷ್ಯ ಆರೋಪ:

ಕೊಂಡಾಪುರ ಗ್ರಾಮದ ಹೆಚ್. ದುರ್ಗಮ್ಮ (43) ಅವರಿಗೆ ನಡೆದ ಚಿಕಿತ್ಸಾ ಪ್ರಕ್ರಿಯೆಯಲ್ಲಿ ತೀವ್ರ ನಿರ್ಲಕ್ಷ್ಯ ನಡೆದಿದೆ ಎಂದು ಆರೋಪಿಸಿದರು. 2025ರ ಆಗಸ್ಟ್ ತಿಂಗಳಲ್ಲಿ ಅನಾರೋಗ್ಯದ ಹಿನ್ನೆಲೆಯಲ್ಲಿ ದುರ್ಗಮ್ಮ ಅವರು ಆಸ್ಪತ್ರೆಗೆ ತೆರಳಿದಾಗ, ಹಿಮೋಗ್ಲೋಬಿನ್ ಪ್ರಮಾಣ ಕಡಿಮೆ ಇದೆ ಎಂದು ವೈದ್ಯರು ತಿಳಿಸಿದ್ದಾರೆ. ಬಳಿಕ ಗರ್ಭಕೋಶ ತೆಗೆದುಹಾಕುವಂತೆ ಸಲಹೆ ನೀಡಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಆದರೆ ಶಸ್ತ್ರಚಿಕಿತ್ಸೆಯ ನಂತರ ನಿರಂತರ ಮೂತ್ರ ವಿಸರ್ಜನೆ ಸಮಸ್ಯೆ ಕಾಣಿಸಿಕೊಂಡಿದೆ ಎಂದು ಹೇಳಿದರು. ಪುನಃ ಚಿಕಿತ್ಸೆಗಾಗಿ ತೆರಳಿದಾಗ, ಅವರನ್ನು ಖಾಸಗಿ ಟ್ರಾಮಕೇರ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮೊದಲ ಶಸ್ತ್ರಚಿಕಿತ್ಸೆ ವೇಳೆ ನರ ಸಂಬಂಧಿತ ಸಮಸ್ಯೆಯನ್ನು ಸರಿಯಾಗಿ ಸರಿಪಡಿಸಲಾಗಿಲ್ಲವೆಂದು ಹೇಳಿ ಮತ್ತೊಮ್ಮೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಆದರೂ ಸಮಸ್ಯೆ ಕಡಿಮೆಯಾಗದೆ ಹೊಟ್ಟೆನೋವು ಹೆಚ್ಚಾಗಿದೆ ಎಂದು ವಿವರಿಸಿದರು.

ನಂತರ ಹೊಸಪೇಟೆಯ ಮತ್ತೊಂದು ಆಸ್ಪತ್ರೆಗೆ ದಾಖಲಿಸಿದಾಗ ಪರೀಕ್ಷೆಯಲ್ಲಿ ಹೊಟ್ಟೆಯೊಳಗೆ ಶಸ್ತ್ರಚಿಕಿತ್ಸೆ ವೇಳೆ ಬಿಟ್ಟಿದ್ದ ಸ್ಟೀಲ್ ರಿಂಗ್ ಪತ್ತೆಯಾಗಿದೆ ಎಂದು ಅವರು ಹೇಳಿದರು. ಈ ಹಿನ್ನೆಲೆಯಲ್ಲಿ ಟ್ರಾಮಕೇರ್ ಆಸ್ಪತ್ರೆಯ ಡಾ. ಇಮ್ದಾದ್ ಅಲಿ ಅವರು ತಮ್ಮ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಮೂರನೇ ಬಾರಿ ಶಸ್ತ್ರಚಿಕಿತ್ಸೆ ಮಾಡಿ ಸ್ಟೀಲ್ ರಿಂಗ್ ತೆಗೆದಿದ್ದಾರೆ. ಇದಕ್ಕಾಗಿ 16,750 ಶುಲ್ಕ ವಸೂಲಿ ಮಾಡಲಾಗಿದೆ ಎಂದು ಆರೋಪಿಸಿದರು. ಈವರೆಗಿನ ಚಿಕಿತ್ಸೆಗಾಗಿ ಸುಮಾರು 3 ಲಕ್ಷ ವೆಚ್ಚವಾಗಿದ್ದು, ದೀರ್ಘಕಾಲದಿಂದ ಮಾನಸಿಕ ಹಾಗೂ ದೈಹಿಕ ಯಾತನೆ ಅನುಭವಿಸುತ್ತಿದ್ದೇನೆ ಎಂದು ದುರ್ಗಮ್ಮ ತಮ್ಮ ಅಳಲು ಹಂಚಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ವೈದ್ಯಕೀಯ ನಿರ್ಲಕ್ಷ್ಯ ಸ್ಪಷ್ಟವಾಗಿರುವುದರಿಂದ ಸಂಬಂಧಿಸಿದ ವೈದ್ಯರು ಮತ್ತು ಆಸ್ಪತ್ರೆಗಳ ವಿರುದ್ಧ ಕ್ರಮ ಕೈಗೊಂಡು, ಸಂಪೂರ್ಣ ತನಿಖೆ ನಡೆಸಬೇಕು. ಜೊತೆಗೆ ಪೀಡಿತೆಗೆ ಸಂಭವಿಸಿದ ಹಾನಿಗೆ ಪರಿಹಾರವಾಗಿ 50 ಲಕ್ಷ ನೀಡಬೇಕು ಎಂದು ಯು. ಬಸವರಾಜ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸ್ವಾಮಿ, ಎನ್. ಶಂಕಣ್ಣ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಜಿ. ಸಿ. ಕಾಲೇಜಿನಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ



ಅಂಕೋಲಾ : ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಈ ಮೂರು ಅಂಶಗಳ ಮೂಲಕ ಶೋಷಿತ ವರ್ಗಗಳು ಸಾಮಾಜಿಕ ಪ್ರಜಾಪ್ರಭುತ್ವಕ್ಕಾಗಿ ದುಡಿಯಬೇಕು ಎಂಬುದು ಅವರ ಚಿಂತನೆಯಾಗಿದೆ ಎಂದು ಪ್ರಾಚಾರ್ಯ ಡಾ. ಎಸ್. ವಿ. ವಸ್ತ್ರದ ಅಭಿಪ್ರಾಯಪಟ್ಟರು. ಪಟ್ಟಣದ ಜಿ. ಸಿ. ಕಾಲೇಜಿನಲ್ಲಿ ಡಾ. ಅಂಬೇಡ್ಕರ ಅವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸ್ಟಾಫ್ ಸೆಕ್ರೆಟರಿ ಆರ್. ಪಿ. ಭಟ್ ಸ್ವಾಗತಿಸಿದರು. ಗ್ರಂಥಪಾಲಕ ಡಾ. ನಂಜುಂಡಯ್ಯ ವಂದಿಸಿದರು. ಪದವಿ ಪೂರ್ವ ವಿಭಾಗದ ಪ್ರಾಚಾರ್ಯರಾದ ಸುಜಾತ ಲಾಡ ಇತರರು ಉಪಸ್ಥಿತರಿದ್ದರು.

# ಶೇಖಣಾಚಾರ್ಯ ಸ್ಮಾರಕ ಭವನ ಲೋಕಾರ್ಪಣೆ

• ಮಲ್ಲಮ್ಮ ನುಡಿವಾರ್ತೆ ,ಕೊಪ್ಪಳ

ಇಲ್ಲಿನ ಗವಿಶ್ರೀ ನಗರದ ಮೇದಾರ ಕೇತೇಶ್ವರ ಕಲ್ಯಾಣ ಮಂಟಪದ ಹತ್ತಿರ ಇರುವ ಐತಿಹಾಸಿಕ ಸುಕ್ಷೇತ್ರ, ಶ್ರೀ ಸಹಸ್ರಾಂಜನೇಯ ದೇವಸ್ಥಾನದ ಶ್ರೀ ಶೇಖಣಾಚಾರ್ಯ ಸ್ಮಾರಕ ಭವನದ ಲೋಕಾರ್ಪಣೆ ಕಾರ್ಯಕ್ರಮ ಎಪ್ರಿಲ್ 16 ಗುರುವಾರ ಬೆಳಿಗ್ಗೆ 6.52 ನಿಮಿಷಕ್ಕೆ ಜರುಗಲಿದೆ ಎಂದು ದೇವಸ್ಥಾನದ ಪ್ರಧಾನ ಕಾರ್ಯದರ್ಶಿ ಮಂಜುನಾಥ ಜಿ. ಗೊಂಡಬಾಳ ತಿಳಿಸಿದ್ದಾರೆ.

ಅಂದು ದೇವಸ್ಥಾನದ ಅಧ್ಯಕ್ಷರು ಮತ್ತು ಹನುಮನಾರಾಧಕರಾದ ಪ್ರಕಾಶ ಶಿಲ್ಪಿ ಅವರು 7004 ನೇ ಹನುಮನ ವಿಗ್ರಹ ತಯಾರಿಸಿ ಪೂಜೆ ಅಭಿಷೇಕ ನೆರವೇರಿಸುವರು. ಹುಬ್ಬಳ್ಳಿಯ ವೇ. ಮೂ. ಸೋಮಾಚಾರ್ಯ ರಾಮಾಚಾರ್ಯ ಕಡ್ಲಾಸ್ಕರ್ ಅವರ ಪೌರೋಹಿತ್ಯದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ಜರುಗುತ್ತವೆ. ಅಜ್ಜನ ಭಕ್ತರು ಆಗಮಿಸಲು ಕೋರಿದ್ದಾರೆ.



# ಸ್ವಯಂ ಗಣತಿ ಪೂರ್ಣಗೊಳಿಸಿದ ನಾರಾ ಭರತ್ ರೆಡ್ಡಿ



• ಮಲ್ಲಮ್ಮ ನುಡಿ ವಾರ್ತೆ , ಬಳ್ಳಾರಿ

ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ 'ಜನಗಣತಿ 2027' ಅಂಗವಾಗಿ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಇಂದು ತಮ್ಮ ನಿವಾಸದಲ್ಲಿ ಸ್ವಯಂ ಗಣತಿ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು. ತಮ್ಮ ಕುಟುಂಬದ ವಿವರಗಳನ್ನು ಆನ್‌ಲೈನ್ ಪೋರ್ಟಲ್ ಮೂಲಕ ದಾಖಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ದೇಶದ ಅಭಿವೃದ್ಧಿ ಯೋಜನೆಗಳ ರೂಪಿಸುವಿಕೆಯಲ್ಲಿ ಜನಗಣತಿಯು ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬ ನಾಗರಿಕನು ನಿಖರವಾದ ಮಾಹಿತಿಯನ್ನು ನೀಡುವುದು ಸರ್ಕಾರದ ಕರ್ತವ್ಯಕ್ಕೆ ಸಹಕಾರಿಯಾದಂತೆ ಎಂದು ತಿಳಿಸಿದರು. ಈ ಗಣತಿಯ ದತ್ತಾಂಶವು ಮುಂದಿನ ದಿನಗಳಲ್ಲಿ ಕ್ಷೇತ್ರದ ಮೂಲಸೌಕರ್ಯ ಮತ್ತು ಕಲ್ಯಾಣ ಯೋಜನೆಗಳ ಅನುಷ್ಠಾನಕ್ಕೆ ದಾರಿದೀಪವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಳ್ಳಾರಿ ನಗರದ ಪ್ರತಿಯೊಂದು ಕುಟುಂಬವೂ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿ, ಗಣತಿದಾರರಿಗೆ ಸಹಕರಿಸಬೇಕು ಎಂದು ಅವರು ವಿನಂತಿಸಿದರು.

# ತಹಸಿಲ ಕಚೇರಿಯಲ್ಲಿ ಅಂಬೇಡ್ಕರ ಜಯಂತಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಜಯಂತ್ಯುತ್ಸವ ಕಾರ್ಯಕ್ರಮ ಅದ್ದೂರಿಯಾಗಿ ಆಚರಣೆ ಮಾಡಲಾಯಿತು.

ಶಿವಾಜಿ ಆರ್. ಎಚ್ ಪ್ರಾಚಾರ್ಯರು ಶಾಂತಿವರ್ಧಕ ಪಿಯು ಕಾಲೇಜ ಅವರು ಮಾತನಾಡಿ, ಕೇವಲ ರಾಜಕೀಯ ಮೀಸಲಾತಿಯಿಂದ ದಲಿತ ಮತ್ತು ಶೋಷಿತರಿಗೆ ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಸ್ವಾತಂತ್ರ್ಯದ ಬದುಕು ಕಟ್ಟಿಕೊಳ್ಳಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಸಾಮಾಜಿಕ ಬದಲಾವಣೆ, ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೂರಿರುವ ಜಾತಿಯತೆ, ಅಸಮಾನತೆ ಹಾಗೂ ಮೂಢನಂಬಿಕೆಗಳನ್ನು ಬೇರುಸಹಿತ ಕಿತ್ತೆಸೆದಾಗ ಮಾತ್ರ ಶೋಷಿತರ ಹೋರಾಟಕ್ಕೆ ನಿಜವಾದ ಅರ್ಥ ಸಿಗುತ್ತದೆ ಎಂದು ಹೇಳಿದರು.



ಕಾರ್ಯಕ್ರಮದ ಆರಂಭದಲ್ಲಿ ತಹಶೀಲ್ದಾರ್ ಅಮಿತ್‌ಕುಮಾರ್ ಕುಲಕರ್ಣಿ ಅವರು ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಜಯಂತಿಗೆ ಚಾಲನೆ ನೀಡಿ ಮಾತನಾಡಿದರು.

ವೇದಿಕೆ ಮೇಲೆ ಗ್ರೇಡ್-2 ತಹಶೀಲ್ದಾರ್ ರಮೇಶ ಪದ್ದೆ, ಕಮಲನಗರ ಪಿಡಿಓ ದಿಲೀಪ ಸಂತಪುರೆ, ನೀಲಕಂಠರಾವ್ ಕಾಂಬಳೆ, ವಿಷ್ಣುಕಾಂತ್ ಸಿಂಧೆ, ಪ್ರವೀಣ ಕದಂ, ರಂಗಾರಾವ ಜಾಧವ, ವಿಠ್ಠಲರಾವ್ ಪಾಟೀಲ, ಜನಾರ್ಧನ ಸಾವರ್ಕರ, ಶೇಷಾರಾವ ಪಾಟೀಲ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಪ್ರಮುಖರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮ: ಶಾಲಾ ಮಕ್ಕಳಿಂದ ಸ್ವಾಗತ ಗೀತೆ ಗಾಯನ ನಡೆಯಿತು. ಸುಧಾಮ ಭಾಸ್ಕರೆ ಅವರು ಸ್ವಾಗತಿಸಿದರೆ, ಹನುಮಂತರಾಯ ಕೋಟಗೆ ವಂದನಾರ್ಪಣೆ ಮಾಡಿದರು. ಭರತ್ ನಂದನವರೆ ಕಾರ್ಯಕ್ರಮವನ್ನು ನಿರೂಪಿಸಿದರು. ಸಮಾಜ ಕಲ್ಯಾಣ ಇಲಾಖೆಯ ಶ್ರೀಕಾಂತ್ ಸೇರಿದಂತೆ ಅನೇಕ ಗಣ್ಯರು ಈ ಸಂದರ್ಭದಲ್ಲಿ ಹಾಜರಿದ್ದರು.

# 10 ಕೋಟಿ ರೂ. ವೆಚ್ಚದಲ್ಲಿ ಅಂಬೇಡ್ಕರ್ ಸುಸಜ್ಜಿತ ಗ್ರಂಥಾಲಯ ನಿರ್ಮಿಸಲು ನಿರ್ಧಾರ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಅಂಬೇಡ್ಕರ್ ಅವರ ಆಶಯಗಳನ್ನು ಉಳಿಸಲು ಪ್ರತಿಯೊಂದು ಮನೆಯಲ್ಲೂ ಒಬ್ಬರು ಐಎಎಸ್, ಐಪಿಎಸ್, ಇಂಜಿನಿಯರ್, ಡಾಕ್ಟರ್, ಒಟ್ಟಿನಲ್ಲಿ ಉನ್ನತ ವ್ಯಾಸಂಗ ಪಡೆದ ವಿದ್ಯಾವಂತರು ಇರಬೇಕು. ಇದೇ ಉದ್ದೇಶದಿಂದ ಬಳ್ಳಾರಿ ನಗರದಲ್ಲಿ ಅಂಬೇಡ್ಕರ್ ಅವರ ಹೆಸರಿನಲ್ಲಿ ರೂ.10 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಗ್ರಂಥಾಲಯ ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಲ್ಲಿ ಮಂಗಳವಾರ ಏರ್ಪಡಿಸಿದ್ದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ಭಾಗದ ದಲಿತರು ಶಿಕ್ಷಣದಲ್ಲಿ ಮುಂದಿರುವುದರಿಂದ ತಮ್ಮ ಹಕ್ಕುಗಳಿಗಾಗಿ ಸಮರ್ಥವಾಗಿ ಹೋರಾಡುತ್ತಿದ್ದಾರೆ, ಆದರೆ ನಮ್ಮ ಭಾಗದಲ್ಲಿ ಶಿಕ್ಷಣದ ಕೊರತೆ ಇರುವುದರಿಂದ ಜನರು ಇನ್ನೂ ಮುಗ್ಧರಾಗಿದ್ದಾರೆ. ಹಾಗಾಗಿ ಈ ಗ್ರಂಥಾಲಯದ ಮೂಲಕ ಬಳ್ಳಾರಿಯ ಮಕ್ಕಳು ಓದಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಾಗಿ, ಇಂಜಿನಿಯರ್, ಡಾಕ್ಟರ್‌ಗಳಾಗಿ ಹೊರಹೊಮ್ಮಬೇಕು. ಈ ಯೋಜನೆಯ



ಕುರಿತು ಜಿಲ್ಲಾಧಿಕಾರಿಯವರೊಂದಿಗೆ ಈಗಾಗಲೇ ಮೌಖಿಕವಾಗಿ ಚರ್ಚಿಸಲಾಗಿದೆ ಎಂದು ತಿಳಿಸಿದರು.

ಅಸ್ಪೃಶ್ಯತೆ ಕೇವಲ ದೈಹಿಕವಾಗಿ ನಿರ್ಮೂಲನೆಯಾದರೆ ಸಾಲದು. ಅದು ಇಂದಿಗೂ ಜನರ ಮನಸ್ಸಿನಲ್ಲಿ ಬೇರೂರಿದೆ ಎಂದು ವಿಷಾದ ವ್ಯಕ್ತಪಡಿಸಿದ ಶಾಸಕರು, ಅಂಬೇಡ್ಕರ್ ಅವರು ಮೀಸಲಾತಿಯನ್ನು ನೀಡಿದ್ದು ಕೇವಲ ಮೀಸಲು ಕ್ಷೇತ್ರಗಳಿಗೆ ಸೀಮಿತವಾಗಲು ಅಲ್ಲ; ಬದಲಾಗಿ ದಲಿತರು ಸಾಮಾನ್ಯ ಕ್ಷೇತ್ರಗಳಲ್ಲೂ ಸ್ಪರ್ಧಿಸಿ ಮುಂಚೂಣಿಗೆ ಬರಬೇಕು ಎಂಬುದು ಅವರ ಆಶಯವಾಗಿತ್ತು ಎಂದು ತಿಳಿಸಿದರು.

ಅಂಬೇಡ್ಕರ್ ಅವರು ನೀಡಿದ ಸಂವಿಧಾನವೇ ನಮಗೆ ದೊಡ್ಡ ಆಯುಧವಾಗಿದ್ದು, ಅದನ್ನು ಗೌರವಿಸಿ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯೋಣ. ದಲಿತರಿಗೆ ಮೀಸಲಾತಿ ಎಂಬುದು ಸಂವಿಧಾನಬದ್ಧ ಹಕ್ಕು. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ದಲಿತರಿಗೆ ಎಂದಿಗೂ ಅನ್ಯಾಯ ಮಾಡುವುದಿಲ್ಲ ಎಂದು ಅಭಿಮತ ವ್ಯಕ್ತಪಡಿಸಿದರು.

ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಮಾತನಾಡಿ, ಹಿಂದೂಗಳಿಗೆ ಭಗವದ್ಗೀತೆ, ಮುಸ್ಲಿಮರಿಗೆ ಕುರಾನ್, ಕ್ರೈಸ್ತರಿಗೆ ಬೈಬಲ್ ಇರುವಂತೆ, ಭಾರತೀಯರೆಲ್ಲರೂ ಒಂದೇ ಸೂರಿನಡಿ ಸಾಗಲು 'ಸಂವಿಧಾನ'ವೇ ಪರಮ ಶ್ರೇಷ್ಠ ಗ್ರಂಥವಾಗಿದೆ ಎಂದು ಅಭಿಪ್ರಾಯಪಟ್ಟರು.

ಅಂಬೇಡ್ಕರ್ ಅವರು ಎಲ್ಲ ಜಾತಿ, ಧರ್ಮದ 18 ವರ್ಷ ತುಂಬಿದ ಪ್ರತಿಯೊಬ್ಬರಿಗೂ ಸಮಾನ ಮತದಾನದ ಹಕ್ಕನ್ನು ತಂದುಕೊಟ್ಟವರು. ಅಂಬೇಡ್ಕರ್ ಅವರು ಬರೆದ 'ದ ಪ್ರಾಬ್ಲಮ್ ಆಫ್ ದಿ ರೂಪಿ' ಪ್ರಬಂಧದ ಆಧಾರದ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾಯಿತು. ಅವರ ಆರ್ಥಿಕ ಚಿಂತನೆಗಳ ಫಲವಾಗಿಯೇ ಇಂದು ಬ್ಯಾಂಕುಗಳು ಸಾಮಾನ್ಯ ಜನರ ಮನೆಬಾಗಿಲಿಗೆ ತಲುಪಿವೆ ಮತ್ತು ರಾಷ್ಟ್ರೀಕರಣಗೊಂಡಿವೆ ಎಂದು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅವರ ಕೊಡುಗೆಯನ್ನು ಶ್ಲಾಘಿಸಿದರು. ಮಹಿಳೆಯರಿಗೆ ಸಮಾನ ಹಕ್ಕು ಮತ್ತು ಆಸ್ತಿಯಲ್ಲಿ ಪಾಲು ನೀಡುವ 'ಹಿಂದೂ ಕೋಡ್ ಬಿಲ್' ಅನ್ನು ಸಂಸತ್ತಿನಲ್ಲಿ ಮಂಡಿಸಿದರು. ಮಹಿಳೆಯರಿಗೆ ಸಮಾನತೆ ಸಿಗಬೇಕೆಂಬ ಉದ್ದೇಶದಿಂದ ಅವರು ತಮ್ಮ ಮಂತ್ರಿ ಪದವಿಗೇ ರಾಜೀನಾಮೆ ನೀಡಿದ ಘಟನೆಯನ್ನು ಮೆಲುಕು ಹಾಕಿದ ಅವರು, ಮಹಿಳೆಯರ ಉದ್ಧಾರಕ್ಕಾಗಿ ಅಂಬೇಡ್ಕರ್ ಮತ್ತು ಸಾವಿತ್ರಿಬಾಯಿ ಫುಲೆ ಅವರ ಕೊಡುಗೆಗಳನ್ನು ಸ್ಮರಿಸಿದರು.

# ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 136 ನೇ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ, ಸಾಮಾಜಿಕ ಸುಧಾರಕ ಮತ್ತು ಭಾರತೀಯ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 136 ನೇ ಜಯಂತಿಯನ್ನು ಬಳ್ಳಾರಿ ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಅಲ್ಲಂ ಪ್ರಶಾಂತ್ ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪಗಳನ್ನು ಹಾಕುವ ಮೂಲಕ ಗೌರವ ನಮನಗಳನ್ನು ಸಲ್ಲಿಸಲಾಯಿತು. ಅಧ್ಯಕ್ಷರು ಮತ್ತು ಮುಖಂಡರುಗಳು ತಮ್ಮ ತಮ್ಮ ಭಾಷಣಗಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರು ದೇಶಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ನಂತರ ಬಳ್ಳಾರಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷೆಯಾಗಿ ಮತ್ತೊಮ್ಮೆ ನೇಮಕಗೊಂಡಿರುವ ಶ್ರೀಮತಿ ಎಂ.ಎಸ್. ಮಂಜುಳ ಅವರನ್ನು ಶಾಲ್ ಹಾಕುವ ಮೂಲಕ ಸನ್ಮಾನಿಸಿ ಶುಭಾಶಯಗಳನ್ನು ತಿಳಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ಕಲುಕಂಬ ಪಂಪಾಪತಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಹುಮಯೂನ್ ಖಾನ್, ಮಹಾಪೌರರಾದ ಪಿ.ಗಾದೆಪ್ಪ, ಕ್ರೈಸ್ತ ಅಭಿವೃದ್ಧಿ ನಿಗಮದ ರಾಜ್ಯ ನಿರ್ದೇಶಕರಾದ ಜೀ.ಜೆ.ರವಿ ಕುಮಾರ್, ಡಿಸಿಸಿ ಕಾರ್ಯಾಧ್ಯಕ್ಷರಾದ ಭೋಯಾಪಾಟಿ ವಿಷ್ಣು, ನಗರ ಪ್ರಚಾರ ಸಮಿತಿಯ ಅಧ್ಯಕ್ಷರಾದ ಈರನ್ನ ಗೌಡ,

ಡಿಸಿಸಿ ಕಾರ್ಯದರ್ಶಿಗಳಾದ ವೈ.ಶ್ರೀನಿವಾಸಲು, ಡಿಸಿಸಿ ಕಾರ್ಯಕಾರಿಣಿ ಸಮಿತಿಯ ಸದಸ್ಯರಾದ ವೆಂಕಟ ಲಕ್ಷ್ಮೀ ನಾರಾಯಣ, ಮಹಾನಗರ ಪಾಲಿಕೆ ಸದಸ್ಯರಾದ ಜಾನಿಕಮ್ಮ, ಮಿಂಚು ಶ್ರೀನಿವಾಸುಲು, ಸಮೀರ್, ಮುಂಚೂಣಿ ಘಟಗಳ ಅಧ್ಯಕ್ಷರುಗಳಾದ ಅಲಿವೇಲು ಸುರೇಶ್, ಕನೇಕಲ್ ಮಾಬುಸಾಬ್, ಅಖಿಲ ಅಹಮ್ಮದ್, ಅತ್ತವುಲ್ಲ, ಮುಖಂಡರುಗಳಾದ ಶ್ರೀ ಗೌಸ್, ಸತೀಶ್ ಚಕ್ರವರ್ತಿ, ಮಲ್ಲಮ್ಮ, ಸುನೀತಾ, ವಿಜಯಲಕ್ಷ್ಮಿ, ಶ್ರೀಲತಾ, ಮಲ್ಲೇಶ್ವರಿ, ಗೌಸಿಯ, ಸಣ್ಣಹೊನ್ನೂರಪ್ಪ, ಲಿಂಗರಾಜು, ಬಲ್ಲಿ ಮೋಹನ್, ರಾಮ ಮೂರ್ತಿ ಮತ್ತು ಇತರರು ಉಪಸ್ಥಿತರಿದ್ದರು.

# ಅಗ್ನಿಶಾಮಕ ಸೇವಾ ಸಪ್ತಾಹ : ಕರಪತ್ರ ವಿತರಣೆ




• **ಮಲ್ಲಮ್ಮ ನುಡಿವಾರ್ತೆ, ಕುಕನೂರ**

ತಾಲೂಕಿನ ಭಟಪನಹಳ್ಳಿ ಗ್ರಾಮದಲ್ಲಿ ಅಗ್ನಿ ಶಾಮಕದಳದ ಸಿಬ್ಬಂದಿ ಗಳು ಅಗ್ನಿಶಾಮಕ ವಾಹನದೊಂದಿಗೆ ಎ. 14 ರಂದು ಆಗಮಿಸಿ ,ಏ 14 ರಿಂದ 20 ರ ವರೆಗೆ ಜರಯಗುವ ಅಗ್ನಿಶಾಮಕ ಸೇವಾ ಸಪ್ತಾಹ ಅಂಗವಾಗಿ ಮತ್ತು ಹುತಾತ್ಮರ ಸವಿ ನೆನಪಿಗಾಗಿ ಭಟಪನಹಳ್ಳಿಯ ಗ್ರಾಮದವರಿಗೆ ಮತ್ತು ಇತರ ಗ್ರಾಮದ ಸರ್ವಾಜನಿಕರಿಗೆ ಕರಪತ್ತ ವಿತರಿಸಿ ,ಬೆಂಕಿ ಸಣ್ಣದು ದೊಡ್ಡದು ಇರಲಿ ಅದು ಬೆಂಕಿ ಬೆಂಕಿನೆ ಮುಂದಿನ ಅವಗಡ ಅನಾಹುತ ತಡೆಗಟ್ಟಲು ಸಹಾಯಕ್ಕಾಗಿ ತಕ್ಷಣ 101, 112 , 108 ಅಥವಾ ಹತ್ತಿರದ ಅಗ್ನಿಶಾಮಕ ಠಾಣೆಯ ದೂರವಾಣಿಗೆ ಕರೆ ಮಾಡಬೇಕು ಎಂದು ಮಾಹಿತಿ ತಿಳಿಸಿದರು. ಈ ವೇಳೆ ಅಗ್ನಿಶಾಮಕ ಠಾಣಾಧಿಕಾರಿ ಜನಾರ್ದನ ರಾವ್, ಹಾಗು ಸಿಬ್ಬಂದಿಗಳಾದ ವಿಜಂಢಕುಮಾರ,ವಿನಯಕುಮಾರ, ಚೇತನ, ಮಂಜುನಾಥ, ಮೌನೇಶ ಹಾಗು ಸಾರ್ವಜನಿಕರು ಭಾಗವಹಿಸಿದ್ದರು.

# ಅಂಬೇಡ್ಕರ್ ತತ್ವಗಳು ಯುವಕರಿಗೆ ದಾರಿದೀಪ: ಯಮನೂರಪ್ಪ ಕಟ್ಟಿಮನಿ



• **ಮಲ್ಲಮ್ಮ ನುಡಿವಾರ್ತೆ ,ಕುಕನೂರ**

ತಾಲ್ಲೂಕಿನ ಬಳಿಗೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಕ್ಕಿಹಳ್ಳಿ ತಾಂಡಾದ ಸಾರ್ವಜನಿಕ ಗ್ರಂಥಾಲಯದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಯುವಜನರ ತಂಡ ಮಂಗಳವಾರ ಅರ್ಥಪೂರ್ಣವಾಗಿ ಆಚರಿಸಿತು.

ಕಾರ್ಯಕ್ರಮವನ್ನು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡುವಮೂಲಕಆರಂಭಿಸಲಾಯಿತು. ಬಳಿಕ ಅಂಬೇಡ್ಕರ್ ಕುರಿತು ಪೀಠಿಕೆ ವಾಚನ ನಡೆಯಿತು. ಅವರ ಶಿಕ್ಷಣ, ಜೀವನ ತತ್ವ ಹಾಗೂ ಸಿದ್ಧಾಂತಗಳ ಕುರಿತು ವಿಚಾರ ಸಂಕಿರಣವೂ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾ. ಪಂ. ಮಾಜಿ ಸದಸ್ಯ ಯಮನೂರಪ್ಪ ಕಟ್ಟಿಮನಿ ಮಾತನಾಡಿ, ಡಾ. ಅಂಬೇಡ್ಕರ್ ಅವರು ಕೇವಲ ವ್ಯಕ್ತಿಯಲ್ಲ, ಒಂದು ಚಿಂತನೆ, ಒಂದು ಚಳವಳಿ ಹಾಗೂ ಶೋಷಿತರ ಧ್ವನಿಯಾಗಿ ಸದಾ ಜೀವಂತವಾಗಿರುವ ಮಹಾನ್ ದಾರ್ಶನಿಕ ಎಂದು ಕೊಂಡಾಡಿದರು.

ಅವರತತ್ವಗಳುಇಂದಿನಯುವಜನತೆಗೆ ಮಾರ್ಗದರ್ಶಕವಾಗಿದ್ದು, ಶಿಕ್ಷಣ ಮತ್ತು ಹಕ್ಕುಗಳ ಅರಿವು ಮೂಲಕ ಸಮಾಜವನ್ನು ಸಮತೋಲನದ ದಾರಿಯಲ್ಲಿ ಮುನ್ನಡೆಸಬೇಕೆಂದು ಕರೆ ನೀಡಿದರು.

ಸಂವಿಧಾನವನ್ನು ಓದಿ, ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಅಂಬೇಡ್ಕರ್ ಅವರಆದರ್ಶಗಳನ್ನುಅರಿತುಕೊಂಡು ಯುವಕರು ತಮ್ಮ ಬದುಕಿನಲ್ಲಿ ಅನುಸರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ, ಕುಮಾರ ಬಳಗೇರಿ, ವಿರೂಪಾಕ್ಷಯ್ಯ ಕುರ್ತ–ಕೋಟಿ, ಎಸ್‌ಡಿಎಂಸಿ ಅಧ್ಯಕ್ಷ ಯಮನೂರಪ್ಪ ಭಾನಾಪುರ, ಶ್ರೀಕಾಂತ ಕಟ್ಟಿಮನಿ, ಪ್ರಕಾಶ್ ಬಳಿಗೇರಿ, ಯಲ್ಲಪ್ಪ ಕಾರಭಾರಿ, ಅಂಬರೀಶಮನ್ನಾಪುರ, ಮನೋಹರ್, ವೆಂಕಟೇಶ್ ನಾಯ್ಕ, ಶಶಿಕುಮಾರ್, ರಾಘವೇಂದ್ರ, ಶಶಿ ಕೆ., ಮೇಘರಾಜ ರಾಠೋಡ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# 16 ಕೋಟಿ ರೂ ವಂಚನೆ ಆರೋಪಿ ಪೊಲೀಸ್ ವಶಕ್ಕೆ

• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ಇಲ್ಲಿನ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವಲಯ ಕಚೇರಿಯಲ್ಲಿ □16.17 ಕೋಟಿ ರೂ ಅವ್ಯವಹಾರ ಮಾಡಿದ್ದ ಆರೋಪದಡಿ ಹುಡುಕುತ್ತಿದ್ದ ಪ್ರಮುಖ ಆರೋಪಿ ಕೆಆರ್ ಎಸ್ ಪಕ್ಷದಲ್ಲಿದ್ದ ಸಂತೋಷ್ ಹೆಚ್. ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಜಾಮೀನುಗಾಗಿ ಪ್ರಯತ್ನಿಸುತ್ತಿದ್ದ ಸಂತೋಷ್ ಇಷ್ಟು ದಿನ ತಲೆ ಮರೆಸಿಕೊಂಡಿದ್ದ.

ಆದರೆ ಪೊಲೀಸರು ಬಲೆ ಬೀಸು ನಿನ್ನೆ ವಶಕ್ಕೆ ಪಡೆದಿದ್ದಾರಂತೆ.

ಈ ಪ್ರಕರಣ 15 ಕೋಟಿ ರೂಗೂ ಹೆಚ್ಚು ಅಗಿರುವುದರಿಂದ ಸಿಐಡಿ ತನಿಖೆಗೆ ನೀಡಲಾಗುವುದೆಂದು ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಹೇಳಿದ್ದರು. ಸಧ್ಯ ಎಪಿಎಂಸಿ ಠಾಣೆಯ ಪೊಲೀಸರು ಈತನನ್ನು ವಶಕ್ಕೆ ಪಡೆದಿದ್ದಾರಂತೆ.

ಕೆಐಡಿಬಿ ಕಚೇರಿಯಲ್ಲಿ ಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಿದ್ದ ಸಂತೋಷ್ ಕುಮಾರ್, ಕಳೆದ 2022ರ ಅಕ್ಟೋಬರ್ 15 ರಿಂದ 2026ರ ಫೆಬ್ರವರಿ 20 ರವರೆಗೆ ಇಲಾಖೆಗೆ ಸಂಬಂಧಿಸಿದ ಬ್ಯಾಂಕ್ ಖಾತೆಯಿಂದ



ಹಣವನ್ನು ಹಂತ ಹಂತವಾಗಿ ಇತರರ ಖಾತೆಗಳಿಗೆ ವರ್ಗಾವಣೆ ಮಾಡಿ ನಂತರ ಆತನ ಖಾತೆಗೆ ವರ್ಗಾವಣೆಮಾಡಿಕೊಂಡಿದ್ದಾನೆಂದು ಕೆಐಡಿಬಿ ಬಳ್ಳಾರಿ ವಲಯ ಕಚೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಎಸ್.ಎಂ. ಕೊಳಲಗಿ ದೂರು ನೀಡಿದ್ದರು.

ಸಂತೋಷ್ ಕುಮಾರ್ ಇಲಾಖೆಗೆ ಸಂಬಂಧಿಸಿದ ಚೆಕ್ಗಳ ಮೇಲೆ ಮೇಲಾಧಿಕಾರಿಗಳ ನಕಲಿ ಸಹಿ ಹಾಗೂ ಕಚೇ–ರಿಯ ಮುದ್ರೆಯನ್ನು ಹಾಕಿ ಹಣ ವರ್ಗಾವಣೆ ಮಾಡಿಸಿಕೊಂಡಿದ್ದ.

ಕಚೇರಿಯಲ್ಲಿ ಕಾಣದಾಗಿದ್ದ ನಿರ್ಧಿಷ್ಟಚೆಕ್ಗಳನ್ನುನಗದೀಕರಿಸದಂತೆ ಬ್ಯಾಂಕಿಗೆ ತಿಳಿಸಿದ್ದರೂ

ಹಣವರ್ಗಾವಣೆಮಾಡಿರುವುದರಿಂದ ಯೂನಿಯನ್ ಬ್ಯಾಂಕ್ ಮ್ಯಾನೇಜರ್ ಮತ್ತು ಸಿಬ್ಬಂದಿ, ಕೆಐಎಡಿಬಿ ನಿವೃತ್ತ ನೌಕರ ನಜೀರ್ ಅಹಮ್ಮದ್, ಶೃತಿ ಕೆ.ಟಿ, ಬೇಬಿ ಆಯೆಷಾ, ರಾಖೇಶ್ ಬಡಗಲ, ವಿಜಯಲಕ್ಷ್ಮಿ ಯವರ ಮೇಲೆ ಪ್ರಕರಣ ದಾಖಲಾಗಿದೆ.

ತನಿಖೆಯಲ್ಲಿ ಜಿ.ಎಚ್ ಶ್ರೀಧರ್ ಅವರು ವಲಯ ಕಚೇರಿಯ ಕಾರ್ಯನಿರ್ವಹಕ ಇಂಜಿನೀಯರ್ ಆಗಿದ್ದಾಗ □12,19,01,185. ಜನಾರ್ದನ ನಾಯ್ಕ ಎಂ ಇದ್ದಾಗ, □2,48,69,333, ಸದ್ಯ ಎಸ್. ಎಂ. ಕೊಳಲಗಿ ಅವರ

ಅವಧಿಯಲ್ಲಿ □1,50,28,398 ಹಣ ವಿವಿಧ ಖಾತೆಗಳಿಗೆ ವರ್ಗಾವಣೆಯಾಗಿರುವುದು ಪತ್ತೆಯಾಗಿದೆ.

# ಡಾ.ಬಿ ಆರ್ ಅಂಬೇಡ್ಕರ ಜಯಂತಿ: ಪುಷ್ಪನಮನ

• **ಮಲ್ಲಮ್ಮ ನುಡಿವಾರ್ತೆ ,ಕೊಪ್ಪಳ**

ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ ಅವರ 135ನೇ ಜಯಂತ್ಯುತ್ಸವ ನಿಮಿತ್ತ ಮಾನವತಾವಾದಿ ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಲಾಯಿತು.

ಸಂಸದರಾದ ರಾಜಶೇಖರ ಹಿಟ್ನಾಳ, ಶಾಸಕರಾದ ಹೇಮಲತಾ ನಾಯಕ, ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ ಇಟ್ನಾಳ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ ಎಲ್ ಅರಸಿದ್ಧಿ, ಜಿಲ್ಲಾ ಪಂಚಾಯತ್ ಸಿಇಓ ವರ್ಣಿತ್ ನೇಗಿ ಅವರು ಏಪ್ರೀಲ್ 14ರ ಬೆಳಗ್ಗೆ ಶಿವಶಾಂತವೀರ ನಗರದ ನಿಜಶರಣ ಅಂಬಿಗರ ಚೌಡಯ್ಯ ಉದ್ಯಾನ ವನಕ್ಕೆ ಆಗಮಿಸಿ ಡಾ.ಬಿ.ಆರ್. ಅಂಬೇಡ್ಕರ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಸಮಾಜದ ಗಣ್ಯರು ಉಪಸ್ಥಿತರಿದ್ದರು.



# ಬಿಜೆಪಿಯಿಂದ ಡಾ.ಅಂಬೇಡ್ಕರ್ ಜಯಂತಿ



• **ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ**

ಡಾ.ಅಂಬೇಡ್ಕರ್ ಅವರು ಶಿಕ್ಷಣವೇ ಸಮಾನತೆಯ ಏಕೈಕ ಮಾರ್ಗ ಎಂದು ಪ್ರತಿಪಾದಿಸಿದರು ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು.

ನಗರದ ಶಿವಾನಂದ ಜೀನನಲ್ಲಿನ ಬಿಜೆಪಿ ಕಾರ್ಯಾಲಯದಲ್ಲಿ ಮಂಗಳವಾರ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದದಿಂದ ಹಮ್ಮಿಕೊಂಡ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂಬೇಡ್ಕರ ಅವರ ಸಾಧನೆ, ಹೋರಾಟ, ರಾಷ್ಟ್ರಪ್ರೇಮ ನಮಗೆ ಸದಾ ಪ್ರೇರಣೆಯಾಗಿದ್ದು, ಶಿಕ್ಷಣವೇ ಸಮಾನತೆಯ ಏಕೈಕ ಮಾರ್ಗ ಎಂದು ಪ್ರತಿಪಾದಿಸಿದ ಅವರ ಮಾತನ್ನು ಪರಿಪಾಲಿಸಬೇಕು ಎಂದರು. ಮಾಜಿ ಶಾಸಕ ಡಾ. ವೀರಣ್ಣ ಚರಂತಿಮಠ ಮಾತನಾಡಿ, ಡಾ. ಬಿ.ಆರ್.ಅಂಬೇಡ್ಕರ್ ಅವರ ಸಾಮಾಜಿಕ, ಆರ್ಥಿಕ ಮತ್ತು ಕಾನೂನಿಗೆ ಸಂಬಂದಿಸಿದ ದೃಷ್ಟಿಕೋನವು ಎಲ್ಲರನ್ನೊಳಗೊಂಡ ಸಮಾಜ ನಿರ್ಮಾಣ ಮತ್ತು ರಾಷ್ಟ್ರದ ಉತ್ತಮ ಆಡಳಿತದ ದಿಕ್ಕಿನೆಡೆಗೆ ನಮಗೆ ಯಾವಾಗಲೂ ಮಾರ್ಗದರ್ಶನ ನೀಡುತ್ತದೆ.

ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಅಡಿಪಾಯದ ಮೇಲೆ ನವ ಭಾರತವನ್ನು ಕಟ್ಟಿದ ಮಹಾನ್ ಚೇತನ ಡಾ. ಬಿ.ಆರ್.ಅಂಬೇಡ್ಕರ ಎಂದು ಹೇಳಿದರು.

ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮುತ್ತಣ್ಣ ಬೆಣ್ಣೂರ, ರಾಜು ನಾಯ್ಕರ, ಯಲ್ಲಪ್ಪ ಬೇಂಡಿಗೇರಿ, ಬಸವರಾಜ ಕಟಗೇರಿ, ಅರುಣ ಲೋಕಾಪುರ, ದುಂಡಪ್ಪ ಏಳಮ್ಮಿ, ಶಿವಾನಂದ ಟವಳಿ, ಬಸವರಾಜ ಯಂಕಂಚಿ, ಬಸವರಾಜ ಹುನಗುಂದ, ಯಲ್ಲಪ್ಪ ನಾರಾಯಣಿ, ಸವಿತಾ ಲೆಂಕೆನ್ನವರ, ಶೋಭಾ ರಾವ್, ಪ್ರೇಮಾ ಅಂಬಿಗೇರ, ಶೀವಲಿಲಾ ಸಂಬಣ್ಣವರ, ಸ್ಮೀತಾ ಪವಾರ, ಗುಂಡುರಾವ ಶಿಂಧೆ, ಮಾನೇಶ ಅಂಬಿಗೇರ, ಗಿರೀಶ ಭಾಂಡಗೆ ಸೇರಿದಂತೆ ಅನೇಕ ಕಾರ್ಯಕರ್ತರು ಭಾಗವಹಿಸಿದ್ದರು.

ಕಾರ್ಯಕರ್ಮಕ್ಕೂ ಮುಂಚೆ ನಗರದಲ್ಲಿರುವ ಬಾಬಾಸಾಹೇಬ ಡಾ. ಅಂಭೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಲಾಯಿತು.

# ಲವ್ ಜಿಹಾದ್ ಹಿಂದೆ ಕಾಂಗ್ರೆಸ್ ಸಹಕಾರ: ಬಸವರಾಜ ಆರೋಪ

• **ಮಲ್ಲಮ್ಮ ನುಡಿವಾರ್ತೆ ಕೊಪ್ಪಳ**

ಎರಡು ದಿನಗಳ ಕೆಳಗೆ ಕೊಪ್ಪಳ ಭಾಗದಲ್ಲೂ ಸಹ ಲವ್ ಜಿಹಾದ್ ಪ್ರಕರಣ ಬೆಳಕಿಗೆ ಬಂದಿದ್ದು ಇದರ ಹಿಂದೆ ಕಾಂಗ್ರೆಸ್ ಪಕ್ಷದ ಸಹಕಾರ ಇದೆ ಎಂದು ಭಾರತೀಯ ಜನತಾ ಪಕ್ಷದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಬಸವರಾಜ್ ಕ್ಯಾವಟರ್ ಗಂಭೀರವಾಗಿ ಆರೋಪ ಮಾಡಿರುತ್ತಾರೆ.

ತಾಲೂಕಿನ ಅಳವಂಡಿ ಗ್ರಾಮದ ಮುಸ್ತಫಾ ಖಾದ್ರಿ ಎಂಬಾತ ನಡೆಸುತ್ತಿರುವ ಲವ್ ಜಿಹಾದ್ ಹಿಂದೆ ಕಾಂಗ್ರೆಸ್ ಪಕ್ಷ ಹಾಗೂ ಸರಕಾರ ನೇರವಾಗಿ ಕೆಲಸ ಮಾಡುತ್ತಿದೆ ಎಂದು ಕೊಪ್ಪಳ ಲೋಕಸಭಾ ಕ್ಷೇತ್ರದ ನಿಕಟಪೂರ್ವ ಅಭ್ಯರ್ಥಿ ಬಸವರಾಜ ಕ್ಯಾವಟರ್ ಆರೋಪಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಡಾ.ಬಸವರಾಜ ಕ್ಯಾವಟರ್ ರಾಜ್ಯದಲ್ಲಿ ಹಿಂದು ಯುವತಿಯರನ್ನು ಟಾರ್ಗೇಟ್ ಮಾಡಿ, ಖೆಡ್ಡಾಕ್ಕೆ ಕೆಡವಲಾಗುತ್ತಿದೆ.

ಪ್ರೀತಿ ಪ್ರೇಮ ನಂಬಿಕೆ ವಿಶ್ವಾಸ ಎಂಬ ಹೆಸರಲ್ಲಿ ಬಲೆಗೆ ಬಿಳಿಸಿಕೊಂಡು ಯುವತಿಯರ



ಜೀವನ ಹಾಳು ಮಾಡುವ ದಂಧೆ ಬೇರೂರಿದೆ. ಕಳೆದೊಂದು ವಾರದ ಅವಧಿಯಲ್ಲಿ ಹುಬ್ಬಳ್ಳಿಯಲ್ಲಿ ಮೂರು ಹಾಗೂ ಕೊಪ್ಪಳದಲ್ಲಿ ಒಂದು ಲವ್ ಜಿಹಾದ್ ಪ್ರಕರಣ ಬೆಳಕಿಗೆ ಬಂದಿದೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಲೆಲ್ಲಾ ಇಂತಹ ಪ್ರಕರಣ ಯತೇಚ್ಛವಾಗಿ ಬೆಳಕಿಗೆ ಬರುತ್ತಿವೆ. ಈ ಮೂಲಕ ಕಾಂಗ್ರೆಸ್ ನಾಯಕರ ಕೃಪಾ ಕಟಾಕ್ಷದಿಂದಲೇ ಲವ್ ಜಿಹಾದ್ ಪ್ರಕರಣ ನಡೆಯುತ್ತಿವೆ. ಕೊಪ್ಪಳ ತಾಲೂಕಿನಲ್ಲಿ ನಡೆದ ಲವ್ ಜಿಹಾದ್ ನಡೆಸಿದ ಯುವಕನ ಬಳಿ ವಶ ಪಡೆದ ಎರಡು

ಮೊಬೈಲ್‌ಗಳ ಪೈಕಿ ಒಂದು ಮೊಬೈಲ್ ನಲ್ಲಿ 3 ಸಾವಿರ ಫೋ–ಟೋ, 6 ಸಾವಿರ ವಿಡಿಯೋ ಮತ್ತು ಇನ್ನೊಂದು ಮೊಬೈಲ್ ನಲ್ಲಿ 4 ಸಾವಿರ ಫೋಟೋ ಹಾಗೂ 3700 ವಿಡಿಯೋ ಇದ್ದು, ಈ ಎಲ್ಲಾ ವಿಡಿಯೋ ಮತ್ತು ಫೋಟೋದಲ್ಲಿ ಹಿಂದು ಸಮುದಾಯದ 16 ಮಂದಿ ಮಹಿಳೆಯರ ಅಶ್ಲೀಲ ಚಿತ್ರಗಳು ಮತ್ತು ವಿಡಿಯೋ ಸಂಗ್ರಹಿಸಿಕೊಂಡಿರುವುದು ಕಂಡುಬಂದಿದೆ.

ಇಷ್ಟೆಲ್ಲಾ ಸಾಕ್ಷ್ಯಾಧ್ಯಾರಗಳಿದ್ದರೂ ಪೊಲೀಸರು ಯುವಕನನ್ನು ಬಂಧಿಸದಿರುವುದು ಜಿಲ್ಲೆಯ ಕಾಂಗ್ರೆಸ್ ಶಾಸಕ– ಸಂಸದರ ಒತ್ತಡಕ್ಕೆ ಪೊಲೀಸರು ಮಣಿದಂತೆ ಕಾಣುತ್ತಿದೆ. ಹೀಗಾಗಿ ಹಿಂದು ಯುವತಿಯರು ಇನ್ನಾದರೂ ಜಾಗೃತಗೊಳ್ಳಬೇಕು. ಇಂತಹ ಲವ್ ಜಿಹಾದ್ ಷಡ್ಯಂತ್ರಕ್ಕೆ ಬಲಿಯಾಗಿ ಜೀವನ ಹಾಳು ಮಾಡಿಕೊಳ್ಳಬಾರದು. ಅಲ್ಲದೆ, ಇಂತಹ ವಿಚಾರದಲ್ಲಿ ಮತ ಬ್ಯಾಂಕ್ ಗೋಸ್ಕರ ಕಾಂಗ್ರೆಸ್ ಸರಕಾರ, ತುಷ್ಟಿಕರಣ ನೀತಿ ಅನುಸರಿಸುವುದು ಸರಿಯಲ್ಲ.

ಲವ್ ಜಿಹಾದ್ ನಡೆಸುತ್ತಿರುವ ಆರೋಪಿಗಳ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಮುಖಂಡರಾದ ಬಸವರಾಜ ಕ್ಯಾವಟರ್ ಅವರು ಒತ್ತಾಯಿಸಿದ್ದಾರೆ.

# ಪಿಂಜಾರ್ ಹೆಬ್ಬಾಳ್ ಹೆಗ್ದಲ್ ಗ್ರಾಮದಲ್ಲಿ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಜಯಂತಿ



• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

ಹಗರಿಬೊಮ್ಮನಹಳ್ಳಿ ತಾಲೂಕಿನ ಪಿಂಜಾರ್ ಹೆಗ್ಡಳ್ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ, ಮಹಾನ್ ಮಾನವತಾವಾದಿ ಡಾ ಬಿ ಆರ್ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು. ಊರಿನ ಅಂಬೇಡ್ಕರ ಕಾಲೋನಿಯ ಶ್ರೀ ಮದಗಮ್ಮ ದೇವಸ್ಥಾನದ ಆವರಣದಲ್ಲಿ ಬೆಳಿಗ್ಗೆಯಿಂದಲೇ ಸಂಭ್ರಮ ಸಡಗರದಿಂದ ಮಕ್ಕಳು ಯುವಕರು ಹಿರಿಯರು ಸೇರಿ ತಳಿರು ತೋರಣಗಳಿಂದ ಸಿಂಗರಿಸಿ ವಿಶೇಷ ಪೂಜೆ ಸಲ್ಲಿಸುವುದರ ಮುಖಾಂತರ ಅಂಬೇಡ್ಕರ ಅವರಿಗೆ ಗೌರವ ನಮನಗಳನ್ನು ಸಲ್ಲಿಸಿದರು,

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಊರಿನ ಹಿರಿಯ ಹೋರಾಟಗಾರ ಆರ್ ಎಸ್ ಬಸವರಾಜ್ ಅವರು ಅಂಬೇಡ್ಕರ ಅವರು ವರ್ಣ ಬೇಧ ವ್ಯವಸ್ಥೆಯ ಸಂದರ್ಭದಲ್ಲಿ ನೋವು ಅವಮಾನ ಸಂಕಷ್ಟಗಳನ್ನು ಎದುರಿಸಿ ಉತ್ತಮ ಶಿಕ್ಷಣ ಪಡೆದು ದೇಶಕ್ಕೆ ಸಂವಿಧಾನ ನೀಡಿದರು. ಶಿಕ್ಷಣ ಸಂಘಟನೆ ಹೋರಾಟ ಎನ್ನುವ ಆದರ್ಶಗಳನ್ನು ಎಲ್ಲರೂ ಪಾಲಿಸೋಣ ಎಂದರು,

ಹಾಗೆಯೇ ಹಿರಿಯ ಮುತ್ಸದ್ದಿ ನಾಯಕರಾದ ಹೆಗ್ಡಳ್ ರಾಮಣ್ಣ ನವರು ಗ್ರಾಮೀಣ ಭಾಗದಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಉತ್ತಮ ಶಿಕ್ಷಣ ಕೊಡಿಸಬೇಕು. ಯುವಕರು ದುಶ್ಚಟಗಳಿಂದ ದೂರವಿದ್ದು ಉತ್ತಮ ಸಮಾಜ ನಿರ್ಮಾಣ ಮಾಡಬೇಕು.ಹಳ್ಳಿಗಳಲ್ಲಿ ಪರಸ್ಪರ ಸೌಹಾರ್ದತೆಯಿಂದ ಬದುಕಬೇಕೆಂದು ಸಲಹೆ ನೀಡಿದರು,

ಈ ಸಂದರ್ಭದಲ್ಲಿ ಊರಿನ ಯುವ ಮುಖಂಡ ವಿಜಯನಗರ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಸದಸ್ಯರು, ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ ಕೃಷ್ಣಪ್ಪ ಸ್ಥಾಪಿತ 47/74–75 )ಹಗರಿಬೊಮ್ಮನಹಳ್ಳಿ ತಾಲೂಕು ಅಧ್ಯಕ್ಷರಾದ ಪರಶುರಾಮ್ ಹೆಗ್ಡಳ್ ಹಾಗೂ ಊರಿನ ಹಿರಿಯರಾದ ಮಹದೇವಪ್ಪ ವೆಂಕಟಾಪುರ ಹನುಮಂತಪ್ಪ ಕುರುಬರ ಸಣ್ಣದುರುಗಪ್ಪ, ಸಮಾಜದ ಯುವಕರಾದ ನಾಗರಾಜ, ಪ್ರಭು, ನಾಗರಾಜ, ಪುಟ್ಟು, ಚಿರಂಜೀವಿ, ಶಿವಲಿಂಗ,ಮಾಯಜ್ಜ, ವೀರೇಶ್, ಮುತ್ತುರಾಜ್, ಯುವರಾಜ್, ಶ್ವೇತಾ, ಸ್ವಾತಿ, ಕಮಲ, ಅನಿಲ, ಸುನಿಲ ಪಾಂಡು ಮತ್ತು ಮಹಿಳೆಯರು ಮಕ್ಕಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು,

# ಎನ್.ಎಸ್.ಎಸ್ ವಿಶೇಷ ಶಿಬಿರಕ್ಕೆ ಚಾಲನೆ: ವಿದ್ಯಾರ್ಥಿನಿಯರಲ್ಲಿ ಸೇವಾ ಮನೋಭಾವ ಬೆಳೆಸುವ ಸಂಕಲ್ಪ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯದ ಎನ್.ಎಸ್.ಎಸ್ ಘಟಕ 1 ಮತ್ತು ಘಟಕ 2ರ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿನ ವಾರ್ಷಿಕ ವಿಶೇಷ ಶಿಬಿರವನ್ನು ಏಪ್ರಿಲ್ 15ರಿಂದ 21ರವರೆಗೆ ಕೊರ್ಲಗುಂದಿ ಗ್ರಾಮದಲ್ಲಿ ಆಯೋಜಿಸಲಾಗಿದ್ದು, ಇಂದು ಬುಧವಾರ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷೆ ಶ್ರೀಮತಿ ಕಾತ್ಯಾಯಿನಿ ಎಂ. ಮರಿದೇವಯ್ಯ ನೆರವೇರಿಸಿ, ಮಹಾತ್ಮ ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಧ್ವಜಾರೋಹಣ ಮಾಡುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಎನ್.ಎಸ್. ಎಸ್ ಸ್ವಯಂಸೇವಕಿಯರು ಗೀತೆಯನ್ನು ಸಮೂಹವಾಗಿ ಹಾಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೂಪಂ ಸತೀಶ ಅವರು ಮಾತನಾಡಿ, “ವಿದ್ಯಾರ್ಥಿನಿಯರು ಎನ್.ಎಸ್.ಎಸ್ ಮೂಲಕ ನಿಸ್ವಾರ್ಥ ಸೇವಾ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಅವರ ವಿದ್ಯಾರ್ಥಿ ಜೀವನ ಸಾರ್ಥಕವಾಗುತ್ತದೆ” ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಕಾತ್ಯಾಯಿನಿ




ಎಂ. ಮರಿದೇವಯ್ಯ ಅವರು ಎನ್.ಎಸ್. ಎಸ್ ಇತಿಹಾಸವನ್ನು ಸ್ಮರಿಸಿ, “1969ರ ಸೆಪ್ಟೆಂಬರ್ 24ರಂದು ಡಾ. ವಿ.ಕೆ.ಆರ್.ವಿ ರಾವ್ ಅವರಿಂದ ರಾಷ್ಟ್ರೀಯ ಸೇವಾ ಯೋಜನೆ ಆರಂಭಗೊಂಡಿತು. ಎನ್.ಎಸ್. ಎಸ್ ಚಿಹ್ನೆಯಲ್ಲಿನ ಕೆಂಪು, ಬಿಳಿ ಮತ್ತು ನೀಲಿ ಬಣ್ಣಗಳು ಕ್ರಮವಾಗಿ ತ್ಯಾಗ, ಶಾಂತಿ ಹಾಗೂ ಸಮೃದ್ಧಿಯನ್ನು ಪ್ರತಿನಿಧಿಸುತ್ತವೆ. ಈ ಮೌಲ್ಯಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿನಿಯೂ ಜೀವನದಲ್ಲಿ ಅಳವಡಿಸಿಕೊಂಡು ದೇಶ ನಿರ್ಮಾಣದಲ್ಲಿ ಪಾಲ್ಗೊಳ್ಳಬೇಕು” ಎಂದು ಕರೆ ನೀಡಿದರು.

ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ವಿಜಯೇಂದ್ರ ರಂಗ ಪ್ರಸಾದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಎನ್.ಎಸ್.ಎಸ್ ಚಟುವಟಿಕೆಗಳ ಮೂಲಕ ವಿದ್ಯಾರ್ಥಿನಿಯರಲ್ಲಿ ವ್ಯಕ್ತಿತ್ವ ವಿಕಾಸ, ನಾಯಕತ್ವ ಗುಣ, ಹೊಂದಾಣಿಕೆ ಮನೋಭಾವ, ಪ್ರಜಾಸತ್ತಾತ್ಮಕ ಚಿಂತನೆ ಹಾಗೂ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಐಕ್ಯೂಎಸಿ ಸಂಯೋಜಕಿ ಡಾ. ಸೈದಾ ಕೆ. ತನ್ವೀರ್, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಜಿ. ಅಶೋಕ, ವಾಣಿಜ್ಯ ಶಾಸ್ತ್ರ ವಿಭಾಗದ ಉಪನ್ಯಾಸಕಿಯರಾದ ಡಾ. ಕೆ. ಅನುಪಮಾ ಮತ್ತು ಕೆ. ಮಮತಾ, ಸಸ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಬಸವರಾಜೇಶ್ವರಿ ಹೆಚ್, ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಸುವರ್ಣಮ್ಮ ಡಿ, ಉಪನ್ಯಾಸಕಿ ಡಾ. ಮಂಗಳ ಬಿ.ಎನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಎನ್.ಎಸ್.ಎಸ್ ಸ್ವಯಂಸೇವಕಿ ರಾಜೇಶ್ವರಿ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿ ಚೈತನ್ಯ ಕಾರ್ಯಕ್ರಮವನ್ನು ನಿರೂಪಿಸಿದರು. ಸಹ ಕಾರ್ಯದರ್ಶಿ ಅನುಷಾ ವಂದಿಸಿದರು.

ಇದಾದ ಬಳಿಕ ಗಣ್ಯರು ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಸಂದೇಶ ನೀಡಿದರು. ನಂತರ ವಿದ್ಯಾರ್ಥಿನಿಯರು, ಅಧ್ಯಾಪಕರು ಹಾಗೂ ಎನ್.ಎಸ್.ಎಸ್ ಅಧಿಕಾರಿಗಳು ಕೊರ್ಲಗುಂದಿ ಗ್ರಾಮದಲ್ಲಿ ಜಾಥಾ ನಡೆಸಿ, ಘೋಷಣೆಗಳ ಮೂಲಕ ಶಿಕ್ಷಣದ ಮಹತ್ವ, ಆರೋಗ್ಯ ಮತ್ತು ಪರಿಸರ ಸಂರಕ್ಷಣೆ ಕುರಿತು ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಿದರು. ಸಾಮಾಜಿಕ ಬದ್ಧತೆ ಮತ್ತು ರಾಷ್ಟ್ರಸೇವೆಯ ಮನೋಭಾವವನ್ನು ವಿದ್ಯಾರ್ಥಿನಿಯರಲ್ಲಿ ಬೆಳೆಸುವ ಉದ್ದೇಶದಿಂದ ಆಯೋಜಿಸಿದ ಶಿಬಿರದ ಮೊದಲ ದಿನದ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

## ಪಿಂಚಣಿ ತಾರತಮ್ಯ: ಪ್ರತಿಭಟನೆ




**ವಿಜಯಪುರ:** ನಗರದಲ್ಲಿ ಪಿಂಚಣಿ ತಾರತಮ್ಯ ಖಂಡಿಸಿ ನಿವೃತ್ತ ನೌಕರರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು...

ಹೌದು ರಾಷ್ಟ್ರೀಯ ಸಂಘರ್ಷ ಸಮೀತಿ ವಿಜಯಪುರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಇಪಿಎಸ್ ಪಿಂಚಣಿ 95 ಜಾರಗೊಳಿಸುವಂತೆ ಆಗ್ರಹಿಸಿದರು, ಮಾಸಿಕ ಕನಿಷ್ಠ 7500 ಪಿಂಚಣಿ ಹಾಗೂ ತುಟ್ಟಿಭತ್ಯೆ,ಉಚಿತ ವೈದ್ಯಕೀಯ ಸೌಲಭ್ಯ, ವಿಧವೆಯರಿಗೆ ಶೇಕಡ 100 ಪಿಂಚಣಿ ಹಾಗೂ ಯೋಜನೆ ವಂಚಿತರಿಗೆ 5000 ಪಿಂಚಣಿ ನೀಡುವಂತೆ ಆಗ್ರಹಿಸಿದರು.

## ವೀರಶೈವ ಲಿಂಗಾಯತ ರಡ್ಡಿ ಸಂಘ ಪುನರ್ರಚನೆ



**ಬಳ್ಳಾರಿ:** ಬರುವ ಮೇ 10 ರಂದು ನಗರದಲ್ಲಿ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಭಕ್ತಿಭಾವ, ಸಡಗರ ಸಂಭ್ರಮದಿಂದ ಆಚರಿಸಲು ವೀರಶೈವ ಲಿಂಗಾಯತ ರಡ್ಡಿ ಸಂಘ ನಿರ್ಧರಿಸಿದೆ.

ನಗರದ ಬಸವ ಭವನದಲ್ಲಿ ನಿನ್ನೆ ಸಂಜೆ ಸಭೆ ಸೇರಿದ ಸಂಘದ ಸದಸ್ಯರು, ಮುಖಂಡರು, ಕಳೆದ ಹಲವು ವರ್ಷಗಳಿಂದ ಆಚರಿಸಿಕೊಂಡು ಬರುತ್ತಿರುವ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಕಳೆದ ವರ್ಷದಂತೆ ಜಿಲ್ಲಾಡಳಿತದ ಸಹಕಾರದಿಂದ ವಿಜೃಂಭಣೆಯಿಂದ ಆಚರಿಸಲು ಚರ್ಚಿಸಿದರು.

ಈ ಕುರಿತಂತೆ ಜಿಲ್ಲಾಡಳಿತ ಕರೆಯುವ ಪೂರ್ವ ಸಿದ್ದತಾ ಸಭೆಯಲ್ಲಿ. ಮಲ್ಲಮ್ಮ ಜಯಂತಿ ಸಮಾರಂಭವನ್ನು ನಗರದ ಬಸವ ಭವದಲ್ಲಿ ಅಂದು ಸಂಜೆ ಹಮ್ಮಿಕೊಳ್ಳೋಣ. ಅದಕ್ಕೂ ಮುನ್ನ ಮಲ್ಲಮ್ಮಳ ಭಾವಚಿತ್ರದ ಮೆರವಣಿಗೆಯನ್ನು ದುರ್ಗಮ್ಮ ದೇವಸ್ಥಾನದಿಂದ ಬಸವ ಭವನದ ವರೆಗೆ ಹಮ್ಮಿಕೊಳ್ಳಬೇಕು. ಇದಕ್ಕಾಗಿ ಹಳ್ಳಿಗಳಿಗೆ ತೆರಳಿ ರಡ್ಡಿ ಸಮುದಾಯದ ಜನತೆ ಜಯಂತಿ ಕಾರ್ಯಕ್ರಮಕ್ಕೆ ಬರುವಂತೆ ಕರಪತ್ರ ನೀಡಿ ಆಹ್ವಾನಿಸಲು. ಸಮಾರಂಭದ ನಂತರ ಪ್ರಸಾದ ವ್ಯವಸ್ಥೆ ಮಾಡಲು ತೀರ್ಮಾನಿಸಿತು.

ಉಳಿಸಂತೆ ಉಪನ್ಯಾಸ, ಸನ್ಮಾನ ಮೊದಲಾದವುಗಳ ಬಗ್ಗೆ ಜಿಲ್ಲಾಡಳಿತ ಕರೆಯುವ ಸಭೆಯಲ್ಲಿ ಅಂತಿಮಗೊಳಿಸಲು ನಿರ್ಣಯಿಸಲಾಯ್ತು.

ಇದೇ ವೇಳೆ ವೀರಶೈವ ಲಿಂಗಾಯತ ರಡ್ಡಿ ಸಂಘವನ್ನು ಪುನರ್ವರಚಿಸಲು ನಿರ್ಧರಿಸಿ. ಹಳಬರು ಮತ್ತು ಹೊಸಬರನ್ನು ಒಳಗೊಂಡ ಈ ಮುಂದಿನ. 21 ಹೆಸರುಗಳನ್ನು ಅಂತಿಮಗೊಳಿಸಲಾಯ್ತು. ಡಾ ಎಸ್.ಜೆ.ವಿ.ಮಹಿಪಾಲ್, ಎನ್.ಅಯ್ಯಪ್ಪ, ಜೆ.ಎಸ್.ನೇಪಾಕ್ಷಪ್ಪ, ರವಿರಾಜಶೇಖರ ರಡ್ಡಿ, ಜೋಳದರಾಶಿ ಬಸವರಾಜ್, ಟಿ.ವಿರುಪಾಕ್ಷಗೌಡ, ಸಂಗನಕಲ್ಲು ಯುಧಿಷ್ಟರ, ಬಿ.ರವೀಂದ್ರನಾಥ, ಕೆರೆನಳ್ಳಿ ಚಂದ್ರಶೇಖರ, ಅಭಿನಂದನ್ ಪಾಟೀಲ್, ಎನ್ ಚಂದ್ರಶೇಖರ ಯರಂಗಳಿ, ಡಾ.ಭಾಗ್ಯಲಕ್ಷ್ಮಿ, ಟಿ.ಎಂ.ಜಡೇಶ, ಮಿಂಚೇರಿ ನರೇಂದ್ರಬಾಬು, ಸಂಜೀವರಾಯನಕೋಟೆ ಸೋಮನಗೌಡ, ಕೆ.ನಂದೀಶ್ ಕುಮಾರ್, ಬಣಾಪುರ ನಾಗರಾಜ, ಜೆ.ಬಿ.ಸುಮಂಗಳ, ಗೋನಾಳ್ ಮುರಹರಗೌಡ, ಹೆಚ್.ಮಹಾಬಲೇಶ್ವರಗೌಡ, ಹೆಚ್.ವೀರಭದ್ರಗೌಡ ಇವರನ್ನು ಅಂತಿಮಗೊಳಿಸಿದ್ದು. ಇವರಲ್ಲಿ ಪದಾಧಿಕಾರಿಗಳನ್ನು ಕೆಲ ದಿನಗಳಲ್ಲಿ ಆಯ್ಕೆ ಮಾಡಲು ಸೂಚಿಸಿದೆ.

ಇನ್ನು ಮಹಿಳಾ, ಘಟಕ, ಬಳ್ಳಾರಿ ತಾಲೂಕು ಘಟಕ, ಯುವ ಘಟಕಗಳನ್ನು ರಚಿಸುವ ಬಗ್ಗೆಯೂ ಚರ್ಚಿಸಲಾಯ್ತು. ಸಭೆಯಲ್ಲಿ ರಡ್ಡಿ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

## ಕೋಟ್ಯಂತರ ವೆಚ್ಚದಲ್ಲಿ ನಿರ್ಮಿಸಿದ ವಿಮಾನ ನಿಲ್ದಾಣ ನಿಂತರೆ ಅನ್ಯಾಯ ಅಗಲ್ಲವೇ

**ಬೆಂಗಳೂರು:** ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ, ಉಡಾನ್ ಯೋಜನೆಯಡಿ ಹೊಸದಾಗಿ ನಿರ್ಮಿಸಲಾದ ಅಥವಾ ಮೇಲ್ದರ್ಜೆಗೇರಿಸಲಾದ ಹಲವು ವಿಮಾನ ನಿಲ್ದಾಣಗಳಲ್ಲಿ ಕಾರ್ಯಾಚರಣೆ ಸ್ಥಗಿತವಾಗಿದ್ದು ಇದು ಕೇಂದ್ರ ಸರ್ಕಾರ ಮಾಡಿದ ಹಣ ದುರ್ಬಳಕೆ ಅಲ್ಲವೇ ಎಂದು



ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ ಖಂಡ್ರೆ ಪ್ರಶ್ನಿಸಿದ್ದಾರೆ.

ಮಾಜಿ ಸಂಸದ ಭಗವಂತ ಖೂಬಾ ಹೇಳಿಕೆಗೆ ತಿರುಗೇಟು ನೀಡಿರುವ ಅವರು, ಬೀದರ್ ನಾಗರಿಕ ವಿಮಾನ ನಿಲ್ದಾಣಕ್ಕೆ ಮಾಡಿದ ವೆಚ್ಚ ಕೇವಲ 20 ಕೋಟಿ ಮಾತ್ರ. ಕಾಂಗ್ರೆಸ್ ಕಾರ್ಯಕಾಲದಲ್ಲೇ ಬೀದರ್ ನಲ್ಲಿ ವಾಯುಪಡೆಯ ವಿಮಾನ ನಿಲ್ದಾಣ ಇತ್ತು. ಉಡಾನ್ ಅನುದಾನ ನಿಲ್ಲಿಸಿದ ಕಾರಣ ವಿಮಾನ ಯಾನ ಸ್ಥಗಿತವಾಯಿತು. ಹಾಗಾದರೆ ಹವಾಯಿ ಚಪ್ಪಲಿ ಹಾಕಿದ ಬಡವರೂ ಹವಾಯಿ ಜಹಾಜ್ ನಲ್ಲಿ ಪ್ರಯಾಣಿಸಬಹುದು ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ ಕೇಂದ್ರ ಎನ್.ಡಿ.ಎ. ಸರ್ಕಾರ ಬಡವರಿಗೆ ಮಾಡಿದ ದ್ರೋಹವಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಸ್ಥಗಿತಗೊಂಡಿದ್ದ ನಾಗರೀಕ ವಿಮಾನಯಾನ ಪುನಾರಂಭಿಸಲು ತಾವು ಪ್ರಯತ್ನ ಮಾಡಿದ ಫಲವಾಗಿ ಒಂದು ವರ್ಷ ಆ ಸೇವೆ ಮುಂದುವರಿಯಿತು. ಸ್ವತಃ ಮಾಜಿ ಸಂಸದರೇ ಹಲವು ಬಾರಿ ಈ ವಿಮಾನಯಾನ ಸೇವೆಯ ಪ್ರಯೋಜನ ಪಡೆದಿದ್ದಾರೆ. ಬಡವರ ಹಣ ದುರುಪಯೋಗ ಎನ್ನುವ ಅವರು ಸೇವೆ ಬಳಸಿಕೊಂಡಿದ್ದಾದರೂ ಏಕೆ ಎಂದು ತಿರುಗೇಟು ನೀಡಿದ್ದಾರೆ. ಉತ್ತರ ಪ್ರದೇಶದಲ್ಲಿ ಕೂಡ ಉಡಾನ್ ಅಡಿ ಆರಂಭವಾದ ಹಲವು ವಿಮಾನ ನಿಲ್ದಾಣಗಳು ಕಾರ್ಯಾಚರಣೆ ನಿಲ್ಲಿಸಿವೆ. ಅದೇ ರೀತಿ ದೇಶದ ಹಲವು ವಿಮಾನ ನಿಲ್ದಾಣಗಳಲ್ಲಿ ವಾಣಿಜ್ಯ ವಿಮಾನಗಳ ಹಾರಾಟ ನಿಂತು ಹೋಗಿದೆ. ಹಾಗಾದರೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಕಟ್ಟಿದ ವಿಮಾನ ನಿಲ್ದಾಣಗಳ ಗತಿ ಏನು. ಅದು ಪಾಳು ಬಿದ್ದರೆ ದೇಶದ ತೆರಿಗೆದಾರರ ಹಣ ವ್ಯರ್ಥವಾಗುವುದಿಲ್ಲವೇ ಎಂದು ಪ್ರಶ್ನಿಸಿರುವ ಈಶ್ವರ ಖಂಡ್ರೆ, ಕ್ಷುಲ್ಲಕ ರಾಜಕೀಯಕ್ಕಾಗಿ ಅಭಿವೃದ್ಧಿಗೆ ಮಾರಕವಾಗುವಂತಹ ಹೇಳಿಕೆ ನೀಡುವುದನ್ನು ಭಗವಂತ ಖೂಬಾ ಇನ್ನಾದರೂ ನಿಲ್ಲಿಸಲಿ ಎಂದು ತಾಕೀತು ಮಾಡಿದ್ದಾರೆ.

# ಬಸ್ ನಿಲ್ದಾಣದಲ್ಲಿ ಸ್ವಚ್ಛತೆ ಮರೀಚಿಕೆ




> ಗಂಗಾವತಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ತ್ಯಾಜ್ಯ ಎಸೆಯಲು ಪ್ರತ್ಯೇಕ ವ್ಯವಸ್ಥೆಯಿಲ್ಲ. ನಿತ್ಯ ಸಾವಿರಾರು ಪ್ರಯಾಣಿಕರು ಇಲ್ಲಿಗೆ ಬರುತ್ತಾರೆ. ಬಸ್‌ಗಾಗಿ ಕಾಯುವ ಪ್ರಯಾಣಿಕರಿಗೆ ಕೂಡಲು ಆಸನಗಳಿಲ್ಲ. ಗಂಟೆಗಟ್ಟಲೆ ನಿಂತುಕೊಂಡು ಶೌಚಾಲಯದ ಗಬ್ಬು ವಾಸನೆ ಸಹಿಸಿಕೊಳ್ಳಬೇಕಾದ ಅನಿವಾರ್ಯತೆಯಿದೆ. ನಿಲ್ಲಿಸುವುದು ಸಾಮಾನ್ಯವಾಗಿದೆ.
>
> **–ಶರಣಪ್ಪ ಪಾಟೀಲ,** ಅಧ್ಯಕ್ಷ ಜನಕಲ್ಯಾಣ ವೇದಿಕೆ, ಯಲಬುರ್ಗಾ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ನಿತ್ಯ ಸ್ವಚ್ಛತೆಯಿಂದ ಇರಬೇಕಿದ್ದ ಬಸ್ ನಿಲ್ದಾಣಗಳು ಹಾಗೂ ತಂಗುದಾಣಗಳು ಜಿಲ್ಲೆಯಾದ್ಯಂತ ಅಸ್ವಚ್ಛತೆಯ ತಾಣಗಳಾಗಿವೆ. ಎಲ್ಲೆಂದರಲ್ಲಿ ಖಾಸಗಿ ವಾಹನಗಳ ನಿಲುಗಡೆ, ಶೌಚಾಲಯಗಳ ಗಬ್ಬು ವಾಸನೆ ಸಾಮಾನ್ಯ ಎನ್ನುವಂತಾಗಿದೆ.

ಜಿಲ್ಲಾ ಕೇಂದ್ರದಲ್ಲಿರುವ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಎಲ್ಲೆಂದರಲ್ಲಿ ಕಸ ಬೀಸಾಡಲಾಗಿದೆ. ವಾಹನಗಳ ನಿಲುಗಡೆಗೆ ನಿರ್ದಿಷ್ಟ ಜಾಗ ನಿಗದಿ ಮಾಡಿದ್ದರೂ ಸಾರ್ವಜನಿಕರು ಅದನ್ನು ಬಿಟ್ಟು ಬೇರೆ ಕಡೆಯೂ ವಾಹನಗಳನ್ನು ನಿಲ್ಲಿಸುತ್ತಿದ್ದಾರೆ. ತಿಂಡಿ, ತಿನಿಸುಗಳನ್ನು ತಿಂದು ಪ್ಲ್ಯಾಸ್ಟಿಕ್ ತ್ಯಾಜ್ಯವನ್ನು ನಿಲ್ದಾಣದಲ್ಲಿಯೇ ಬೀಸಾಡಲಾಗುತ್ತಿದೆ. ಸಾರ್ವಜನಿಕರು



ಹಣ ಪಾವತಿಸಿ ಶೌಚಾಲಯ ಬಳಕೆ ಮಾಡಿದರೂ ಅವುಗಳ ಸ್ವಚ್ಛತೆಯೇ ಇರುವುದಿಲ್ಲ.

**ಬಸ್ ನಿಲ್ದಾಣ ಧಾನ್ಯಗಳ ರಾಶಿ ಹಾಕುವ ತಾಣ!**

**ಮುನಿರಾಬಾದ್:** ಕೊಪ್ಪಳ ತಾಲ್ಲೂಕಿನ ಹೋಬಳಿ ಕೇಂದ್ರವಾದ ಹಿಟ್ನಾಳ ಗ್ರಾಮದಲ್ಲಿ ಏಳು ವರ್ಷಗಳ ಹಿಂದೆ ನಿರ್ಮಿಸಲಾಗಿರುವ ಬಸ್ ನಿಲ್ದಾಣ ರಾಶಿಗಳನ್ನು ಹಾಕುವ ತಾಣವಾಗಿದೆ. ಇಲ್ಲಿನ ನಿಲ್ದಾಣದಲ್ಲಿ ಬಸ್ ಬರುವುದಿಲ್ಲ. ಬಸ್‌ಗಳು ನಿಲ್ಲಬೇಕಿದ್ದ ಜಾಗದಲ್ಲಿ ಮೆಕ್ಕೆಜೋಳ, ಭತ್ತ ಸೇರಿದಂತೆ ವಿವಿಧ ಬೆಳೆಗಳನ್ನು ಒಣಗಲು ಹಾಕಿರುತ್ತಾರೆ. ಹಿಟ್ನಾಳ –ಹುಲಿಗಿ ರಸ್ತೆ ಸುಧಾರಣೆಯ ನಂತರ ಬಸ್ ನಿಲ್ದಾಣಕ್ಕೆ ಸಂಪರ್ಕಿಸುವ ರಸ್ತೆ ಸಮರ್ಪಕವಾಗಿಲ್ಲ. ಕಾರಟಗಿಯಲ್ಲಿಯೂ ಇದೇ ಪರಿಸ್ಥಿತಿ. ಸುಸಜ್ಜಿತ ಬಸ್ ನಿಲ್ದಾಣ ಬಸ್‌ಗಳನ್ನು ಕಾಣದೇ, ತ್ಯಾಜ್ಯ ಹಾಕಲು, ರೈತರ ಸರಕು ಒಣಗಿಸಲು, ಕಾಲಹರಣ ಮಾಡುವವರಿಗೆ ಆಶ್ರಯ ತಾಣವಾಗಿದೆ. ಇನ್ನೊಂದೆಡೆ ಇದೀಗ ನೂತನ ಬಸ್ ನಿಲ್ದಾಣದ ನಿರ್ಮಾಣ ಕಾಮಗಾರಿ ನಡೆದಿದೆ. ನಿರ್ಮಾಣ ಮುಗಿದು ಜನರು ಸುರಕ್ಷಿತವಾಗಿ ಪ್ರಯಾಣಿಸಲು ವರ್ಷದವರೆಗೆ ಕಾಯಬೇಕಿದೆ. ಕಾರಟಗಿಯಲ್ಲಿ ಬಸ್ ಎಲ್ಲಿ ನಿಲ್ಲುತ್ತವೆಯೋ ಅದೇ ಬಸ್ ನಿಲ್ದಾಣ ಎನ್ನುವಂತಾಗಿದೆ.

## ಕನಸು ನನಸು ಮಾಡುವುದೇ ಧ್ಯೇಯವಾಗಬೇಕು

• **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ಪಟ್ಟಣದ ನಿವೇದಿತ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಡಾಕ್ಟರ್ ಬಿ.ಆರ್ ಅಂಬೇಡ್ಕರ್ 135ನೇ ಜಯಂತಿ ಕಾರ್ಯಕ್ರಮ ಹಾಗೂ 2025–26ನೇ ಸಾಲಿನ ಮಕ್ಕಳ ಫಲಿತಾಂಶದ ಸಮಾರಂಭವನ್ನು ಮಂಗಳವಾರ ಅದ್ದೂರಿಯಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ನಿವೇದಿತ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಗುರುಗಳು ಹೆಚ್ ಮರಿಯಪ್ಪ ಮಾತನಾಡಿ, ಸಮಾನತೆಯ ಕನಸನ್ನು ನಿಜಗೊಳಿಸಲು ಹೋರಾಡಿದ ಮಹಾನಾಯಕ, ಅನ್ಯಾಯದ ವಿರುದ್ಧ ಧ್ವನಿ ಎತ್ತಿದ ದಿಟ್ಟ ಶಕ್ತಿ ಡಾ. ಬಿ ಆರ್ ಅಂಬೇಡ್ಕರ್ ಅವರ ಚಿಂತನೆಗಳು ನಮ್ಮ ಬದುಕಿಗೆ ಬೆಳಕಿನ ದಾರಿ, ಅವರ ಸಂದೇಶಗಳು ಸದಾ ಪ್ರೇರಣೆಯ ಮೂಲವಾಗಲಿ. ಶಿಕ್ಷಣದ ಮೂಲಕ ವ್ಯಕ್ತಿಯ ಶಕ್ತಿಯನ್ನು ಹೆಚ್ಚಿಸಿ, ಹಕ್ಕುಗಳಿಗಾಗಿ ಸಂಘಟನೆಯ ಅಗತ್ಯವನ್ನು ತಿಳಿಸಿ, ಸತ್ಯ ಮತ್ತು ನ್ಯಾಯಕ್ಕಾಗಿ ಹೋರಾಟ ನಡೆಸುವ ಪಾಠವನ್ನು



ನೀಡಿದ ಮಹಾನಾಯಕ, ಅವರ ಆದರ್ಶಗಳನ್ನು ಅನುಸರಿಸುವುದೇ ಅವರಿಗೆ ನಿಜವಾದ ಗೌರವವಾಗಿದೆ.

ಸಮಾನತೆ, ಸ್ವಾತಂತ್ರ್ಯ ಮತ್ತು ಬಾಂಧವ್ಯದ ಮೌಲ್ಯಗಳು ನಮ್ಮ ಜೀವನದಲ್ಲಿ ಅರಳಲಿ. ಶಿಕ್ಷಕರು ಮತ್ತು ಪೋಷಕರ ಅಂಬೇಡ್ಕರ್ ಕನಸನ್ನು ನನಸಾಗಿಸುವುದು ನಿಮ್ಮ ಧ್ಯೇಯವಾಗಬೇಕು. ನೀವು ಜೀವನದಲ್ಲಿ ದೊಡ್ಡ ಯಶಸ್ಸನ್ನು ಪಡೆಯಲು ಬಯಸಿದರೆ ನಿಮ್ಮ ಗುರಿಯನ್ನು ನಿಗದಿಪಡಿಸಿ ಅದರ ಜೊತೆ ದೊಡ್ಡ ಕನಸುಗಳನ್ನು ಕಾಣಬೇಕು. ಎಲ್ಲ ಸಾಧಕರು ಕಠಿಣ ಪರಿಶ್ರಮ ಪಟ್ಟು ಗುರಿಯನ್ನು ಸಾಧಿಸುತ್ತಾರೆ. ಪ್ರತಿಯೊಬ್ಬರೂ ಸಾಧನೆ ಮಾಡುವ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕು' ನಿರಂತರ ಕಲಿಕೆಯಿಂದ ಜ್ಞಾನವನ್ನು ವೃದ್ಧಿಸಬೇಕು.

## ಸಂವಿಧಾನದ ಮೂಲಕ ಸಮಾನತೆ

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

ಸಂವಿದಾನದ ಮೂಲಕ ಸಮಾಜದಲ್ಲಿ ಸಮಾನತೆ ತರಲು ಶ್ರಮಿಸಿದ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳುವಂತಾರಾಗಬೇಕು ಎಂದು ಹುಡಾ ಅದ್ಯಕ್ಷ ಹೆಚ್.ಪಿ.ಅಮರ್ ನಾಥ್ ತಿಳಿಸಿದರು.

ಅವರ ನಗರದ ಹುಡಾ ಕಛೇರಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ರವರ 135 ನೇ ಜನ್ಮದಿನದ ಅಂಗವಾಗಿ ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು. ನಮ್ಮ ಸರ್ಕಾರ ಪಂಚ ಗ್ಯಾರಂಟಿಗಳ ಮೂಲಕ ಬಡವರಿಗೆ ವಿವಿಧ ವರ್ಗದವರಿಗೆ ಹಂಚುತ್ತಿದೆ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳೇ ನಡೆದಿಲ್ಲ ಎಂದು ಟೀಕಿಸುವವರು ಇದನ್ನು ಅಭಿವೃದ್ಧಿಯ ಒಂದು ಮುಖ ಎಂದು ಅರಿತುಕೊಳ್ಳಲಿ ಅಂಬೇಡ್ಕರ್ ರವರು ಯಾವುದೇ ಜಾತಿಗೆ ಸಿಮೀತವಾಗದೆ ಪ್ರತಿಯೋಬ್ಬ ನಿರ್ಗತಿಕರಿಗೂ ಸಂಮಿದಾನದ ಮೂಲಕ ನ್ಯಾಯ ದೊರಕಿಸಿಕೊಟ್ಟರು.



ಅಂಬೇಡ್ಕರ್ ರವರ ಚಿಂತನೆಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾಜ ಸಮಾನತೆ ದಿಕ್ಕಿನಲ್ಲಿ ಸಾಗುತ್ತದೆ. ಈ ದಿನ ದೇಶ ಸುಭದ್ರ ಸ್ಥಿತಿಯಲ್ಲಿ ಇರುವುದಕ್ಕೆ ಅಂಬೇಡ್ಕರ್ ರವರ ಸಂಮಿದಾನವೇ ಮುಖ್ಯ ಕಾರಣ ಎಂದರು.

ಕಾರ್ಯಕ್ರಮದಲ್ಲಿ ಹುಡಾ ಸದಸ್ಯ ಕುಮಾರ್, ಸದಸ್ಯ ಕಾರ್ಯದರ್ಶಿ ಹೆಚ್.ಕೆ.ರೇಣುಕಾ, ನೌಕರರಾದ ಸುರೇಶ್ ಬಾಬು, ಸುನೀತಾ ಸೇರಿದಂತೆ ಅನೇಕರು ಹಾಜರಿದ್ದರು.

## ಬಸವ ಜಯಂತಿ ಉತ್ಸವ: ಪದಾಧಿಕಾರಿಗಳ ಆಯ್ಕೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಬುಧವಾರ ನಗರದಲ್ಲಿ ನಡೆದ ಬಸವ ಭಕ್ತರ ಸಭೆಯಲ್ಲಿ ಬಸವ ಜಯಂತಿ ಉತ್ಸವ 2026ರ ಅಂಗವಾಗಿ ವಿವಿಧ ಸಮಿತಿಗಳ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಮಹಿಳಾ ಸಮಿತಿಯ ಅಧ್ಯಕ್ಷರಾಗಿ ಡಾ. ದೇವಿಕಾ ನಾಗೂರೆ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಜ್ಞಾನದೇವಿ ಬಬಛಡೆ, ಕಾರು ರ್‍ಯಾಲಿ ಸಮಿತಿಯ ಅಧ್ಯಕ್ಷರಾಗಿ ವೀರಶೆಟ್ಟಿ ಖ್ಯಾಮಾ, ಪ್ರಧಾನ ಕಾರ್ಯದರ್ಶಿಯಾಗಿ ಸಂತೋಷ ಪಾಟೀಲ ಮತ್ತು ಕಾರ್ಯದರ್ಶಿಯಾಗಿ ಅರುಣ ಹೊತಪೇಟ, ಮೆರವಣಿಗೆ ಸಮಿತಿಯ ಗೌರವಾಧ್ಯಕ್ಷರಾಗಿ ಸುರೇಶ ಸ್ವಾಮಿ, ಅಧ್ಯಕ್ಷರಾಗಿ ಧನರಾಜ ಹಂಗರಗಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ವಿಕ್ರಮ ಮುದಾಳೆ, ವೇದಿಕೆ ಸಮಿತಿಯ ಅಧ್ಯಕ್ಷರಾಗಿ ದಾನಿ ಬಾಬುರಾವ, ಪ್ರಧಾನ ಕಾರ್ಯದರ್ಶಿಯಾಗಿ ವಿರೇಶ ಸ್ವಾಮಿ ಮತ್ತು ಕಾರ್ಯದರ್ಶಿಗಳಾಗಿ ಸಿದ್ಧಾರೂಢ ಭಾಲ್ಕೆ ಹಾಗೂ ಯೋಗೇಶ ಸಿರಿಗೆರೆ ನೇಮಕಗೊಂಡಿದ್ದಾರೆ.







ಪ್ರಚಾರ ಸಮಿತಿಯ ಅಧ್ಯಕ್ಷರಾಗಿ ಆನಂದ ದೇವಪ್ಪ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಶಿವಕುಮಾರ ಸ್ವಾಮಿ, ಪ್ರಸಾದ ಸಮಿತಿಯ ಅಧ್ಯಕ್ಷರಾಗಿ ವಿಶ್ವನಾಥ ಕಾಜಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ರೇವಣಸಿದ್ಧಯ್ಯ ಸ್ವಾಮಿ (ರಾಜು ಸ್ವಾಮಿ), ನಗರ ಅಲಂಕಾರ ಸಮಿತಿಯ ಅಧ್ಯಕ್ಷರಾಗಿ ರಾಜೇಂದ್ರಕುಮಾರ ಮಣಿಗೆರೆ, ಪ್ರಧಾನ ಕಾರ್ಯದರ್ಶಿಯಾಗಿ ಹಣಮಂತ ಬುಳ್ಳಾ ಹಾಗೂ ಕಾರ್ಯದರ್ಶಿಗಳಾಗಿ ವರದಯ್ಯ ಸ್ವಾಮಿ ಗಾದಗಿ ಮತ್ತು ಸಂಜುಕುಮಾರ ಮೂಲಗೆ, ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾಗಿ ಪ್ರೊ. ಸಂಗ್ರಾಮ ಎಂಗ್ಳೆ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ರೇವಣಪ್ಪ ಮೂಲಗೆ ನೇಮಕೊಂಡಿರುವರು.

ಗೌರವ ಸಲಹೆಗಾರರಾಗಿ ಶಿವಶರಣಪ್ಪ ವಾಲಿ, ಬಿಜಿ ಶೆಟಕಾರ, ಚಂದ್ರಶೇಖರ ಪಾಟೀಲ ಗಾದಗಿ, ಗುರುನಾಥ ಕೊಳ್ಳೂರ, ವೈಜಿನಾಥ ಕಮಠಾಣೆ, ಡಾ. ಶೈಲೇಂದ್ರ ಕೆ. ಬೆಲ್ದಾಳೆ, ಬಾಬು ವಾಲಿ, ಶರಣಪ್ಪ ಮಿಠಾರೆ, ಕುಶಾಲರಾವ ಪಾಟೀಲ ಖಾಜಾಪೂರ, ಬಸವರಾಜ ಪಾಟೀಲ ಹಾರೂರಗೇರಿ, ರಾಜೇಂದ್ರಕುಮಾರ ಗಂದಗೆ, ಸುರೇಶ ಚನ್ನಶೆಟ್ಟಿ ಹಾಗೂ ಜೈರಾಜ ಖಂಡ್ರೆ ಆಯ್ಕೆಯಾದರು.

ಸಂಚಾಲಕರಾಗಿ ಡಾ. ಶಿವಶಂಕರ ಟೋಕರೆ ನೇಮಕಗೊಂಡಿದ್ದಾರೆ.

## ರಾಜ್ಯ ಮಟ್ಟದ 2 ಮತ್ತು 3ನೇ ರ್‍ಯಾಂಕ್‌ಗಳ ಸಾಧನೆ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2025–26ನೇ ಸಾಲಿನ ದ್ವಿತೀಯ ಪಿ.ಯು.ಸಿ ಫಲಿತಾಂಶವನ್ನು ಪ್ರಕಟಿಸಿದ್ದು. ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಶ್ರೀರಾಮನಗರ, ವಡ್ಡರಹಟ್ಟಿ ಹಾಗೂ ಗಂಗಾವತಿಯ ಶ್ರೀ ವಿದ್ಯಾನಿಕೇತನ ಪಿ.ಯು. ಕಾಲೇಜ್ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಅತ್ಯುತ್ತಮ ಫಲಿತಾಂಶವನ್ನು ದಾಖಲಿಸಿದೆ.


ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ ಒಟ್ಟು 1774 ವಿದ್ಯಾರ್ಥಿಗಳಲ್ಲಿ 1767 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕಶೇ 99.60ರಷ್ಟು ಫಲಿತಾಂಶವನ್ನು ಸಾಧಿಸಿದ್ದು,1463 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ, 295 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ,9 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.


ವಿಜ್ಞಾನ ವಿಭಾಗದಲ್ಲಿ ಕಾಲೇಜಿನ ವಿದ್ಯಾರ್ಥಿನಿಯಾದ ಕುಮಾರಿ ಯು. ಶ್ರಾವಣಿ 600ಕ್ಕೆ 598 ಅಂಕಗಳನ್ನು ಪಡೆಯುವ ಮೂಲಕ ಅಮೋಘ ಸಾಧನೆಗೈದು ರಾಜ್ಯ ಮಟ್ಟದಲ್ಲಿ 2ನೇ ರ್‍ಯಾಂಕ್ ಗಳಿಸಿದ್ದಾಳೆ.ಅದೇರೀತಿ ಕುಮಾರ ಅರ್ಜುನ್ ಗ್ವಾಟಗಿ 600ಕ್ಕೆ 597 ಅಂಕಗಳನ್ನು ಗಳಿಸುವ ಮೂಲಕ ರಾಜ್ಯ ಮಟ್ಟದಲ್ಲಿ 3ನೇ ರ್‍ಯಾಂಕ್ ಪಡೆದಿದ್ದು,ಕುಮಾರಿ ವೈಷ್ಣವಿ 600ಕ್ಕೆ 595 ಅಂಕಗಳನ್ನು ಗಳಿಸುವ ಮೂಲಕ ರಾಜ್ಯ ಮಟ್ಟದಲ್ಲಿ 5ನೇ ರ್‍ಯಾಂಕ್





ಪಡೆಯುವ ಮೂಲಕ ಅತ್ಯುತ್ತಮ ಸಾಧನೆಗೈದಿದ್ದಾರೆ. ಅದೇರೀತಿ ವಾಣಿಜ್ಯ ವಿಭಾಗದಲ್ಲಿ ಕುಮಾರಿ ವಂದನಾ ಜೈನ್ 600ಕ್ಕೆ 594 ಅಂಕಗಳನ್ನು ಪಡೆಯುವ ಮೂಲಕ ರಾಜ್ಯ ಮಟ್ಟದಲ್ಲಿ 7ನೇ ರ್‍ಯಾಂಕ್ ಗಳಿಸುವ ಮೂಲಕ ಅತ್ಯುತ್ತಮ ಸಾಧನೆಯನ್ನು ಗೈದಿದ್ದಾಳೆ.

ಕಲ್ಯಾಣ ಕರ್ನಾಟಕ ಶಿಕ್ಷಣದಲ್ಲಿ ಹಿಂದುಳಿದಿದೆ







ಎಂಬ ಹಣೆ ಪಟ್ಟಿಯನ್ನು ತೊಲಗಿಸುವ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ

ಶ್ರೀ ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯು ಅಂತರರಾಷ್ಟೀಯ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ರಾಜ್ಯ ಮಟ್ಟದ ಅತ್ಯುನ್ನತ್ತ ರ್‍ಯಾಂಕ್‌ಗಳನ್ನು ಪಡೆದು ಅಮೋಘ ಸಾಧನೆಯನ್ನುಗೈದಿದೆ.

ಸತತಉತ್ತಮ ಫಲಿತಾಂಶ ದಾಖಲಿಸುವ ಮೂಲಕ ಶ್ರೇಷ್ಠ ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ನೆಕ್ಕಂಟಿ ಸೂರಿಬಾಬು ಅವರು ಹೃತ್ಪೂರ್ವಕವಾಗಿ ಅಭಿನಂದಿಸಿದ್ದಾರೆ.

ಅದೇರೀತಿ ಸೂಕ್ತ ಮಾರ್ಗದರ್ಶನ ನೀಡಿದ ಕಾಲೇಜಿನ ಪ್ರಾಂಶುಪಾಲರಾದ ಜಗನ್ನಾಥರಾವ್, ಮಲ್ಲಿಕಾರ್ಜುನ್, ಉಮಾಶಂಕರ್, ಅಭಿಷೇಕ್.ಡಿ.ಎಮ್ ಅವರನ್ನು ಹಾಗೂ ಉಪನ್ಯಾಸಕ ವೃಂದವನ್ನು ಅಭಿನಂದಿಸಿ,ಉತ್ತಮ ಸಹಕಾರ ಹಾಗು ಪ್ರೋತ್ಸಾಹ ನೀಡಿದ ಎಲ್ಲ ಪಾಲಕರಿಗೆ, ಸಮಾಜದಗುರು–ಹಿರಿಯರಿಗೆ, ಮಾಧ್ಯಮ ಮಿತ್ರರಿಗೆ ಸಂಸ್ಥೆಯ ಅಧ್ಯಕ್ಷರು ಧನ್ಯವಾದಗಳನ್ನು ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಶ್ರೀ ವಿದ್ಯಾನಿಕೇತನ ಪಿಯು ಕಾಲೇಜಿನ ಆವರಣದಲ್ಲಿ ತಿಳಿಸಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)